ಸನ್ಮಾರ್ಗದರ್ಶಿ ಗ್ರಂಥಮಾಲೆ—೬

ಶ್ರೀನಿವಾಸ ಸಂಕೀರ್ತನಂ

(ದಿವಂಗತ ಸರಗೂರು ವೆಂಕಟವರದಾರ್ಯರಿಂದ)

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ,
ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು,
ಮಾಳಮಡ್ಡಿ, ಧಾರವಾಡ,

ಬೆಲೆ ೦—೬—೦

ಸನ್ಮಾರ್ಗದರ್ಶಿಗ್ರಂಥಮಾಲೆ ೬.

ಶ್ರೀನಿವಾಸ ಸಂಕೀರ್ತನಂ.

(ದಿವಂಗತ, ಸರಗೂರು ವೆಂಕಟವರದಾರ್ಯರಿಂದ)

ಬೆಲೆ ೦—೬—೦

ವಿಶೇಷ ಸೂಚನೆ.

ಈ ಕವಿಗಳಿಂದ ವಿರಚಿತವಾದ ವ್ಯಾಘ್ರಾಚಲಮಹಾತ್ಮೆ, ರಾಧಾಕೃಷ್ಣವಿಲಾಸ, ಇತರ ಕೀರ್ತನೆಗಳು-ಸಹ ನಮ್ಮ ಕೈಸೇರಿವೆ. ಅವನ್ನು ಅವಕಾಶಾನುಸಾರವಾಗಿ ನಾವು ಸನ್ಮಾರ್ಗದರ್ಶಿಗೆ ಕಾಣಿಕೆ ಪುಸ್ತಕವಾಗಿ ಪ್ರಕಟಿಸಬೇಕೆಂದಿರುವೆವು. ನಮ್ಮ ಸಂಕಲವು ವರ್ಗಣೇದಾರರ ಪ್ರೋತ್ಸಾಹ-ಆಶ್ರಯಗಳಮೇಲೆ ಅವಲಂಬಿಸಿರುವದರಿಂದ ಈಗಲೇ ನಾವು ಹೆಚ್ಚಾಗಿ ಹೇಳಲಾರದವರಾಗಿರುವೆವು.

ಇತಿ-ಹಿತೈಷಿಣಿ.

ಬೆಂಗಳೂರು ಸಿಟಿ

ಕ್ಯಾಕ್ಸ್‌ಟನ್ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು.

1924.

||ಶ್ರೀಃ||

ಶ್ರೀನಿವಾಸ ಸಂಕೀರ್ತನಂ*

ರಾಗ–ನಾಟಿ–ರೂಪಕತಾಳ.

ಜಯಕೃಷ್ಣ ಜಗದೀಶ ಜಯಶಶಿಕುಲಾಧೀಶ| ಜಯ ವಿನುತವಾಣೀಶ ಜಯ ರುಕ್ಮಿಣೀಶ || ಜಯಜಯ || ಪ ||

ಕಮಲಭವನುತಿಪಾತ್ರ | ಕಮಲಸಖನಿಭಗಾತ್ರ || ಕಮಲರಿಪು ಸಮವಕ್ತ್ರ ಕಮಲದಳನೇತ್ರ || ಕಮಲ ಕರಧೃತಗೋತ್ರ (?) ಕಮನೀಯ ಸುಚರಿತ್ರ | ಕಮಲಾರಿ ಧರಮಿತ್ರ ಕಮಲಾಕಲತ್ರ || ೧ || ನಂದಗೋಪಕುಮಾರ ನವನೀತ ದಧಿಚೋರ | ಸುಂದರೀ ಕುಲಜಾರ ಸ್ಮರಸಮರ ಶೂರ || ಕಂದರ್ಪಸಹಕಾರ | ಕಾಮಿನೀಪರಿವಾರ | ಬೃಂದಾವನ ವಿಹಾರ | ಭಕ್ತಮಂದಾರ || ೨ || ಧರಣೀಧರಾಸ್ಫಾಲ ದಮನಕರ ನಿಜಲೀಲ ! ನರಪೌತ್ರಪರಿಪಾಲ | ನವ್ಯವನಮಾಲಾ | ಮುರನರಕ ಶಿಶುಪಾಲ | ಮುಖದನುಜಕುಲಕಾಲ | ವರವ್ಯಾಘ್ರಗಿರಿಲೋಲ ವರದಾರ್ಯ ವಿಠಲಾ || ೩ ||

ರಾಗ–ಮಧ್ಯಮಾವತಿ–ಆದಿತಾಳ.

ನಮೋಸ್ತುತೇ ಕಮಲಾಪತೇ || ಪ || ನಮೋಸ್ತುತೇ ಶತಧೃತಿ ಶಂಕರ ಮುಖ ವಿಮಾನಚರಗಣ ವಂದಿತ ಚರಣ || ಅನುಪಲ್ಲವಿ ||

ವಾರಣ ಭೀತಿನಿ ವಾರಣ ಭವಜಲ ತಾರಣ ದೈತ್ಯವಿದಾರಣ ಶುಭಗುಣ || ೧ || ಪಂಕಜಲೋಚನ ಪಂಕವಿಮೋಚನ ಪಂಕಜಾಲಯಾಲಂಕೃತ ಗಾತ್ರ || ೨ || ಶರಣಾಗತಜನ ಭರಣಾಧೃತರಥ ಚರಣಾ ಫಣಿಗಿರಿ ವರದ ವಿಠಲ || ೩ ||

---

* ಈ ಕೀರ್ತನೆಗಳನ್ನು, ರಚಿಸಿದವರು ಕರ್ಣಾಟಕ ನಂದಿನೀ ಸತೀ ಹಿತೈಷಿಣಿಯರಿಂದ ಉಲ್ಲೇಖಿಸಲ್ಪಟ್ಟಿರುವ ತಪತೀ ಕಲ್ಯಾಣ ಕರ್ತೃಗಳಾದ ದಿವಂಗತ ಸರಗೂರು ವೆಂಕಟವರದಾಚಾರ್ಯರು. ಇವರು ರಚಿಸಿರುವ ಎಷ್ಟೋ ಕೀರ್ತನೆಗಳೂ ಯಕ್ಷಗಾನಗಳೂ ಇನ್ನೂ ನಮ್ಮ ಕೈಸೇರಲಿಲ್ಲ, ಈಗ ದೊರತಿರುವಷ್ಟನ್ನು ಇದರಲ್ಲಿ ಕ್ರಮಶಃ ಪ್ರಕಟಿಸುವೆವು.

(ಮನಸ್ಸಿಗೆ ಹಿತೋಪದೇಶ)

3. ರಾಗ–ಶಂಕರಾಭರಣ–ಅಟ್ಟತಾಳ.

ಮನವೇ| ಚಿಂತಿಸು ಹರಿಯ| ಮುರಾರಿಯ ‖ ಪ ‖ ಮನವೆ, ಚಿಂತಿಸು | ಮಾಯಾ ಮನುಜಾಕಾರವತಾಳ್ದ | ಸನಕಾದಿ ಸನ್ಮುನಿ ವಿನುತ ಪದ | ವನಜಾತ ಯುಗಳನು | ಮನವೆ ‖ ಅನು ‖

ಸ್ಮರವಿರಿಂಚಿನಯ ಪಿತನ–ಗೌರೀವರ–ಪುರುಹೂತರಿಗೆ ತಾತನ| ರತಿದೇವಿ–ಸರಸತಿ ಯರ ಮಾವನ| ಶ್ರೀರಮಣನ ‖ ಸರಸಿಜಾಸನನಿಗೆ ಕರುಣಿಸುವೇ | ದವ | ಗಿರಿಯನೆಗಹಿ | – | ವಿಶ್ವಂಭರೆಯ ದಾಡೆಯೊಳೆತ್ತಿ ‖ – ‖ ತರಳಗಭಯವನಿತ್ತು | ಮೂರಡಿ ಧರೆಯಬೇಡುತ ತರಿದು ನೃಪರನು| ದುರುಳ ರಾವಣ ಹರಣ ನೀಲಾಂಬರನ ಯದುವರ ತುರುಗವಾಹನ ‖ ೧ ‖

ನಿಗಮಾಂತ ಗೋಚರನ – ನಿತ್ಯಾನಂದ – ಸುಗುಣಗಣಾರ್ಣವನ | ಸಜ್ಜನರಿಗೆ – ಸುಗತಿಯಪಾಲಿಪನ ‖ ಸುರಪಾಲನ ‖ ನಿಗಮ ಚೋರನ ಕೊಂದು, ನಗವ ಬೆನ್ನೊಳು ಪೊತ್ತು | ಜಗವನುದ್ಧರಿಸಿ ನರ ಮೃಗದರೂಪವತಾಳಿ ‖ ಜಗವನಳೆದನ ಭೃಗುಜ, ಶಾಖಾ | – | ಮೃಗವವಧಿಸಿ ಹಲ ನೇಗಿಲನು ಪಿಡಿದುಗುರು ಕೊನೆಯಿಂ ನಗುನನೆಗಹಿದ,ನಿಗಮನುತ ಕಲಿಯುಗದ ವೈರಿಯ ‖ ಮನವೆ ‖ ೨ ‖

ಪುಲಿಯ ಸಂಹರಿಸಿದನ–ಮಾಂಡವ್ಯಗೆ – ಒಲಿದು ಪೂಜೆಯ ಕೊಂಬನ | ಕುಂಭಜಶಾಪ – ಕಲುಷವ ಕಳೆದವನ | ವ್ಯಾಘ್ರಾಚಲ ‖ ದಲಿ ನಿಂತು ಭಕ್ತರ ಸಲಹುವ ಕಾರುಣ್ಯ ನಿಲಯ ಸಜ್ಜನ ಮನೋ ನಿಲಯ ಶ್ರೀವಾಸನ ‖ ಜಲಜಬಾಂಧವ ಕುಲಪವಿತ್ರನ | ಜಲಜನೇತ್ರನ ಜಲಜಗಾತ್ರನ | ವಿಲಸಿತಾಂಬುಜ ಮಾಲಭಕ್ತರಿಗೊಲಿವ ಶ್ರೀ ವರದಾರ್ಯವಿಠಲನ ‖ ಮನವೆ ‖ ೩ ‖

4. ರಾಗ–ಖರಹರಪ್ರಿಯ.

ಶ್ರೀ ನಿಳಯನನು ಕೊಂಡಾಡು–ಮಾನಸ ಶುಭಸಂಧಾನನ ನೋಡು ‖ ಪ ‖ ಸಾರವಿಲ್ಲದಿಹ ಸಂಸಾರದಿ ಬಲು ಘೋರತಾಪಗಳು ತೋರಿದಾಗ ‖ ಭೂರಿ ಸೌಖ್ಯಗಳ ಬೀರುತಿರ್ಪ ಕಾರುಣೀ ಕನ್ನ ವಿಚಾರಮಾಡು ‖ ೧ ‖ ಸೋಹಮೆಂಬ ಘನಮೋಹಾಂಧತೆಯಲ್ಲಿ | ದೇಹಿಗಳ್ಗೆ ಕಡುದ್ರೋಹವ ಗೈವ | ಬಾಹಿರಂಗೆ ಯಮಬಾಧೆಯಲ್ಲಿ ತ್ರಾಹಿತ್ರಾಹಿ ಯೆನೆತಾಳ್ವರೇನು ‖ ೨ ‖ ಸಾಪರಾಧಗಳ ಕಾಪಾಡುವ

ಧೊರೆ ಶ್ರೀಪುಲಿ ಬೆಟ್ಟದ ಭೂಪನೇಸರಿ | ಆಪದ್ರಕ್ಷಕನ ಶ್ರೀಪಾದಗಳನು ಜ್ಞಾಪಕಗೊಂಡನು ತಾಪಗೂಡಿ || ೩ ||

5. ರಾಗ—ಸುರಟಿ.

ರಾಮನ ನೆನೆಮನವೆ-ಹೃದಯಾ - ರಾಮನನೆನೆಮನವೇ || ಪ || ರಾಮನ ಜಗದಭಿರಾಮನ ಮೇಘ ಶ್ಯಾಮನ ಸದ್ಗುಣ ಧಾಮನ ಸೀತಾ || ಅನು || ದಶರಥ ನಂದನನಾ| ಧರಣಿಯೊಳಸುರರ ಕೊಂದವನ ಪಶುಪತಿ ಚಾಪವ ಖಂಡಿಸಿಮುದದಿಂ ವಸುಮತೀಸುತೆಯಂ ಒಲಿದೊಡಗೂಡಿದ || ರಾಮನ || ತಂದೆಯ ಮಾತಿನಲಿ-ವನಕ್ಕೈ - ತಂದು ಸರಾಗದಲಿ || ಬಂದವಿರಾಧನ ಕೊಂದು ನಿಶಾಚರಿಯಂದವಳಿದು ಖಳ ವೃಂದವ ಸವರಿದ || ೨ || ಸೀತೆಯನರಸುತಲಿ - ಕಬಂಧನ - ಮಾತನು ಸರಿಸುತಲಿ || ವಾತನ ಮಗನೊಳು ಪ್ರೀತಿಯಿಟ್ಟು ಪುರುಹೂತನ ಸುತನಂ ಘಾತಿಸಿದಾತನ || ರಾಮನ || ೩ || ತರಣಿ ತನಯನಿಂದ - ಕಪಿಗಳ - ಕರಸಿ ವಿಲಾಸದಿಂದ || ತರುಣಿಯನರಸಲು | ಮರುತನ ಮಗನಿಗೆ | ಬೆರಳುಂಗುರವನು ಗುರುತಾಗಿತ್ತನ || ರಾಮನ || ೪ || ಧರಣಿಜೆಯನು ಕಂಡು - ವನವನು - ಮುರಿದು ಗುರುತುಗೊಂಡು | ಅರಿಪುರವನು ಸುಟ್ಟುರುಪಿದ ವಾನರ ವರನಿಗೆ ಸೃಷ್ಟಿಪ ಪದವಿತ್ತಾತನ || ರಾಮನ || ಶರನಿಧಿಯನು ಕಟ್ಟಿ - ಶತೃನಿಕರವನು ಹುಡಿಗುಟ್ಟಿ || ಶರಣನ ಲಂಕೆಗೆ ಧೊರೆಯನು ಮಾಡಿ| ಶಿರಿಯನಯೋಧ್ಯೆಗೆ ಕರೆತಂದಾತನೆ|| ರಾಮನ || ೬ || ಧರಣಿಯ ಪಾಲಿಸುತ - ಧರ್ಮದ - ಸರಣಿಯ ಲಾಲಿಸುತ | ಶರಣಾಭರಣ ಪುಲಿಗಿರಿಯೊಳು ನೆಲಸಿದ ವರದವಿಠಲಧೊರೆ ಪರಮೋದಾರನ || ೭ ||

6. ರಾಗ—ವರಾಳಿ—ರೂಪಕ.

ಶ್ರೀನಿವಾಸನಂಘ್ರಿಕಮಲ ಧ್ಯಾನಮಾಡಿರೋ | ಅನುಮಾನಬೇಡಿರೋ ||ಪ|| ಹಮ್ಮನುಳಿದು ಬೊಮ್ಮಪಿತನ ನೆಮ್ಮಿಭಜಿಸಿರೋ - ದುಷ್ಕರ್ಮ ತ್ಯಜಿಸಿರೋ || ೧ || ಹೆಣ್ಣು ಮಣ್ಣು ಹೊನ್ನು ಸ್ಥಿರವಿದೆನ್ನಬೇಡಿರೋ | ನಿಜವನ್ನು ನೋಡಿರೋ || ೨ || ಈತ ಜಗನ್ನಾಥ ಸೌಖ್ಯದಾತ ಕಾಣಿರೋ ಪ್ರಖ್ಯಾತ ಕೇಳಿರೋ || ೩ || ಕಾಟಕರ್ಮಲೂಟಿಗೈಯ್ವ ತೋಟಗಾರನ - ಈ ಸಾಟಿಗಾಣೆನಾ || ೪ || ಶಿಲೆಗೆ ದಿವ್ಯ ಲಲನಾರೂಪವೊಲಿದುಕೊಟ್ಟನ| ಶಾಪವಳಿದು ಬಿಟ್ಟನ || ೫ || ಮಾನಿನಿಯಾ ಮಾನ ಜೋಪಾನಗೈದನ - ಸ್ವಾಧೀನನಾದನ || ೬ || ಪಿಡಿದ ಮುನಿಯ ಬಿಡಿಸಿ ಪುಲಿಯ ಬಡಿದಧೀರನನ ಕೈಪಿಡಿಗೆ ಬಾರನ || ೭ || ಮರ್ತ್ಯರಿವನ ಭಕ್ತಿಯಲ್ಲಿ ರಕ್ತಿಪಡು

ವರು ಭಕ್ತಿಮುಕ್ತಿಪಡೆವರು || ೮ || ಶರಣ ಜನರ ಪೊರೆವ ದೊರೆಯು ವರದ ವಿಠಲನೆ - ಶ್ರೀಧರಣೀಜಟಿಲನೆ || ೯ ||

7. ರಾಗ—ಅಹರೀ—ಆಟತಾಳ.

ನಾರಾಯಣಯೆಂಬ ನಾಮವ ನೇಮದಿ ಪಾರಾಯಣ ಮಾಡಿರೋ || ಪಾರವಿಲ್ಲದ ಭವ ಪಾರಾವಾರದೊಳುತ್ತಾರಕವಿದು ನೋಡಿರೋ || ಪ || ನೀರಬೊಬ್ಬುಳಿಕೆಯು ತೋರುವ ರೀತಿ ಶರೀರನೆಚ್ಚಿರಬೇಡಿರೋ | ಸಾರುವ ಮೃತ್ಯುವದಾರಿಗೆ ಗೋಚರ ಧಾರಿಣಿಯಲಿ ಪೇಳಿರೋ || ೧ || ದೇಹಕ್ಕೆ ನೆಲೆಯಿಲ್ಲ ಮೋಹಕೆ ಕೊನೆಯಿಲ್ಲ ಸಾಹಸ ಪಡಬೇಡಿರೋ | ದೇಹಗೇಹಂಗಳನೂಹಿಸಿ ಸಂಗಡ ಬಾಹವೆಂದಿರಬೇಡಿರೊ || ೨ || ದೇಹರಕ್ಷಣೆಗೆಂದು ಗೇಹವನಿರ್ಮಿಸಿ ನೇಹದಿ ನಾರಿಯೊಳು | ಗೇಹಿನಿಯೆಂದತಿ ಮೋಹದಿ ಕೆಡುವನು ದೇಹಿಸಂಸಾರದೊಳು || ೩ || ನಾರಿಯು ಮೋಹನಾಕಾರಿಯು ಲೋಕಕೆ ಮಾರಿಯಲ್ಲವೆ ಕೇಳಿರೋ | ನಾರಿಯಾರಿಗೆ ಮಕ್ಕಳಾರಿಗೆ ಜೀವಿತದಾರಿಯೆಲ್ಲಿಗೆ ಪೇಳಿರೋ || ೪ || ಮಂಚಬಾರದು ತನ್ನ ಮಡದಿಯು ಬಾರಳು ಕಂಚುಕನ್ನಡಿ ಬಾರದೀ || ಸಂಚಿತ ದ್ರವ್ಯದಿ ಕೊಂಚವು ಬಾರದು ವಿಸಂಚಿಗೆ ದೇಹವಿದು || ೫ || ಹಲವು ಸಾಹಸದಿಂದ ಘಳಿಸಿದರ್ಥಗಳೆಲ್ಲ ಬಳಸಿನ ಬಾಂಧವರು | ನಿಳಯದೊಳುಂಡುಟ್ಟು ನಲಿದು ನಂಟರು ಎಂದು ಒಲಿದುಕೊಂಡಾಡುವರು || ೬ || ಅರ್ಥವಿದ್ದವನ ಸಮರ್ಥನೀತನ ಜನ್ಮಸಾರ್ಥಕವೆಂಬುವರು | ಅರ್ಥವ ಕಳಕೊಂಡು ಸಾರ್ಥನಾಗಲು ಜನ್ಮವ್ಯರ್ಥವೆಂದುಸಿರುವರು || ರೊಕ್ಕವಿದ್ದರೆ ಕೈಲಿ ಸಕ್ಕರೆ ಮಾತಿನೊಳಕ್ಕರೆ ಪಡಿಸುವರು | ರೊಕ್ಕವಿಲ್ಲದವನ ಮಕ್ಕಳು ಮಡದಿಯರು ಲೆಕ್ಕಿಸದಿರುತಿಹರು || ೮ || ಧರಣಿಗೋಸುಗ ತಮ್ಮ ಹರಣವ ಕಳಕೊಂಡು ಮರಣವ ಪೊಂದುವರು | ಮರಳು ಜಗಳಕೆ ತರಳರು ಚಾಚುತೆ ಕೊರಳನು ಕೊಯ್ಯುವರೋ || ೯ || ತಂದೆಯ ಬಿಡುವರು ಕಂದನ್ನ ಒಡಿವರು ಬಂಧುಗಳನು ಕೊಲ್ಲುವರು | ಒಂದಿಗೆ ಜನಿಸಿದರೆಂದು ನೋಡರು ನಿಜದಂದುಗಕ್ಕೊಳಗಹರು || ನಂಟರುಷ್ಟ್ರನಮಗಿವರುಂಟೆಂದು ಮೋಹದ ಗಂಟುಕಟ್ಟಿರೆಮನದಿ | ಕಂಟಕ ಯಮಬಂದು ಗಂಟಲಬಗಿವಾಗ ನಂಟರಿಲ್ಲವು ಜಗದಿ || ೧೧ || ಆಪತ್ತುಬಂದಾಗ ಪಾಪಿಯು ಮನದನು ತಾಪದಿ ನೆನೆಯುತಿರೆ | ಕಾಪಾಡುವನಾಗ ಶ್ರೀಪತಿ ಪುಲಿಗಿರಿ ಭೂಪನು ನಮ್ಮ ಧೊರೆ || ೧೨ || ನೊಂದಗಜೇಂದ್ರನ, ಕಂದ ಪ್ರಹ್ಲಾದನ | ಬಂದವಿಭೀಷಣನ | ಚಂದಿರಮುಖಿ ನೃಪನಂದನ ಧ್ರುವರನು ಚಂದದಿ ಸಲಹಿದನ || ೧೩ || ಅಜಮಿಳಗೊಲಿದನ ಕುಜನರ ತರಿದನ ಸುಜನರನಾಳಿದನ | ಭಜಕರದಾತನ ತ್ರಿಜಗಕ್ಕೆ

ನಾಥನ ವಿಜಯನ ರಥಸೂತನ || ೧೪ || ಅಂಗಜಜನಕನ ಮಂಗಳ ಮಹಿಮನ ಗಂಗೆಯ ಪಡೆದವನ | ರಂಗನ ಸುಗುಣ ತರಂಗನ ಶಂಖರಥಾಂಗವ ಪಿಡಿದಿಹನ || ೧೫ || ಗೌತಮಭಾರ್ಯೆಯ ಪೂತೆಯ ಮಾಡಿದ ಖ್ಯಾತ ಪಾದಾಂಬುಜನ | ವಾತನ ಮಗನೊಳು ಪ್ರೀತಿಯ ಬೆಳಸಿದ ಸೇತುವಿಧಾತನ || ೧೬ || ರಾಮನ ಜಗದಭಿ ರಾಮನ ದೈತ್ಯವಿರಾಮನ ಭಜಕಜನಾ | ರಾಮನ ದಶರಥರಾಮನ ಸೀತಾರಾಮನ ಗುಣಧಾಮನ || ೧೭ || ಪಂಕಜನೇತ್ರನ ಪರಮಪವಿತ್ರನ ಶಂಕರನುತಿಪಾತ್ರನ | ವೆಂಕಟರಮಣನ ಕಿಂಕರಶರಣನ ಸಂಕಟಹರನಾಮನ || ೧೮ || ಧರೆಯೊಳುತ್ತಮ ಪುಲಿಗಿರಿಯೊಳು ನೆಲಸಿದ ವರದ ವಿಠಲದೇವನ | ಶಿರಿನಾಮವೇ ತನ್ನ ಮರೆಯದೆ ನೆನೆಯಲು ಪೊರೆಯುವದಾನರನ || ೧೯ ||

8. ರಾಗ—ದೇಶಿಯಪೂರ್ವಿ—ಆದಿತಾಳ.

ಹರಿಕೃಪೆಯಿಂದಲಿ ದೊರೆದಿತು ಯನಗೀ ಶಿರಿಕರತಂಬೂರಿ || ಪ || ನರಹರಿನಾಮಸ್ಮರಣೆಯಗೈಯುವಾ ನರರಿಗೆ ಸಹಕಾರಿ ||ಅನು|| ತಾಪತ್ರಯವನು ಲೋಪಗೈವ ಸುಖ ರೂಪಿನ ತಂಬೂರಿ | ಶ್ರೀಪತಿಭಕ್ತಿನಿರೂಪಣದಿಂದಖಿಲಾಪತ್ಪರಿಹಾರಿ || ವಾಸುದೇವ ನಿಜ ದಾಸರು ಪಿಡಿಯುವ ಭಾಸುರತಂಬೂರಿ | ವಾಸುಕಿ ಶಯನ ವಿಲಾಸದ ಕೀರ್ತಿವಿಕಾಸದ ಜಯಭೇರಿ || ೨ || ಅಂಬುಜಭವನ ಕುಟುಂಬನಿಯಕರಾಲಂಬನ ತಂಬೂರಿ | ತುಂಬುರನಾರದ ರಂಬುರುಹಾಕ್ಷನ ಹಂಬಲಿಗನುಸಾರಿ || ೩ || ಗಂಧರ್ವರ ಕರಪೊಂದಿ ಮೆರೆವ ಬಲು ಸುಂದರ ತಂಬೂರಿ | ಸುಂದರಿಯರ ನಲವಿಂದಲಿ ನುಡಿಸುವಾನಂದ ಸುಗುಣಧಾರಿ || ೪ || ಶ್ರುತಿಯುತಮಾಗಲು ಮತಿಯುತರಿಗೆ ಸಮ್ಮತವಹತಂಬೂರಿ | ಶ್ರುತಿಹೀನತೆಯಿಂದತಿಶಯಮಾಗದು ಕೃತಿಶತವನುಸಾರಿ || ೫ || ಲೋಕದಜನರಿಗನೇಕ ಸುಕೃತ ಪರಿಪಾಕದ ತಂಬೂರಿ | ಈ ಕಲಿದೋಷ ನಿರಾಕರಣೆಗೆ ಬಹು ಭೀಕರ ಮುಖಧಾರಿ || ೬ || ಧರೆಯೊಳು ಪುಲಿಗಿರಿ ವರದವಿಠಲನ ಬಿರುದಿನ ತಂಬೂರಿ | ದುರಿತವೆಂಬ ಮದ ಕರಿಯನು ಸೀಳುವ ಹರ್ಯಕ್ಷಾರಿ || ೭ ||

9. ರಾಗ—ಹಂಸೆ.

ಶ್ರೀನಿವಾಸನಮಲನಾಮವ ಸೊಗಸಿನಿಂದ ಗಾನ ಮಾಳ್ಪಧೀರನಾವನೋ || ಪ || ತಾಳತಂಬೂರಿಗಳನು ಮೇಳವಿಸಿ ಸರಾಗದಿಂದ || ೧ || ಹಿಂದೆ ಮೃದಂಗದಿಂದ, ಸಂಗಡಿಸಿ ಸುಲಲಿತವಾಗಿ || ೨ || ಗುಂಭವಾದ್ಯವನ್ನು ಪರಮ ಸಂಭ್ರಮದಲ್ಲಿ ಬಾರಿಸುತ್ತ || ೩ || ಜತೆಗೆ ಸೇರಿದವರಕೂಡಿ, ಶ್ರುತಿಲಯಗಳಿಂದ ಪಾಡಿ || ಪರಮ ಪುರುಷ ವ್ಯಾಘ್ರಗಿರಿಯ ವರದ ವಿಠಲ ನೆಂದುಮುದದಿ || ೪ ||

10. ರಾಗ—ರೇಗುಪ್ತಿ—ಆಟತಾಳ.

ದಿನವೇ ಸುದಿನವು ಧ್ಯಾನಮಾಳ್ಪ ಜನವೇ ಸುಜನವು || ಪ || ಘನತರ ಹರುಷದಿ ಮನದಣಿವಂದದಿ, ಮನಸಿಜನ್ನೈಯನ, ಮಹಿಮೆಯ ಪಾಡುವ || ಅನು || ಯುಕ್ತದಿಕೂಡಿ ಅಯುಕ್ತವಿರಕ್ತಿಯಮಾಡಿ || ಭಕ್ತಿಗಾಗಲಿ ಭವಮುಕ್ತಿಗಾಗಲಿ ಹರಿಭಕ್ತರನೊಡಗೂಡಿ ರಕ್ತಿಲಿಪಾಡುವ || ದಿನವೇ || ೧ || ತಾಳ ತಂಬೂರಿಯು ತಪ್ಪದೆ ತಂದು ಮೈಳೈಸಿಶ್ರುತಿಯ || ಹಾಳುಹರಟೆಯಿಂದ ಕಾಲವ ಕಳೆಯದೆ ಶ್ರೀಲಲಾಮನ ಕಥೆ ಪೇಳುವ ಕೇಳುವ || ೨ || ಅರ್ಥಾಪೇಕ್ಷೆಯಲಿ–ಕಾಲಗಳನ್ನು ವ್ಯರ್ಥಮಾಡದಲೆ || ಅರ್ಥಿಪರಿಗೆ ಪರಮಾರ್ಥವನೀಯುವ ಪಾರ್ಥಸಾರಥಿಯನ್ನು ಪ್ರಾರ್ಥನೆ ಮಾಡುವ || ೩ || ಕಾಮಕ್ರೋಧಗಳ–ಕಳೆವ ರಘು -ರಾಮನಾಮಗಳ ಪ್ರೇಮದಿಂಪಾಡುತ್ತ ರೋಮಾಂಚದೊಡಗೂಡಿ ನೇಮದಿಂದ ಭವ ತಾಮಸ ಕಳೆಯುವ || ೪ || ಹರಿವಾಸರವನು—ಸಾಧಿಸಿ ಮುರಹರ ನಾಮಗಳನು | ಹರಿ ದಾಸರೊಡಗೂಡಿ, ಹರುಷದಿಂದೆಚ್ಚತ್ತು ವರದ ವಿಠಲ ನರಹರಿಯೆಂದು ಪಾಡುವ || ದಿನವೇ || ೫ ||

11. ರಾಗ—ಸಹನ—ಆದಿತಾಳ.

ಕಲಿಯಾಮಿ ಶ್ರೀನಿವಾಸಂ, ಕಲಭಾಷ ಮಿಂದುಹಾಸಂ ||ಪ|| ಕಮನೀಯ ಹೇಮಚೇಲಂ | ಕಮಲಾಲಯಾನುಕೂಲಂ | ಕಮಲಾಭಿರಾಮಮೂಲಂ || ೧ || ಸುಮಬಾಣ ಸುಂದರಾಂಗಂ | ಸುಮನಾರ್ಪಿತಾಂತರಂಗಂ | ನಮದಾರ್ತಿಸಂಗ ಭಂಗಂ || ೨ || ಜಲಜಾಪ್ತ ಪತ್ರನೇತ್ರಂ | ಜಲದೋಪಮಾನಗಾತ್ರಂ ಜಲಜಾಪ್ತ ಪುತ್ರ ಮಿತ್ರಂ || ೩ || ಕುಂದೋಪಮಾನರದನಂ | ಚಂದ್ರೋಪಮಾನವದನಂ | ಬೃಂದಾರಕಾರಿ ದಮನಂ || ೪ || ಅಜವಂದ್ಯ ಚರಣಕಮಲಂ | ನಿಜಸೌಖ್ಯ ಕರಣಕುಶಲಂ | ಭಜನೀಯ ವರದ ವಿಠಲಂ || ಕಲಯಾಮಿ ಶ್ರೀನಿವಾಸಂ ||

12. ರಾಗ—ಯಮುನಕಲ್ಯಾಣ.

ಭಜತಿ ಭುಜಗಶಯನಂ | ಸದಾಹೃದಿ || ಸಜಲ ಜಲದಶಾರೀರ ಮಕುಂತಿತ | ಭುಜಗಶೈಲ ಶಿಖರಾಲಯಮನಿಶಂ || ಅನು || ಶೇಷ ಪವನ ಸಂವಾದವದೇನ ವಿಶೇಷ ಕರುಣಾಯಾತ್ರಾಗತಮೀಶಂ || ೧ || ರಾಮ ಲಕ್ಷ್ಮಣಾರಾಧಿತ ಮಜ ಭವ ಕಾಮಜನಕ ಮಕಳಂಕ ಚರಿತ್ರಂ || ೨ || ಪಾಂಡುತನಯ ಮಾಂಡವ್ಯಾರಾಧಿತ | ಪುಂಡರೀಕ ದಿವ್ಯಾದ್ರಿವಿಹಾರಂ || ೩ || ಚಂಡಕಿರಣರಥ ಮಂಡನಾಂಗ ಮಜ ಮಂಡಜಾತಾವರ ವಾಹನಗಮನಂ || ೪ || ಪರಮ ಪುರುಷಮಖಿಳಾಗ ಮವೇದ್ಯಂ | ವರದವಿಠಲ ಮನುಚಿಂತಯದಾದ್ಯಂ || ೫ ||

13. ರಾಗ—ಕಾಂಬೋಧಿ—ಆದಿತಾಳ.

ಕಲಯೇಹಂ ಶ್ರೀ ಕನಕಾದ್ರೀಶಂ, ಜಲದೋಪಮಭಾಸಂ || ಪ || ಸುಲಲಿತ ಕರಧೃತ | ಧರರಥಚರಣಂ || ಕಲಿಕಲುಹಾಪಹ, ಕಮನೀಯಚರಣಂ || ಮಸ್ತಕ ನಿಹಿತ ಮಹಾರ್ಹ ಕಿರೀಟಂ|ಕಸ್ತೂರೀ ತಿಲಕಿತ ದಿವ್ಯಲಲಾಟಂ || ನಿಸ್ತುಲಸುಮದಮಾಂಚಿತ ಜೂಟಂ ಕೌಸ್ತುಭ ಶೋಭಿತ ಮಣಿಸರಕೂಟಂ || ೧ || ಸುಮಶರಕೋಟಿ ಮನೋಹರವೇಷಂ | ಕಮಲಾಸಖಭಾ ಭರಣವಿಭೂಷಂ || ಸುಮಹಿತಭಣಿತ ಸದೃಶಮಂಜುಭಾಷಂ | ವಿಮಲ ಹೃದಯ ಸೇವಕ ಪೋಷಂ || ೨ || ಶ್ರೀರಮಣೀಪರಿ ಶೋಭಿತ ಗಾತ್ರಂ | ವಾರಿಜ ಭವಕೃತ ವಿವಿಧಸ್ತೋತ್ರಂ || ಸಾರಸದಳ ವಿಸ್ತಾರಸುನೇತ್ರಂ | ನಾರದಮುನಿಕೃತ ಪೂಜಾಪಾತ್ರಂ || ೩ || ಶರದಿಂದು ಮಂಡಲ ಸುಂದರವದನಂ | ವರಕುಂದಕುಟ್ಮಲ ಸನ್ನಿಭರದನಂ || ಕರಸಂದರ್ಶಿತ ವೈಕುಂಠಸದನಂ | ತರುಣ ತರಣಿಘೃಣಿ ರುಚಿದಂತ ಹಸನಂ || ೪ || ತರುಣ ಶ್ರೀತುಳಸೀ ಶೋಭಿತಮಾಲಂ | ಸರಸಿಜಗರ್ಭ ರುಚಿರದಿವ್ಯಚೇಲಂ || ವರವ್ಯಾಘ್ರಭೂಧರ ವಿಹರಣಶೀಲಂ | ವರದ ವಿಠಲ ಮಖಿಲಾಗಮಪಾಲಂ || ೫ ||

14. ರಾಗ—ಕಮಾಚು.

ಯಾಕೆ ಕಳವಳವೋ—ಮಾನಸನಿನ ಗ್ಯಾಕೋ ಕಳವಳವೊ || ಪ || ತ್ರೀಕಲತ್ರನು ಜಗದೇಕ ನಾಯಕ ನಿರ || ಲ್ಯಾಕೆ ||ಅ|| ಹೊಟ್ಟೆಯೊಳಿರಲನ್ನ ವಿಟ್ಟುಕಾಪಾಡಿದ | ಸೃಷ್ಟೀಪಾಲಕ ಪರ ಮೇಷ್ಠಿ ಜನಕನಿರ ||೧|| ಬಾಲನಾಗಿರೆ ಮೊಲೆಪಾಲ ನಿರ್ಮಿಸಿ ಪರಿ | ಪಾಲಿಸಿದವಸಿರಿಲೋಲನಲ್ಲವೆ || ೨ || ಲೋಪವಿಲ್ಲದೆ ಕಾಯ್ವ ಶ್ರೀಪತಿ ಪುಲಿಗಿರಿ | ಭೂಪವರದ ವಿಠಲಾ ಪದ್ರಕ್ಷಕ ನಿರ || ಲ್ಯಾಕೆ ಕಳವಳವೋ || ೩ ||

15. ರಾಗ—ಆನಂದಭೈರವಿ.

ಭಾವಯೆ ಭವಭಾವಿತ ಚರಣಂ | ಭವಭಯಾಪರಿಹರಣಂ || ಭಾವನೋಚಿತಭಾಗ್ಯ ವಿತರಣ ಕೋವಿದಂನಿಜ ಭಾವದಂ ಹೃದಿ || ಅ || ವ್ಯಾಘ್ರಭೂಮಿಧರಾಗ್ರವಿಹರಣ ಮಗ್ರಜನಶರಣ್ಯಂ | ಶೀಘ್ರಫಲದಮುದಗ್ರಪೌರುಷ ವಿಗ್ರಹಂ ಸುರಾಗ್ರ್ಯಗಣ್ಯಂ || ೧ || ಕುಂಡಲೀ ಫಣ ಮಂಡಲಾಶ್ರಿತ ಮಂಡಜಾತಗಮನಂ || ಪುಂಡರೀಕ ಸುಮ | ಮಂಡಿತ ಹಾರಮ ಖಂಡಿತ ಹಿಮಕರ ಮಂಡಲ ವದನಂ ||೨||

ರಾಮಮಿನಕುಲ ಸೋಮಮಾಶ್ರಿತ ಪ್ರೇಮಮಾಂಜಿಭೀಮಂ || ಶ್ಯಾಮಜಲಧರ ಕೋಮಲಂ ಗುಣ ಧಾಮವಿಹಾಸ ಪ್ರೇಮನಾಮಂ || ೩ || ನಂದನಂದನ ಮಿಂದಿರಾ ಹೃದಳಿಂದ ಲೋಲ ಮಿಳಿಂದಂ || ಕುಂದರದನ ಮಮಂದ ಕರುಣಾನಂದಿತಾ ಖಿಲಲೋಕವೃಂದಂ || ೪ || ಸಾರನಿಗಮವಿಹಾರ ಕುಶಲಮುದಾರ ವರದ ವಿಠಲಂ | ಭೂರಮಾಕುಚಕೋರ ಕಾಂಚಿತ ಚಾರುಮುಕ್ತಾಹಾರ ಪಟಲಂ || ೫ ||

16. ರಾಗ—ಪಂತುವರಾಳಿ.

ಬಿಡಲಾರೇ ಬಿಡಲಾರೇ || ಪ || ಕಡಲೊಳು ಪವಡಿಪ ಮೃಡನುತನಾಮನ || ಅ || ಕಾಶಿಯೊಳಗೆ ವಿಶ್ವೇಶನು ಬೋಧಿಪ ದಾಶರಥಿಯವರ ಸಾಸಿರ ನಾಮವ || ೧ || ಗೌರವದಿಂದಲಿ ಗೌರಿಯುಜಪಿಸುವ | ಗೌರವೆನಿಪದುರಿತಾರಿಯನಾಮವ || ೨ || ಭಕ್ತರು ಸಕಲ ವಿರಕ್ತರು ನಿತ್ಯದಿ | ರಕ್ತಿಪಡುವ ಗುಣ ಯುಕ್ತನನಾಮವ || ೩ || ಇಷ್ಟದಿ ನೆನೆವರ ಕಷ್ಟವಳಿದುಮನ ದಿಷ್ಟಕೊಡುವಪರ ಮೇಷ್ಟಿಯನಾಮವ || ೪ || ಚರಣವ ನಂಬಿದ ಶರಣರ ಪೊರೆಯುವ | ವರದ ವಿಠಲಧೊರೆ ವರದನ ನಾಮವ || ೫ ||

17. ರಾಗ—ಕಾಂಬೋಧಿ.

ಶ್ರೀನಿವಾಸ ನಿನ್ನಪಾದ-ಧ್ಯಾನವಪಾಲಿಸಿಯನ್ನ – ಮಾನಸಾನಂದಿಸೋ ಶತಭಾನುತೇಜನೆ || ಪ || ಸಾನುರಾಗದಿಂದನಿನ್ನ ಧ್ಯಾನಿಪಜನರ ಭವ | ಕಾನನಾದಹನ ಚಿತ್ರ ಭಾನು ದನು ಜಾರಿ ಹರಿ || ಅನು || ಇಂದಿರಾ ರಮಣನಿನ್ನ ಸುಂದರ ಚರಣಕೆ ನಾಂ | ವಂದನೆಮಾಡುವೆನಯ್ಯ ಇಂದುವದನಾ || ಇಂದುಧರ ನುತ ಮುಚು ಕುಂದವರದನೆ ಗುಣಬಂಧುರಾ ಶ್ರೀ ಪುಲಿಗಿರಿ ಮಂದಿರ ಮಂದರ ಧರ || ೧ || ಇಷ್ಟುದಿನ ನಿನ್ನ ಮನ ಮುಟ್ಟಿಭಜಿಸದೆ ಬಲು ದುಷ್ಟ ಮನುಜರಕೂಡಿ ಭ್ರಷ್ಟನಾದೆನು || ಇಷ್ಟಫಲದಾಯಕ ತ್ರಿವಿಷ್ಟಪಾಧಿಪಾನುಭವ್ಯ | ಅಷ್ಟಸಿದ್ಧಿಪ್ರದ ನಿನ್ನ ಗಟ್ಟಿಯಾಗಿ ನಂಬಿದೆನು || ೨ || ಲೋಕಪತಿ ಪಿನಾಕಯನ್ನು ವೃಕನೆಂಬಭೀಕರಾಸುರನು ಉರಿಹಸ್ತ ಬೇಡಲು | ಆ ಕಪಾಲಿಯಿತ್ತು ಅವಿವೇಕದಿಂದಲೋಡುತಿರೆ ಲೋಕಮೋಹಿನಿಯ ರೂಪು ಸ್ವೀಕರಿಸಿ ಶಿವನಕಾಯ್ದೆ || ೩ || ಆಡಿಸೋ ನಿನ್ನವರೊಳು, ಪಾಡಿಸೋ ನಿನ್ನಯ ಕೀರ್ತಿ, ನೋಡಿಸೋ ನಿನ್ನಯ ಮೂರ್ತಿ | ಬೇಡಿಸದಿರು || ಆಡಿಸದೆ ಭವವೆಂಬ ಕಾಡಿನೊಳ್ಕಟಾಕ್ಷದಿಂದ ನೋಡಿನಿನ್ನ ನಾಡಿನೊಳಗಾಡಿಸೋ ಮುರಾರಿಹರಿ || ೪ || ವಾಸುಕಿಶಯನ ಪೀತವಸನ | ದಿವ್ಯಭೂಷಣ

ವಿಭೂಷಿತ ಲಲಿತಶುಭ ವೇಷವಿಪುಲ || ಭಾಸಮಾನ ವ್ಯಾಘ್ರಶೈಲಾ ವಾಸ ಶ್ರೀನಿವಾಸ ಭಕ್ತಪೋಷಣ ದುರಿತಗಣ ಶೋಷಣ ಶ್ರೀವರದ ವಿಠಲ || ೩ ||

18. ರಾಗ—ಶಹನಾ.

ಕರುಣದಿ ಕಾಯೋಯನ್ನ- ಕಾರುಣ್ಯನಿಧಿ-ಕರುಣದಿ ಕಾಯೋಯನ್ನ ||ಪ|| ಚರಣ ಸೇವಕ ಭಯಹರಣ ಶ್ರೀಕೌಸ್ತುಭಾಭರಣ ಸೌಖ್ಯವಿತರಣ ನಿನ್ನಯ ಚರಣ ಯುಗಳವ ಶರಣು ಹೊಕ್ಕೆನು || ಅ || ಕರ್ಮತಂತ್ರವನುಳಿದು-ಕಾಮಿಸಿ ಮನ ನಿರ್ಮಲತ್ವವ ತೊರೆದು || ಹರ್ಮ್ಯನಿಂದಲೆ ಭಕ್ತಿಯುಮ್ಮಳಿಸದೆ ಬಲು ನಿರ್ಮಲತ್ವವನಳಿದು ಕಾಮವು ಹೊಮ್ಮುತಿದೆ ಪರ ಬೊಮ್ಮ ಮೂರುತಿ || ೧ || ಸ್ನಾನ ಮೌನವ ತೊರೆದು| ಸಂಧ್ಯಾದ್ಯನು ಸ್ಥಾನನೇಮವಮರೆದು || ಮಾನಸಪೂಜಾ ವಿಧಾನವನರಿಯದೆ ದೀನಜನಸುರ ಧೇನು ಭಕ್ತರ ಮಾನನಿಧಿಯಹ ಶ್ರೀನಿವಾಸನೆ || ೨ || ಶರಣಜನಾವನನೆ | ಶಕ್ರಾದಿನಿ - ರ್ಜದಕುಲಪಾಲಕನೆ || ಸರಸಿಜಸಂಭವ ಪುರಹರ ಸನ್ನುತ ಚರಿತ ದೂರಿತ ದುರಿತ ಸದ್ಗುಣ | ಭರಿತ ಪುಲಿಗಿರಿ ವರದ ವಿಠಲ || ೩ ||

19. ರಾಗ—ಬಿಲಹರಿ.

ನಾರಾಯಣ ರಕ್ಷಿಸೋ—ನಮ್ಮನು ಲಕ್ಷ್ಮೀ ನಾರಾಯಣ ರಕ್ಷಿಸೋ || ಪ || ಪಾರರಹಿತಭವ ಪಾರಾವಾರದಿಬಲು ಘೋರತಾಪವು ಮೀರಿತೋ ಭವ ದೂರ ನಿತ್ಯೋದಾರ ಕರುಣದಿ || ಅ || ಶ್ರೀಶ ನಿನ್ನರ್ಚಿಸದೆ-ಶ್ರೇಯಸ್ಸುಖ-ದಾಶಯನೇ ತೊರೆದೆ || ಕೋಶ ಕಳತ್ರ ನಿವೇಶ ತನುಜ ಮಾಯಾ | ಪಾಶದೊಳಗೆ ಶಿಲ್ಕಿಗಾಸಿಯಾದೆನುಜಗ ದೀಶ ನಿಖಿಲ ಸುರೇಶ ಕಮಲಫಲಾಶ ನಯನ | ದಿನೇಶ ಶತ ಸಂಕಾಶ ವ್ಯಾಘ್ರಗಿರೀಶ ಭವಭಯ ಪಾಶ ಹರಪರಮೇಶ ವಂದಿತ || ನಾರಾಯಣ || ೧ || ದೇಹಾಭಿಮಾನದಲ್ಲಿ ತೀವಿದಭೂತ ದ್ರೋಹವನಾಚರಿಸುತಲಿ || ಸೋಹಮೆಂಬುವ ಬಲು ಮೋಹದಿ ಸಿಲುಕಿದಾ ಸೋಹಮೆನ್ನದೆ ದೈವ | ದ್ರೋಹಿಯಾದೆನು ವಿ | ದೇಹಜಾವರಿಗೂಹನೋಚಿತದೇಹ ವಿಜಿತವಿದೇಹ ಖಗವರವಾಹ ಶುಭಹರಿ | ವಾಹ ನಿಖಿಲ ನಿರೀಹ ಲೋಕವಿ ಮೋಹನಾಚ್ಯುತ || ನಾರಾಯಣ || ೨ || ಗುರುಹಿರಿಯರ ಮರೆದು—ಗರ್ವದಿ ಧರ್ಮಾಚರಣೆಯ ನೆರೆತೊರೆದು || ದುರುಳರ ಸಂಗದಿ ಜರಿದು ಸಜ್ಜನರನು | ಜರಿದು ದುರ್ಗತಿಗೆ ನಾ ಗುರಿಯಾದೆನು ಹರಿ || ಪರಮ ಪುರುಷ ಪರಮಪಾವನ | ಚರಣ ಸುಗುಣಾಭರಣದೀನೋ | ದ್ಧರಣ ಭವ ಸಂಹರಣ ವಿಶ್ವಂಭರಣ ಪುಲಿಗಿರಿ ವರದ ವಿಠಲ || ನಾರಾಯಣ || ೩ ||

20. ರಾಗ—ಬಿಲಹರಿ.

ನಾರಾಯಣನಿನ್ನ ಪಾರಾಯಣಗೈವ ಧೀರತನವ ಪಾಲಿಸೋ || ಪ || ಪಾರವಿಲ್ಲದಭವ ಪಾರಾವರದೊಳೊಂದು ತೀರಕೆನ್ನನು ಸೇರಿಸೋ || ಅ || ನಿನ್ನ ಕಿಂಕರಭಾವವನ್ನು ಮರೆತು ನಾನಾ ಜನ್ಮದಿತೊಳಲುತ ಖಿನ್ನನಾಗಿ | ನಿನ್ನದಯದಿ ನರಜನ್ಮದಿ ಜನಿಸಿದೆ | ವರ್ಣಶ್ರೇಷ್ಠರಕುಲದಿ ಬಹು ಪುಣ್ಯದಿ || ಇನ್ನು ಪುನರಪಿ ಜನ್ಮವಿಲ್ಲ ನಿನ್ನ ಕಿಂಕರನನ್ನು ಸೇರಿಸಿ | ಘನ್ನ ಮಹಿಮನೆ ನಿನ್ನ ಸೇವೆಯೊಳುನ್ನತದ ರತಿಯನ್ನು ಪಾಲಿಸಿ || ನಾರಾ || ೧ || ಅಷ್ಟಯೋನಿಗಳಲ್ಲಿ ಹುಟ್ಟಿಸಾಯುತ ಬಲು | ಕೆಟ್ಟಮರ್ಮವಮಾಡಿ ಕಷ್ಟಪಟ್ಟು || ಎಷ್ಟುನಿನಗೆ ಮೊರೆ ಯಿಟ್ಟು ಬೇಡಲು ಎಳ್ಳಿನಷ್ಟು ಕಾರುಣ್ಯವು ಪುಟ್ಟದೇನೋ || ಸೃಷ್ಟಿಗೈಯುವೇ ಪುಷ್ಟಿಗೈಯುವೆ | ಕಟ್ಟಕಡೆಯೊಳು ನಷ್ಟಪಡಿಸುವೆ | ಸೃಷ್ಟಿಯೊಳು ಜೊತೆಗಟ್ಟಿನೋಡುವ ದಿಟ್ಟರಾರ್ಯೆ ವಿಷ್ಟಮೂರುತಿ || ೨ || ಧರೆಯರಾಜ್ಯವನೊಲ್ಲೆ ಸಿರಿಯಸಂಪದವೊಲ್ಲೆ ಸುರರು ಭೋಗಿಪ ಸುರಪುರವಾನೊಲ್ಲೆ || ಪರಮೇಷ್ಠಿ ಪುರದೊಳಗಿರಲಾ ನೊಲ್ಲೆನು ನಿನ್ನ | ಹೊರತಾದಕೈವಲ್ಯ ಸ್ಥಿರವೊಲ್ಲೆನು || ನಿರುತ ನಿನ್ನಯ ಚರಿತೆಯಲಿ ಮನವಿರಲಿ, ನಾನಾತೆರದಿ ಭಕ್ತಿಯೊಳಿರಲಿ ಯನ್ನಯ ಕರಣವೃತ್ತಿಯು ಪರಮ ಪುಲಿಗಿರಿ ವರದ ವಿಠಲ || ೩ ||

21. ರಾಗ—ಕಮಾಚು.

ಮಾಮವ ಮೃಗರಿಪು ಗಿರಿರಮಣ - ಮಹಿತಗುಣಾಭರಣ || ಪ || ಕಾಮಕಲುಷಭವ ಭೀಮಜಲಧಿಗತ || ತಾಮಸಾತ್ಮಕಂ ದುರಿತಚರಿತಮಹಿ || ಮಾಮ || ಅ || ನಿಟಿಲನಯನ ಮಕುಟ ಲಸಿತ ವದನ ನೀರಾ - ಪೂರಾ ನೀಲಜಲದ ಮದ ಹೇಳನ ಸುಭಗಶರೀರ || ಕುಟಿಲದನುಜ ಕುಲಶಿಖರಿಕುಲಿಶ ಧರ ಕುಂದಕುಟ್ಮಲ ಸಮಾನ ಶುಭರದನ || ೧ || ವದನ ವಿಜಿತ ಶರದಮೃತಕಿರಣ ಸುಕುಮಾರಾಕಾರಾ ವತ್ಸಲಸಿತ ಶುಭಲಕ್ಷಣ ಲಕ್ಷ್ಮೀಧಾರಾ || ಸದಯಹೃದಯ ಪರಿ ತೋಷಿತ ಸತಜನ ಸಾಮಗಾನರತ ಸತತಶುಭ ಚರಿತ || ಮಾಮ || ೨ || ಸಕಲದಿವಿಜ ನತ ಚರಣ ಕಮಲ ನಿರಪಾಯಾ-ಮೇಯ | ಸಂತತಾರಾತ್ತಾದರಚಕ್ರ ವಿಬುಧಗೇಯ || ಪ್ರಕಟಮಹಿಮ ಮಾಂಡವ್ಯ ಮನೋರಥ ಪಾರಿಜಾತ ದುರಿತಾರಿ ವರದನುತ ಮಾಮವ || ೩ ||

22. ರಾರಾ—ಯದುಕುಲಕಾಂಬೋಧಿ.

ಪಾದಸೇವೆಯ ಪಾಲಿಸೋ - ಪಂಕಜನಾಭ ||ಪ|| ಪಾದಸೇವೆಯ ತೋರೋ ವೇದಗೋಚರವ್ಯಾಪ್ತ ಭೂಧರ ವಿಹರಣ ಶ್ರೀಧರ ಹರಿನಿನ್ನ || ಪಾದ || ಅ || ಶೇಷವಾಯುಗಳತಿ ದೋಷವರ್ಜಿಸಿ ತನು ಶೋಷಿಸಿ ತಪನವಿಶೇಷವಾಚರಿಸೆ || ದೋಷರಹಿತ ಗುಣ ಭೂಷಾ ಶೇಷನಿಗೊಲಿದು | ಶೇಷಪರ್ವತಶಿರೋ ಭೂಷಣವೆನಿಸಿದ || ಪಾದಸೇವೆಯ || ೧ || ಬಲಿಚಕ್ರವರ್ತಿಯು ಬಲವೈರಿಯನು ಬಲು | ಬಳಲಿಸಿ ರಾಜ್ಯವ ಛಲದಿಂದಾಕ್ರಮಿಸೆ || ನಲಿದು ವಾಮನನಾಗಿ, ಬಲಿಯ ದಾನವ ಬೇಡಿ ನೆಲನ ಈರಡಿಮಾಡಿ ಬಲಿಯಮೆಟ್ಟಿದ ಧಿಟ್ಟ || ಪಾದಸೇವೆಯ || ೨ || ಪಲಕಾಲ ಶಾಪದಿ ಶಿಲೆಯಾಗಿದ್ದ ಗೌತಮ ಕುಲಸತಿಗೊಲಿದು ನಿರ್ಮಲತಪೋವನಕೆ || ಸುಳಿದು ಆ ಲಲನೆಯ | ಕಲುಷವಖಂಡಿಸಿ | ಲಲನಾರೂಪವನಿತ್ತು ಸಲಹಿದ ಪಾವನ || ಪಾದಸೇವೆಯ || ೩ || ತರಣಿ ತನಯನೆಚ್ಚ ಗರಳ ಶರವು ಬೇಗ ನರನುತ್ತಮಾಂಗಕ್ಕೆ ಗುರಿಯಾಗಿ ಬರಲು || ಚರಣದಂಗುಟದಿಂದ | ಧರಣೀತಳವನೂರಿ | ನರನ ಶಿರವಕಾಯ್ದ ನರನಾರಾಯಣ ನಿನ್ನ || ಪಾದ || ೪ || ಪುಲಿನಾಮದಸುರನು ಛಲದಿಮಾಂಡವ್ಯನ - ಗಳವಪಿಡಿದು ಬಾಧೆಗೊಳಿಸೆ ವೇಗದಲಿ || ಪುಲಿಗೆ ಮೋಕ್ಷವನಿತ್ತು ಪುಲಿಗಿರಿಯಲಿ ಮುನಿ ಕುಲಜ ಮಾಂಡವ್ಯಗೆ ಒಲಿದ ವರದ ವಿಠಲ || ನಾರಾಯಣ || ೫ ||

23. ರಾಗಾ—ಯಮುನಾಕಲ್ಯಾಣಿ.

ಶ್ರೀನಿವಾಸನ ಸೇವೆ ಗೈಯುವ ಜಾಣರೆಲ್ಲರು ಬನ್ನಿರೈ || ಧ್ಯಾಸಲಭ್ಯನ ಕಾಣಲಿಚ್ಛಿಪ ಮಾನಿಸರ ಕರತನ್ನಿರೈ || ಪ || ಪರಮಪದದೊಳಗಿರದೆ ವೆಂಕಟ | ಗಿರಿಯೊಳಿರ್ದನು ಪೂರ್ವದಿ | ಭರದಿವಿಪ್ರಗೆ ವರವನಿತ್ತೀ | ಗಿರಿಗೆ ಬಂದನು ಪ್ರೇಮದಿ || ೧ || ದೂರವಲ್ಲವಿಚಾರಿಸಲು ಹರಿಣಾರಿಭೂಧರಮಿಲ್ಲಿಗೆ | ಚಾರುಮೂರ್ತಿಯ ಚರಣಸೇವೆಗೆ ಸಾರುವೆವು. ನಾವಲ್ಲಿಗೆ || ೨ || ಚರಣಸೇವಕರನ್ನು ಮರೆಯದೆ ಪೊರೆಯುವನು ಮೋದದಿ || ಪರಮಪುಲಿಗಿರಿವಾಸವೆಂಕಟ ವರದ ವಿಠಲನೆ ಲೋಕದಿ || ೩ ||

24. ರಾಗಾ—ಕಾಂಬೋಧಿ—ದೇಶೀಯ.

ಕನಸಿನಲಿಕಂಡೆನಾ-ಶ್ರೀನಿವಾಸನಾ||ಧ್ಯಾನಗೈವಮುನಿ ಮಾನಸದಲ್ಲಿ ನಿಧಾನಿಸಿ ನೋಡಲು ಕಾಣದಾತನ || ಕನಸಿನಲಿ || ಪ || ಶರದಾಭಗಾತ್ರನ - ಶಂಪಾಭೋ

ಜ್ವಲಕರಪೀತವಸ್ತ್ರನ | ಸಾರಸಾಕ್ಷನ | ಶರದಿಂದುವಕ್ತ್ರನ || ಸಿರಿಯನುರದಿತಾ ನಿರಿಸಿಕರಗಳಿಂ | ದರಚಕ್ರಗಳನು ಧರಿಸಿಪಾರ್ಥನ || ೧ || ಕಾಮನಂ ಪೆತ್ತನ, ಕಾಕುಸ್ಥನಿಗೆ - ಕಾಮಿತವಿತ್ತನ || ಕೌಸ್ತುಭಮಣಿ-ದಾಮವಂ ಪೊತ್ತನ || ಹೇಮ ಸೂತ್ರಮಣಿ ದಾಮಭೂಷಣ | ಸ್ತೋಮದಿವ್ಯಗುಣರಾಮಣೀಯನ || ಕನಸಿನಲಿ|| ಸುರವೃಂದಾನಂದದಿ-ಸ್ತುತಿಸುತ್ತ ಬರುತಿರೆ ತೂರ್ಯಾರವದಿ | ಸಿತಛತ್ರಾದ್ಯುರುತರ ರಾಜಚಿಹ್ನದಿ || ಗರುಡನೇರಿ ನಿಜ, ಶರಣರ ಪೊರೆಯುವ ವರದಪುಲಿಗಿರಿ ವರದವಿಠಲನ || ಕನಸಿನಲಿ || ೩ ||

25. ರಾಗಾ—ಮಧ್ಯಮಾವತಿ.

ಶೇಷಾದ್ರಿಯನು ನೋಡಿರೊ - ಸೇವಕಪರಿ - ತೋಷಾದ್ರಿಯಿದು ಕಾಣಿರೋ || ಪ || ಶೇಷಾದ್ರಿಯನು ನೋಡಿ - ದೋಷಾದ್ರಿಹುಡಿಮಾಡಿ | ಶೇಷಾದ್ರೀಶನ ಪರಿ ತೋಷದಿಂ ಪಾಡಿ || ಶೇಷಾ || ಅನು || ಚಿನ್ನದ ಗಿರಿಯಂದದಿ | ರಂಜಿಸುವದು-ಬಣ್ಣದೊಳತಿದೂರದಿ||ಸಣ್ಣದಾದರು ಗಿರಿ ರನ್ನವಪೋಲುವ-ದರ್ಣವಶಯನನ ಕಣ್ಣಿಲಿ ಕಾಣಿಪ || ಶೇಷಾದ್ರಿ || ೧ || ಬಗೆ ಬಗೆ ವೃಕ್ಷಗಳು-ಬನಂಗಳು-ಬಗೆ ಬಗೆ ಪಕ್ಷಿಗಳು|| ಬಗೆ ಬಗೆಮೃಗಗಳು ಸೊಗಸಿನೊಳಿರೆಬಹು | ಬಗೆ ಬಗೆ ಧಾತುಗಳಿಗೆ ನೆಲೆಯಾಗಿಪ || ೨ || ಯುಗಗಳ ಸಂಖ್ಯೆಯೊಳು - ನಾಮಂಗಳು - ಯುಗಳ ದ್ವಯಮೆನಲು | ಯುಗಮೊದಲೊಳಗೆ ಪನ್ನಗಗಿರಿಯೆನೆ ತ್ರೇತಾ | ಯುಗದಲ್ಲಿ ಹೇಮದ ನಗವೆಂಬ ಪೆಸರಿನ || ಶೇಷಾದ್ರಿ || ೩ || ದ್ವಾಪರಯುಗದೊಳಗೆ - ವೆಂಕಟನಾಮ-ಏಪರ್ವತಕ್ಕೊದಗೆ || ಶ್ರೀಪುಲಿಗಿರಿಯೆಂಬ ರೂಪವೀಯುಗದೊಳು| ಶ್ರೀಪತಿಯಿತ್ತನಿರೂಪದೊಳೊಪ್ಪುವ || ಶೇಷಾದ್ರಿ || ೪ || ದೂರದಿ ಶೋಭಿಸುವ ದುರ್ಜನರಿಗೆ-ದೂರನಮಂದಿರವ || ಚಾರುವಿಮಾನ ಪ್ರಾಕಾರವ ತೋರಿಪ | ವಾರಿಜಾಸನಪಿತ ವರದವಿಠಲ ನಿಹ || ಶೇಷಾದ್ರಿ || ೫ ||

26. ರಾಗಾ.

ಕಣ್ಣಾರೆ ಕಂಡೆನವ್ವಯನ - ಕೃತ-ಪುಣ್ಯರ ಮಾನಸ - ಗಣ್ಯಚಿನ್ಮಯನ || ಪ || ನೀಲಮೇಘಶ್ಯಾಮಳನ, ಮಣಿ, ಜಾಲರಂಜಿತ ವನಮಾಲಿಕಾಗಳನ || ಫಾಲದಿ ತಿಲಕವೊಪ್ಪಿಹನ - ಹೇಮ-ಚೇಲದಿ ಮಿಂಚನು ಸೋಲಿಸುತಿಹನ || ಕಣ್ಣಾರೆ || ಪಂಕಜ ಪತ್ರಲೋಚನನ - ನಿಜ - ಕಿಂಕರಹೃದಯಾ ತಂಕಮೋಚನನ || ಶಂಖರಥಾಂಗಾಂಚಿತನ | ಮಕರಾಂಕಜನನೀಕುಚಕುಂಕುಮಾಂಕಿತನ || ೨ || ಬೃಂದಾ

ರಕ ಪರಿವೃತನ–ಶ್ರಿತ–ಮಂದಾರನ ಗುಣವೃಂದ ಪೂರಿತನ || ಇಂದಿರಾಹೃದಯ ಮಂದಿರನ–ಮುನಿವೃಂದಚಕೋರಾನಂದಚಂದಿರನ ||೩|| ಮಕರಕುಂಡಲ ಮಂಡಿತನ ಮಣಿಮಕುಟಾದಿ ಭೂಷಣನಿಕರ ಭೂಷಿತನ || ಪ್ರಕಟಿತನಿಜಮಾಯಕನ – ಸೇವ ಕರಿಗೆ ನಿತ್ಯದಿ ಸುಖದಾಯಕನ || ಕಣ್ಣಾರೆ|| ೪ || ಕರುಣದಖನಿಯೆನಿಸುವನ – ನಿಜ – ಚರಣವೆ ಶರಣೆಂದು ಕರದಿತೋರುವನ | ಧರಣೀ ನೀಳೆಯರಿಹ ಕೆಲನ–ಪುಲಿ ಗಿರಿಯೊಳು ನೆಲಸಿಹ ವರದ ವಿಠಲನ || ೫ ||

27. ರಾಗಾ—ದ್ವಿಜಾವಂತಿ.

ವಂದೇಹಂ ವ್ಯಾಘ್ರಾದ್ರಿ–ನಿವಾಸಂ | ವೆಂಕಟೇಶಂ ನಿರ್ಮಲವಿಧುಹಾಸಂ || ಪ || ವೃಂದಾರಕಗಣ ವಂದಿತ ಪದ ಮರವಿಂದನಯನ ಮಾನಂದ ವಿಲಾಸಂ || ಅ || ಶ್ರೀ ವೇದಪುಷ್ಕರಣೀ ತಟ ಶ್ರೀಕರೋದ್ಯಾನವಿಹಾರಂ | ಪಾವನವೃದ್ಧಿ ವಿಮಾನಾಂತರ ಪದ್ಮಾಸನ ಕೃತ ನಿಜಪರಿಚಾರಂ || ವಂದೇಹಂ || ೧ || ಸಕಲ ಲೋಕಸಂರಕ್ಷಣ ಶೀಲನ | ಸಂಪದ ಮಾಶ್ರಿತ ಸುರಭೂಜಂ || ಅಕುಟಿಲ ಭಕ್ತಿ ಮಾಂಡವ್ಯಮುನೀಂದ್ರ ಆಕಲಿತ ನಿಜ ಸಂಸ್ತುತಿಭಾಜಂ || ೨ || ಸಾರಸಭವಸಂ ಕ್ರಂದನ ಮುಖತ್ರಿದಶಾಧಿಪಜನಪರಿವಾರಂ || ವಾರಿಜನಿಲಯಾ ವಾಸಮಕುಲಿಂತ ವರದ ವಿಠಲ ಮುಕ್ತಿಸುಗುಣಮುದಾರಂ || ೩ ||

28. ರಾಗಾ—ಧನಾಸರಿ.

ಎಂತುನುತಿಪೆ ನಾನು–ಈ ಜಗ | ದಂತರ್ಯಾಮಿಯನು || ಪ || ಅಂತರಹಿತ ನನು | ಚಿಂತಿಸಿ ಪದನಖ | ದಂತರ ಪರಿಯೆವು | ಸಂತತ ವಾಙ್ಮನ ||ಅ|| ಸಾಸಿರ ಮುಖದವನ – ಅವಯವ – ಸಾಸಿರವುಳ್ಳವನ || ಸಾಸಿರ ಪೆಸರವನ – ರೂಪಿ ಸಾಸಿರವಾಗಿಹನ || ಮಿಾಸಲಳಿಯದಂತೀ ಸಚರಾಚರ | ವಾಸಿಯಾದ ಶ್ರೀ ವಾಸು ದೇವನನು || ೧ || ಜಗವನು ನಿರ್ಮಿಸುವ – ಬೊಮ್ಮನು–ಮಗನೆಂದೆನಿಸಿರುವ | ಬಗೆಯುವದೀಜಗವ – ಜಠರದಿ – ನುಸುಳಿಸಿಕೊಂಡಿರುವ || ಮುಗುಳಿದ ನಳಿಯುವ| ನಗಜಾಪರಮೊಮ್ಮಗನೆಂಬುವರೀ | ಯುಗಣಿತ ಮಹಿಮನ || ೨ || ನಿಗಮವ ಪೆತ್ತ ವನ – ಬೊಮ್ಮಗೆ – ನಿಗಮವನಿತ್ತವನ | ನಿಗಮೋದ್ಧಾರಕನ – ನಿತ್ಯದಿ – ನಿಗಮ ಗೋಚರನ || ಬಗೆಬಗೆಯೋಗಿಗಳ ಧ್ಯಾನಕೆನುಗಳಿದ ಶ್ರೀಪದ | ಯುಗಳಾಂಬು ಜನನು || ೩ || ಮಾಯಾಧೀಶ್ವರನ – ದೇವನಿ – ಕಾಯಾರಾಧಿತನ | ಕಾಯಜ ಸುಂದರನಾ – ಜೀವನಿ – ಕಾಯಕೆ ಮಂದಿರನಾ || ಮಾಯಕಾರನಿವ | ನಾಯವ

ನರಿಯದೆ - ಪಾಯುಗೆಟ್ಟರನ್ನಾಯದಿಮುನಿಗಳು ॥ ೪ ॥ ಪರಮಪದದೊಳಿಹನಾ - ಪುನರಪಿ - ತರಣಿಯೊಳಿರುತಿಹನ | ಶರನಿಧಿ ಮಂದಿರನಾ-ಶ್ರೀಪುಲಿಗಿರಿಯೊಳು ನಿಂದಿಹನ ॥ ನಿರುತವು ತನ್ನಯ ಚರಣವನಂಬದ | ಶರಣರ ಪೊರೆಯುವ - ವರದ ವಿಠನನಾ ॥ ೫ ॥

29. ರಾಗಾ—ಪಂತುವರಾಳಿ—ಅಟ್ಟತಾಳ.

ಬಂದೆ ಗೋವಿಂದ ನಿನ್ನ ಸನ್ನಿಧಿಗೆ - ಮುದ - ದಿಂದ ಕಾಣಿಕೆಯನು ತಂದೆ ನಿನ್ನಡಿಗೆ ॥ ಪ ॥ ನಾರಾಯಣನೆಂಬ | ಚೋರ ದುಷ್ಕೃತಗಳ | ಹಾರಿಸಿಕೊಂಬುವ ಶೂರನೆಂದು ॥ ದೂರಕೇಳುತ ಬಹು ಭಾರಿಪಾಪಂಗಳ | ಸೇರಿಸಿತಂದೆ ಮುರಾರಿ ವಿಚಾರಿಸಿ ॥ ೧ ॥ ಇಲ್ಲದ ವಸ್ತುವಿಗಲ್ಲವೆ ಲೋಕದೊಳೆಲ್ಲರ ಮಾನಸರುಲ್ಲಾಸವೂ ॥ ಫುಲ್ಲನಾಭನೆ ನಿನ್ನೊಳಿಲ್ಲದೋಷಗಳೆಂದು ನಿಲ್ಲದೆ ದುರಿತಗಳೆಲ್ಲ ಸೇರಿಸಿಕೊಂಡು ॥ ೨ ॥ ಪರಮಪುರುಷನಿನ್ನ | ಚರಣದ ಸೇವೆಗೆ | ಬರಿಕೈಯೊಳೆಂದಿಗು ಬರಲಾಗದೆಂದು ॥ ಪರಿಪೂರ್ಣನಿನ್ನೊಳಗಿರದ ವಸ್ತುಗಳನ್ನು | ಪರಿಕಿಸಿ ತಂದೆನೈ ವರದವಿಠಲಹರಿ ॥ ೩ ॥

30. ರಾಗಾ—ಕೇತಾರಗೌಳ.

ಶ್ರೀನಿವಾಸ ಸುಗುಣೈಕನಿಧೆ | ಶ್ರೀಮಾನಸ ಹಂಸ ದಯಾಜಲಧೆ ॥ ಪ ॥ ತೋಯದಸನ್ನಿಭಕಾಯ - ಮನೋಜನಿಕಾಯಮಾಪಮಧುರಾಲಾಪ ॥ ತೋಯಜಾಕ್ಷ ಪೃಥುಳಾಯತಪಕ್ಷ ನಿ | ಧಾಯಹೃದಿ ಧ್ಯಾಯಾಮಿ ಹರೆ ॥ ೧ ॥ ವಿಗ್ರಹಮಖಿಳಶುಭಗ್ರಹಣಂ ಮದನುಗ್ರಹಾರ್ಥಮಿದಿ ತಿಷ್ಠ ವಿಭೋ ॥ ಉಗ್ರಮುಖವಿಬುಧಾಗ್ರ್ಯಪೂಜಿತ ಸಮಗ್ರಸಮರ್ಘ್ಯಾಂ ಸ್ವೀಕುರುಭೋ ॥ ೨ ॥ ಪಾದಾರ್ಘ್ಯಾಚವನಾದ್ಯಮಖಿಳ ಜಗ - ದಾದ್ಯಕಲ್ಪಿತಂ ಭವದರ್ಥಂ ॥ ಹೃದ್ಯಸುರಭಿಸಂಪದ್ಯುತಮುತ್ತಮ | ಸದ್ಯಂಬುನಿವೇಜ್ಯಸುಖೋಷ್ಣ ಮಿದಂ ॥ ೩ ॥ ನಿಸ್ತುಲಕಾಂಚನ | ವಸ್ತ್ರಮಲಂಕುರು | ಕಸ್ತೂರೀತಿಲಕಂ ಸುಮುಖೋ ॥ ಕೌಸ್ತುಭರತ್ನ ಮಜಸ್ತುತಮಂಡನ | ಮಸ್ತುತಸೌಗುಣ ಭೂಷಣ ತೇ ॥ ೪ ॥ ಕುಂದಬಕುಳಕುರು ವಿಂದಮಹೋತ್ಪಲ | ಮಂದಾರಕಾ ಮಾಲ್ಯಾಕಲಿತಂ ॥ ಗದ ಬಂಧುರ ಸುಗಂಧಿ ತುಳಸಿಕಾಬೃಂದಮಲಂ ಕುರುಸನ್ನಿಹಿತಂ ॥ ೫ ॥ ಗಂಧರ್ವಾಮರ ವಂದಿತ ಮಲಯಾಗಂಧಲೇಪನ ಮಾಕಲಯಾ ॥ ಗಂಧವಾಹನುತ ಗಂಧಿವತೀಗುಣ ಬಂಧುರ, ದೂಪಂ ಜಿಘ್ರಹರೇ ॥ ೬ ॥ ತಾಪತ್ರಯ ಪರಿತಾಪನಿವಾರಣಂ - ತಾಪಸಮಾನಸದೀಪ

ಹರೇ || ಸೋಪಚಾರ ಘೃತದೀಪಮತೀಂದ್ರಿಯ | ರೂಪಾಲೋಕಯ ಶ್ರೀನೃಹರೇ || ೭ || ಮಂತ್ರರೂಪಸನ್ಮಂತ್ರವಿದಾಂವರ ಮಂತ್ರತಂತ್ರ ಯಂತ್ರಣಮೂರ್ತೇ | ಮಂತ್ರ ಪೂತಮುಖ ಯಾತ್ರಾಧಾರ ಸುಮಂತ್ರಪುಷ್ಪಂ ಸ್ವೀಕುರು ಹೇ || ೮ || ಛತ್ರಮಿದಂ ಭುವನತ್ರಯನಾಥ ವಿ | ಚಿತ್ರದಂತ ಚಾಮರಯುಗಳಂ || ಶ್ರೋತ್ರ ಮಿತ್ರ ತೌರ್ಯತ್ರಿಕಮಾಕಲಯಾತ್ರಭೋಗಾ ಮಧಿರಾಜಕಳಂ || ೯ || ಮಧುಪ ಕರ್ಾಹರ್ಣ ಮಧುರೀಕೃತ ಮಧುಮಧುರಿಪು ಪಾಯಸಮತಿಪೃಥ್ವಂ ಅಧಿಕ ಪಯೋಘೃತ ದಧಿಸೂಪಾಸ್ವಿತ ಮಧುನಾಸ್ವೀಕುರು ನೈವೇದ್ಯಂ || ೧೦ || ಬಿಂಬಾಧರ ಮಿಥು ಬಿಂಬವದನ ಶಿಶಿರಾಂಬು ಪಿಬಾಮಲ ಘನಸಾರಂ||ತಾಂಬೂಲಂ ಜಗದಂಬಾಕರ ಕಲಿತಂ ಬಹುಮನ್ವಸಕರ್ಪೂರಂ || ೧೧ || ತಾರಾಧಿಪಕುಮುದಾರಿ ನಿಭಾಲಂಕಾರ ನಿಭೃತ ಪರಿವಾರ ವಿಭೋ | ನೀರಾಜನಮತಿತಾರಾಯಿತ ಕರ್ಪೂರಾರಾ ರ್ತಿಕಮಂಗೀ ಕುರುಭೋ || ೧೨ || ಕುಕ್ಷಿಭುವನ ಸಂರಕ್ಷಿತ ಸೇವಕ ಪಕ್ಷಪ್ರದ ಕ್ಷಿಣಮನುವಾರಂ || ಪಕ್ಷಿಗಮನನಿಜ ವಕ್ಷೋಧೃತ ಶುಭಲಕ್ಷ್ಮ ಕರೋಮಿ ನಮ ಸ್ಕಾರಂ || ೧೩ || ಸಾಗರತನಯಾ ಯೋಗವಿಜಿತ ಭೂ | ಭಾಗಧೇಯ ನೀಳಾ ಸಹಿತಂ || ಭೋಗಿಶಯನ ಮನುರಾಗಪರಿಷ್ಕೃತಮಾಗಮಗೋಚರ ಕುರುಲಸಿತಂ || ೧೪ || ಆರಾಧನಮುಪಜಾಯತಮುಪಚಾರವಿಶೇಷೇಣ ಮಯಾ ಚರಿತಂ || ನಾರಾ ಯಣ ಚರಣಾರಾಧನಮಿತಿ ಕಾರುಣ್ಯೇನ ಕ್ಷಮಸ್ವೇದಂ || ೧೫ || ಚರಣಾಗತ ಜನಭರಣಾಲಂಕೃತ ಹರಿಣಾರ್ಯದ್ರಿನಿಕೇತನ ತೇ || ಚರಣಾರಾಧನ ಕರಣಾಂಚಿತ ಮಿತಿ ವರನವಿಠಲ ಗೀತಂ ತನುತೇ || ೧೬ ||

31. ರಾಗಾ—ಭೂರಿಕಲ್ಯಾಣಿ.

ಶ್ರೀನಿವಾಸ ಮುನಿಮಾನಸಹಂಸ ಮಹಾನುಭಾವ ದೇವ || ಪ || ಗಾನಲೋಲ ಶರಣಾನು ಕೂಲ ಖಗ ಯಾನ ವಾಸುದೇವ ||ಅ|| ಸೃಷ್ಟಿಕರ್ತ ಸಂತುಷ್ಟಹೃದಯ ಪರಮೇಷ್ಠಿ ಜನ್ಮಮೂಲಾ|ಅಷ್ಟಭೂತಿವರಕಷ್ಟಹರಣ ವಿಬುಧೇಷ್ಟ ದಿವ್ಯಲೀಲಾ || ದೇವ ದೇವ ಭೂದೇವ ವಂದ್ಯವಸುದೇವ ಜಲಧಿಸೋಮ || ದೇವವೈರಿ ವನದಾವ ಸುಂದರೀ ಭಾವಜನಿತ ಕಾಮ || ೨ || ರಾಮರಾಮ ಕರುಣಾ ಮಹೋದಧೆ ಶ್ರೀ ಮನೋಭಿರಾಮ || ರಾಮಣೀಯ ಸುಗುಣ ಧಾಮ | ಪುಣ್ಯತಮ ನಾಮ ಪೂರ್ಣ ಕಾಮ || ೩ || ಕಿಂಕರ ಜನಗತ ಸಂಕಟಹರ ಧೃತ | ಶಂಖಚಕ್ರ ಪದ್ಮ || ಪಂಕಜ ಲೋಚನ ಪಂಕವಿಮೋಚನ | ಪಂಕಜಹಿತಸದ್ಮಾ || ೪ || ದಿವ್ಯರೂಪಸುರಸೇವ್ಯ ಚರಣಮುನಿ | ಭಾವ್ಯಮಾನಚರಿತ | ಅವ್ಯಯಾತ್ಮ ಬಹು ಭವ್ಯಸುಗುಣಮಾಂಡವ್ಯ

ಪುಣ್ಯಭರಿತ || ೫ || ಪಾಹಿಮಾಮನಘದೇಹಿ ಭಕ್ತಿಮಪಿಮೇ ಹಿತೋಸಿ ನಿತ್ಯಂ || ಕಾಹಿಮೇಗತಿರ್ಮೋಹಿತಸ್ಯ ತಾಂಬ್ರೂಹಿ ದೇವ ಸತ್ಯಂ ||೬|| ಚರಣಯುಗಳ ಮಿಹ ಶರಣಮೇಹಿ ಭವ ತರಣಿಧಿಷಣಯಾಹಂ | ಕರುಣಯಾವ ಶ್ರೀ ವರದ ವಿಠಲ ಸುಖಕರಣ ವಿಗತಮೋಹಂ || ೭ ||

32. ರಾಗಾ—ಹುಸೇನಿ—ಆದಿತಾಳ.

ಶ್ರೀನಿವಾಸ – ಶ್ರೀಮನೋಲ್ಲಾಸ – ಶ್ರೀನಿವಾಸ || ಪ || ಶ್ರೀನಿವಾಸ ಶುಭ ಮಾಮವಗಾನಲೋಲಿತ ಸನ್ಮಾನಿತಲೀಲಾ || ಅ || ದೀಪಿತಭವದಾವ–ದೇವದೇವ | ದೇವದೇವವಸುದೇವತನಯ ಭೂದೇವ | ನಿವಹಸಂಭಾವಿತಭಾವ || ೧ || ರಾವ| ರಾಮರಘುವಂಶಲಲಾಮ | ರಾಮ | ರಾಮ | ರಮ್ಯ ಗುಣಧಾಮ ಮುನಿಜನ ಪ್ರೇಮ ದನುಜ ಸಂಗ್ರಾಮಭೀಮ || ೨ || ಕಂಜನಾಭಕಾಲಾಂಬುಧಾಭ – (ಕಂಜನಾಭ) ಕಂಜನಾಭ ರಿಪು ಭಂಜನಾತ್ತ ವರ ಕಂಜ ಚಕ್ರವಿಧುಮಂ ಜುಳ ವಕ್ತ್ರ || ೩ || ಸುಂದರಾಂಗ ಸುಕೃತಾಂತರಂಗ (ಸುಂದರಾಂಗ) ಸುರ ಸುಂದರೀ ನಿಚಯ | ನಂದಗೋಕುಲಾನಂದ ಮುಕುಂದ || ೪ || ಭವ್ಯರೂಪ ಭಕ್ತಾಲಯದೀಪ | (ಭವ್ಯ) ಭವ್ಯರೂಪಧೃತ ದಿವ್ಯಚಾಪಸುರ ಭಾವ್ಯ ಮಹಿಮ ಮಾಂಡವ್ಯ ಸುಸೇವ್ಯ || ೫ || ವ್ಯಾಘ್ರಶೈಲಾವಾಸಸುಶೀಲಾ || (ವ್ಯಾಘ್ರ) ಶೈಲ ಶಿಖರಾಗ್ರಲೋಲ–ದೇವಾಗ್ರಗಣ್ಯಾ ಭಕ್ತಾಗ್ರ್ಯಶರಣ್ಯಾ || ೬ || ದುರಿತದೂರಾ – ದುಃಖಾಭ್ರಸಮೀರಾ – (ದುರಿತ) ದುರಿತದೂರ ಫಣಿಗಿರಿವಿಹಾರ ಶ್ರೀ ವರದ ವಿಠಲಾ || ೭ ||

33. ರಾಗಾ—ಪಂತುವರಾಳಿ—ರೂಪಕ.

ಈತನೀತನೇ ರಮಾನಿವಾಸನು – ಕೇಳಿ ಜನರು || ಈತನೀಗಭಿದ್ವಿಲಾಸನು || ಪ || ಈತನೀಗ ಸರ್ವಭೂತ | ಜಾತಚೇತನರ್ಗೆ ಸೌಖ್ಯ | ದಾತವೇದಶಾಸ್ತ್ರ ವಿಖ್ಯಾತ ಲೋಕೈಕನಾಥ || ಅ || ಬ್ರಹ್ಮರೂಪನಿಂದ ಜಗವ | ನಿರ್ಮಿಸುತ್ತತಾನೆ ಸರ್ವ | ಕರ್ಮಫಲಗಳನ್ನೆ ಕೊಟ್ಟು | ಶರ್ಮಪಡಿಸುವ || ಚರ್ಮವಸ್ತ್ರವುಟ್ಟು ರೌದ್ರ | ಕರ್ಮಿಯಾಗಿ ಕಡೆಗೆ ಕಾಲ | ಧರ್ಮವನ್ನು ತೋರಿ ಜಲದೊಳೊಮ್ಮೆ ಮಲಗಿ ತೇಲುತಿರುವ || ೧ || ರಮೆಯನಾಳ್ವ ಭಾಗ್ಯವಂತ – ಕ್ಷಮೆಯನಾಳ್ವರಾಜ್ಯ ಕರ್ತ | ಕಮಲಭವನ ಪಡೆದ ಹಿರಿಯ ನಮರರೊಡೆಯು || ಸುಮಶರನಪೆತ್ತ ಚೆಲುವ ನಮಲಗಂಗೆ ಯಿತ್ತು ನಲಿವ | ನಮರವೈರಿಗಳನು ಕೊಲುವ | ಕಮಲನಾಥ ವಾಸು

ದೇವ ॥ ೨ ॥ ಉರಗಶಯನ ಗರುಡಗಮನ | ಪರಮಪದವ ನುಳಿದುಶೇಷ ಗಿರಿಯೊ ಳಿರ್ದುಬಂದವ್ಯಾಪ್ರು | ಗಿರಿಯ ಶಿಖರಕೆ ॥ ಭರದಿನಿತ್ಯಮುಕ್ತರೊಡನೆ | ಕರದಿ ಶಂಖ ಚಕ್ರಪಿಡಿದು ಕರುಣದಿಂದ ಚರಣ ಸೇವಕರನು ಪೊರೆವ ವರದ ವಿಠಲ ॥ ೩ ॥

34. ರಾಗಾ—ಸಾವೇರಾ—ಅಟ್ಟತಾಳ.

ಸುರಾಸುರಾರ್ಚಿತ ಸುರೋಜಲೋಚನ ಸರಾಗದಿಂದೆನ್ನ ನೀಕ್ಷಿಸೈ ॥ ಪರಾ ಪರೇಶನೆ ಪರಾತ್ಪರನೆ ನೀ ಪರಾಕುಮಾಡದೆ ಪಾಲಿಸೈ ॥ ಪ ॥ ವಿರಾಜಮಾನ ಸುವೀರಾಜವಾಹನ | ವಿರಾಟ್ಪುರುಷ ವಿಶ್ವಂಭರ ॥ ಕರಾರವಿಂದದಿ ಕರಾದಿಗಳ ಪಿಡಿ ದರಾತಿಮರ್ದನ ಧುರಂಧರ ॥ ೧ ॥ ಧರಾಧರಣಿಪಟು ಧರಾಧರಾಧಿಪ ಧುರಾ ವಹನ ದುರ್ಧರ್ಷಣ ॥ ಧರಾಮರರಬಹು ಪರಾಭವವ ಬಲು ಸರಾಗದಲಿ ನಿವಾರ್ ಪಣ ॥ ೨ ॥ ಜರಾಮರಣಗಳ ನಿರಾಕರಿಸಿ ವಸುಂಧರಾ ಭರಣ ಗುಣಭೂಷಣ ॥ ಸುರಾರಿ ಮರ್ದನ ಶರಾಸನಾಂಚಿತ ಕರಾನಿಹಿತ ಮಣಿಕಂಕಣ ॥ ೩ ॥ ಶಿರೀಷ ಕುಸುಮದ ಸರೀಸುಕೋಮಲ ಶರೀರ ನಿನ್ನದು ಈ ಪರಿ ॥ ಸಿರಿಯು ದರದೊಳೇ ಶಿರಿಯ ಧರಸಿಹ ಪರಿಯದೆಂತುಟೋ ಕೇಳ್ ಹರಿ ॥ ೪ ॥ ಪಯೋಧಿತನಯಾ ವಯೋ ಸುರೂಪನೆ ಧಯಾನಿಧಿಯೇ ಧರ್ಮಾತ್ಮನೆ ॥ ದಯಾರಸದಿ ಹೃತ್ಪಯೋಜ ಮಧ್ಯದಿ ನಿಯಾಮಿಸುವ ನಿರ್ಮಾಯನೆ ॥ ೫ ॥ ವರೇಣ್ಯಸಜ್ಜನ ಶರಣ್ಯ ಪುಲಿಗಿರಿ ಯರಣ್ಯಮಧ್ಯ ವಿರಾಜಿತ | ಹಿರಣ್ಮಯಾಂಬರ ಹಿರಣ್ಯಕಾಂತಕ ಹಿರಣ್ಯ ಗರ್ಭಸು ಪೂಜಿತ ॥ ೬ ॥ ವ್ಯಾಘ್ರನೆಂಬುವತ್ಯುಗ್ರದೈತ್ಯನಂ ನಿಗ್ರಹಗೈದ ಮಹಾತ್ಮನೆ | ಶೀಘ್ರದಿಭಕ್ತಾನುಗ್ರಹಮಾಳ್ಪಸುರಾಗ್ರಗಣ್ಯಪುಣ್ಯಾತ್ಮನೆ ॥ ೭ ॥ ಸುರರು ನರರು ನಿನ್ನರಿಮೆಯನರಿಯದೆ ನಿರುತವು ಸನ್ನುತಿಗೈವರೆ ॥ ಪರಮಪುರುಷ ಸುಖಕರನೀನೆ ಸ್ನುತ ಪರಪರಿನಿನ್ನನೆ ಪೊಗಳ್ವರೆ ॥ ೮ ॥ ಮೂಜಗಮಾಡುವ ಪೂಜೆಯಿಂದ ನೀ ನೀ ಜಗದಲ್ಲಿ ಒಲಿದಿರ್ಪೆಯ ॥ ಮೂಜಗ ಪೂಜಿಪ ವ್ಯಾಜದಿಂದ ನಿಜ ಪೂಜೆಯ ನೀ ಕೈಗೊಂಬೆಯ ॥ ೯ ॥ ನಿಜಪದದೊಳುನೀ ನಜಭವಮುಖಸುರವ್ರಜಗೋಚರನಾ ಗಿಲ್ಲವೈ ॥ ಸುಜನರ ಪೊರೆಯುವ ನಿಜಮತಿಯಿಂದಲಿ ತ್ರಿಜಗಕ್ಕೆ ಗೋಚರನಾ ಗಿಹೈ ॥ ೧೦ ॥ ನಿತ್ಯತೃಪ್ತನೀನತ್ಯುತ್ತಮ ನಿಜ ಭೃತ್ಯನಮರ್ತ್ಯನು ಮೋದದಿ | ನಿತ್ಯದಿ ನಿನ್ನತ್ಯುತ್ತಮಪದದೊಳು ಭಕ್ತಿಯ ಪಾಲಿಸು ನೇಮದಿ ॥ ೧೧ ॥ ಧರಣಿ ಯೊಳುರುತರ ಮೆರೆಯುವ ಫಣಿಭೂಧರದೊಳು ನಿರುತವು ಭಕ್ತರ | ಕರುಣದಿ ಪೊರೆ ಯುವ ಧೊರೆ ಸಿರಿವಲ್ಲಭ ವರದ ವಿಠಲ ಕರುಣಾಕರ ॥ ೧೨ ॥

35. ರಾಗಾ—ಕಾಪಿ.

ಕರುಣದಿ ಕಾಯೊ – ಕರುಣದಿ ಕಾಯೊ | ಕಮಲನಯನ ಯನ್ನ ‖ ಪ ‖ ಪರಮಪುರುಷಹರೆ ಸರಸಿಜನಾಭನೆ ‖ ಅ ‖ ನೀನೇ ತಂದೆಯು ಎಂದು ಜ್ಞಾನದಿಂದಲಿ ಬಂದು | ಧ್ಯಾನಿಸುವೆನು ಈಗ ‖ ೧ ‖ ತಾಯಿ ನೀನೇಯೆಂದು ಬಾಯಿಗೆ ಬಂದಂತೆ ಜೀಯ ನಿನ್ನನು ನೆನೆವೆ ‖ ೨ ‖ ಜಗದೊಳಗೆಲ್ಲ ನೀನೇ ಸುಗುಣ ಶೀಲನು ಎಂದು ಮುಗಿಲು ಮುಟ್ಟುತಲಿಪೆ ‖ ೩ ‖ ಸಂಗತಶ್ರಮವನ್ನು ಭಂಗವಗೈವ ಭುಜಂಗ ಗಿರಿಯ ವಾಸ ‖ ೪ ‖ ಲೀಲೆಯಿಂದಲಿ ವ್ಯಾಘ್ರ ಶೈಲದಲ್ಲಿರುವ ಶ್ರೀ | ಲೋಲ ವರದ ವಿಠಲ ‖ ೫ ‖

36. ರಾಗಾ—ಕಾಪಿ.

ನೀನೇ ಗತಿ ಯೆನಗೆ ನೀರಜನೇತ್ರ ನಿನ್ನ ಪಾದಂಗಳ ನಂಬಿದೆ ಕೊನೆಗೆ ‖ಪ‖ ಶ್ರುತಿಪಿತಧರ್ಮವಿಶ್ರುತನಾನಲ್ಲ ‖ ಸತತವು ಜ್ಞಾನಿಯ ಜೊತೆಸೇರಲಿಲ್ಲ ‖ ೧ ‖ ಭಕ್ತಿಪಥದಿ ಮನವರ್ತಿಸಲಿಲ್ಲ | ಯುಕ್ತಿಯಿಂ ವಿಷಯ ವಿರಕ್ತನಾನಲ್ಲ ‖ ೨ ‖ ಗುರುಕುಲವಾಸದ ಗುರುತೆನಗಿಲ್ಲ – ಪರಮಭಾಗವತರ ಪರಿಚರ್ಯವಿಲ್ಲ ‖ ೩ ‖ ಮಂತ್ರಾರ್ಥದಬೋಧೆ ಮನದೊಳಗಿಲ್ಲ – ತಂತ್ರದೊಳಗೆ ಜಾಣ್ಮೆ ಯನಗಿನಿತಿಲ್ಲ ‖ ೪ ‖ ಸಜ್ಜನಸಹವಾಸ ದುಜ್ಜುಗವಿಲ್ಲ – ದುರ್ಜನರಸಂಗತಿ ವರ್ಜಿಸಲಿಲ್ಲ ‖ ೫ ‖ ಹರಿಕಥೆಮಾಡುವ ಪ್ರಜ್ಞೆನನಗಿಲ್ಲ – ದುರುಳ ಕಾಮುಕಸಂಗಕಿರಿದಾಗಿಲ್ಲ ‖ ೬ ‖ ಪರಿಪರಿಕಷ್ಟವ ಪರಿಹರಿಸುವನೆ – ಪರಮಶ್ರೀ ಪುಲಿಗಿರಿ ವರದ ವಿಠಲನೆ ‖ ೭ ‖

37. ರಾಗ—ಜಾವಡಿ.

ಯನಗೆನಾನೇ ಸರಿ – ನಿನಗೆನೀನೆ ಸರಿ, ಎಣೆಗಾಣೆ ನೀವರ್ಗೆ, ವನಜನ ಯನ ‖ ಪ ‖ ಧರೆಯನಾಳುವ ಸಿರಿಯರಸನೀನು | ಈ ಧರೆಯೊಳುನಿರ್ಭಾಗ್ಯರೆರೆಯ ನಾನು ‖ ೧ ‖ ಪರಮೇಷ್ಠಿಯನ್ನು ಪಡೆದ ಪರಮನೀನು | ಬಲುದುರಿತಂಗಳಪ್ಪಿದ ದುರುಳನು ನಾನು ‖ ೨ ‖ ಪುಣ್ಯವಂತರ ಹೃದಯ ಗಣ್ಯನೀನು | ಕೃತಪುಣ್ಯ ಹೀನರಿಗಗ್ರಗಣ್ಯನಾನು ‖ ೩ ‖ ಪತಿತಪಾವನ ನೀನು ಪತಿತ ನಾನು | ಸದ್ಗತಿ ದಾತ ನೀನು ನಿರ್ಗತಿಕನಾನು ‖ ೪ ‖ ವರವ್ಯಾಘ್ರಗಿರಿಯ ವರದ ವಿಠಲನೀನು | ನಿಜ ಶರಣರ ಚರಣ ಧೂಳೀಪಟಲನಾನು ‖ ೫ ‖

38. ರಾಗಾ—ಭೈರವಿ—ರೂಪಕ.

ಯಾಕೆ ಕಷ್ಟಪಡುವೆ ನೀನು–ಲೋಕನಾಯಕ ಸಾಕು ನಿನ್ನಮಾಯಾ | ಜೋಕೆಯಿಂದ ಸಲಹು ನಮ್ಮ || ಪ || ಸಿರಿಯೆ ಪಟ್ಟದರಸಿ ನಿನಗೆ | ಕಿರಿಯಮಡದಿ ಧರಣಿಯಾಗೆ | ಹಿರಿಯಮಗನು ಸರ್ವ ಜನರೊಳಿರುತ ಕಾಮಿಸುವನು ಜಗವ || ಯಾಕೆ || ೧ || ಮಗನು ಜಗವ ನಿರ್ಮಿಸುವನು | ಮಗುಳೆಲಯವಗೈವ ಮೊಮ್ಮಗನು, ನಿನ್ನದಾಸಿಯಿ–ಜಗವ ಮೋಹಿಸುತ್ತಲಿರುವಳ್ || ೨ || ನೀರೊಳಿರುತ ನೋರೆ ಮುಚ್ಚಿ, ಕೋರೆ ಮಸೆದು ಕಂಬದಿಂದ | ಹಾರಿಯಳೆದು ಧಾರಿಣಿಯ | ಧೀರ ನೃಪರನೆಲ್ಲಕೊಂದು || ಯಾಕೆ || ೩ || ಊರುಬಿಟ್ಟು ಸಾರಿ ವನವ | ಜಾರನಾಗಿ ಭಂಗಪಡಿಸಿ || ನಾರಿಯರನು ದಾರತೇಜಿ|ಯೇರಿಮೆರೆದು ಬಾರಿ ಬಾರಿ||ಯಾಕೆ ||೪|| ಪರಮಪದವನಗಲಿ ಹಿಂಡ | ಕಿರಣರಥವನುಳಿದು ಕ್ಷೀರ | ಶರಧಿಯನ್ನು ಬಿಟ್ಟು ವ್ಯಾಘ್ರ | ಗಿರಿಯೊಳಿರುವ ವರದ ವಿಠಲ || ಯಾಕೆ || ೫ ||

39. ರಾಗಾ—ಪಂತುವರಾಳಿ—ಆದಿತಾಳ.

ಮಟ್ಟುದೋರಿತು–ನಿನ್ನ ಗುಟ್ಟು ಹಾರಿತು || ಪ || ಸಿಟ್ಟುಗೊಳ್ಳಬೇಡವೆನ್ನ ದೃಷ್ಟಿಯಿಂದ ನೋಡಿ ಕಂಡೆ | ಅಷ್ಟಸಿದ್ಧಿಗಳಿದ್ದರೂ ಪೊಂದಿಪ್ಪು ಕೊರತೆ ಕೃಷ್ಣನೆಂಬ || ಅನು || ಹೇಯಗುಣವಿಲ್ಲ ಮುನಿ – ಗೇಯನಿನ್ನೊಳೆಂಬಜನರ | ಬಾಯ ಮುಚ್ಚಿಸುವೆನೆಂದತ್ಯಾಯಸಪಡುವನೆಂಬ || ಮಟ್ಟು || ೨ || ಸತ್ಯಕಾಮನಹುದು ನೀನು–ಸತ್ಯಸಂಕಲ್ಪನು ನಿನಗೆ || ಮಿಥ್ಯಾವಚನವಿಲ್ಲವೆಂಬೊಂದಿ ದತ್ಯಧಿಕ–ಕೊರತೆಯೆಂಬ|| ಮಟ್ಟು || ೨ || ಜ್ಞಾನವಂತನೆಂದು ಬಹುಮಾನವಂತನಾದರೂ || ಅ || ಜ್ಞಾನಶೂನ್ಯನೆಂಬ ದೊಡ್ಡ| ಹಾನಿಯೊಂದಿರುವದೆಂಬ || ೩ || ಎಲ್ಲ ವಸ್ತುಗಳುಂಟು ನಿನಗೆ | ಫುಲ್ಲನಾಭ ನಿನ್ನ ಬಳಿಯೋ | ಳಿಲ್ಲವೆಂಬ ಶಬ್ದ ಮಾತ್ರವಿಲ್ಲವೆಂಬ ಮಾತು ಬಂದಿಹ || ೪ || ಪಾಪವೆಂಬ ಕತ್ತಲೆಗೆ | ದೀಪನಾಗಿದ್ದರು ಜನರ | ಪಾಪಗಳನಪಹರಿಪ | ದೀಪನಾ ಬಿಡದು ಎಂಬ || ಮಟ್ಟು || ೫ || ಜ್ಯೋತಿಗಳಿಗೆಲ್ಲ ಪರಂಜ್ಯೋತಿಯಾಗಿರುವ ನಿನಗೆ ಆ | ಜ್ಯೋತಿಗಳೆತ್ತಿ ದಾರತೀ ಪ್ರೀತಿಯೆಂದು ಜನರು ಪೇಳ್ವ|| ಮಟ್ಟು || ೬ || ಹಾನಿವೃದ್ಧಿ ಶೋಕಮೋಹ | ಜ್ಞಾನ ನಿನ್ನೊಳಿಲ್ಲವೆಂಬ || ಹೀನವಾಕ್ಯವ ಪೇಳ್ವರೆಲ್ಲ ಮಾನನಿಧಿಗಳೆಂತೆಂಬ|| ಮಟ್ಟು || ೭ || ನಿತ್ಯತೃಪ್ತನಾದರೂ ನಿಜ–ಭೃತ್ಯರನ್ನು ಪಾಲಿಸುವ || ನಿತ ಕರ್ಮದಲ್ಲಿ ಕೃತಕೃತ್ಯನು ನೀನಲ್ಲ

ವೆಂಬ || ೮ || ಕಷ್ಟಪಡಬೇಡವೆನ್ನೊ-ಳೆಷ್ಟು ದುರ್ಗುಣಂಗಳಿಹ| ವಷ್ಟನು ವೊಪ್ಪಿಸಿ ನಿನ | ಗಿಷ್ಟನಾಗಜೇಕೆಂಬ ॥ ಮಟ್ಟು || ೯ || ಕ್ಷೀರದಧಿನವನೀತ-ಚೋರನಾಗಿರಲಿ ಗೋಪೀ|ಜಾರನಾಗಿರಲಿ ಸಂಸಾರವೈರಿಯು ನೀನೆಂಬ॥ ಮಟ್ಟು || ೧೦ || ಕೊರತೆ ಯೆಂಬಾ ಜನರಿಗೆಲ್ಲ-ವರವನಿತ್ತು ಪೊರೆವೆನೆಂಬ || ಸ್ಥಿರವಾಗಿ ಶ್ರೀ ವ್ಯಾಘ್ರ, ಗಿರಿ ಯೊಳಿರುವ ವರದವಿಠಲನೆಂಬ॥ ಮಟ್ಟು || ೧೧ ||

40. ರಾಗಾ—ಹಂಸೆ.

ಶ್ರೀನಿವಾಸಪಾಹಿಮಾಂ – ಶ್ರಿಯಮಯಸ್ಮನೋರವಾಂ ||ಪ|| ದೀನಲೋಲ ಕಾವನ – ಧೀರಮುನಿವಿಭಾವನ || ೧ || ಪೂರ್ಣಚಂದ್ರಾನನ – ಪುಣ್ಯವೃಕ್ಷಕಾ ನನ || ೨ || ಸೇವಕಾನಂದನ-ದೇವಕೀನಂದನ || ೩ || ಶಂಖ ಚಕ್ರ ರಂಜನ – ಕಿಂಕರಾರ್ತಿಭಂಜನ || ೪ || ಮಾರಕೋಟಿ ಸುಂದರ – ಶ್ರೀ ರಮಾಮನೋಹರ || ದೂರಿತಾಘ ಸಂಕುಲ – ದುಷ್ಟಕುಲಾನಲ || ೬ || ಪುಂಡರೀಕ ಲೋಚನ – ಚಂಡ ಪಾಪಮೋಚನ || ೭ || ಭವಭಯೋತ್ತಾರಣ – ಭವ್ಯಸುಗುಣ ಪೂರಣ || ೮ || ವ್ಯಾಘ್ರಾದ್ರಿನಾಯಕ-ವ್ಯಕ್ತಸೌಖ್ಯದಾಯಕ || ೯ || ತವಪದಾಂಬೋರುಹಂ | ಭವತು ಹೃತ್ಸುಖಾವಹಂ || ೧೦ || ವರದ ವಿಠಲ ಶ್ರೀಧರ-ಶರಣಜನ ದಯಾ ಕರ || ೧೧ ||

41, ಕೇತಾರಗೌಳ—ಜಂಪೆತಾಳ.

ಶ್ರೀ ವ್ಯಾಘ್ರಗಿರಿವಾಸ-ಶ್ರೀ ಶ್ರೀನಿವಾಸ || ದಿವ್ಯಸೂರಿಸಮಾಜ ಸೇವ್ಯ ಪಾದಾಬ್ಜ || ಪ || ಕಮಲಸಂಭವ ಜನಕ-ಕಮಲಾಪ್ತಕುಲತಿಲಕ | ಕಮಲ ಸನ್ನಿಭಚರಣ | ಕಲುಷಗಣಹರಣ || ಕಮನೀಯಗುಣಹಾರ – ಕಲ್ಯಾಣಗುಣ ಪೂರ ॥ ಕಮಲಾಮನೋಹರ ಕಲಿತಶೃಂಗಾರ || ೧ || ಲೋಕಮೋಹನರೂಪ | ಲೋಕರಕ್ಷಣ ಚಾಪ | ಶೋಕಮೋಹವಿದೂರ ಸುಕೃತಿಪರಿವಾರ ॥ ನಾಕನಿಳಯ ಸಮಾಜ – ನಮಿತಪಾದಾಂಭೋಜ | ಪಾಕರಿಪು (?) ಮಣಿನೀಲ ಪದ್ಮಾನುಕೂಲ ॥ ೨ ॥ ಮಾಂಡವ್ಯಮುನಿಸೇವ್ಯ | ಮಾನಸಾಂಬುಜಭವ್ಯ – | ಪಾಂಡುಸುತ ಪರಿ ಪಾಲ | ಪಾವನ ಸುಶೀಲ || ಭಾಂಡಜಾರ್ತಿಚ್ಛೇದ | ಭಾಗವತ ಸನ್ಮೋದ | ಗಾಂಡೀವಿಸುಶ್ಯಾಲ – ಗಾನರಸಲೋಲ || ೩ || ತವಚರಣಪಂಕಜಂ – ತೃಪ್ತಜನ ಸುರಕುಜಂ | ಭವಜಲಧಿತಾರಣಂ ಭವತುಮಮಶರಣಂ || ತವನಾಮಕೀರ್ತನಂ |

ತಾಪಪರಿಮೋಚನಂ || ಶ್ರವಣಯೋರ್ದೇಹಿಮಮ-ಶಮಿತಾಪಮಹಿಮಾ || ೪ || ಸಕಲಲೋಕಶರಣ್ಯಾ | ಸರ್ವದೇವವರೇಣ್ಯಾ | ನಿಖಿಲಭೂತವಾಸ-ನಿರ್ಮಲಸುವೇಷ || ಅಕಲಂಕಚರಿತ-ನಿತ್ಯಾನಂದಗುಣಭರಿತ || ಶಿಖರಿಷುವಿಹರಣಕುಶಲ- ಶ್ರೀವರದವಿಠಲ || ೫ ||

42. ರಾಗ—ಪೂರ್ವಿ—ಆದಿ.

ಶ್ರೀವಾಸ ಶ್ರೀವಾಸ || ಪ || ಭಜಿಸಿದೆ ನಿನ್ನನು, ತ್ಯಜಿಸದಿರೆನ್ನನು | ಭಜತಾಮರತರು | ಕುಜನವಿದೂರ || ಅ || ತಂದೆತಾಯಿನಿಜ ಬಂಧುಸಹೋದರ | ನಂದನಾಪ್ತನೀ ನೆಂದುನಂಬಿದೆ || ಶ್ರೀವಾಸ || ೧ || ನಿನ್ನ ಮರೆತುಬಹು ಜನ್ಮ ಜನ್ಮದೊಳು | ಖಿನ್ನನಾಗಿ ನಿಜ ವನ್ನೆಕಾಣದೆ || ಶ್ರೀವಾಸ || ೨ || ಕರುಣದಿಂದ ನಿಜ ಚರಣಸೇವಕರ | ಪೊರೆವ ವ್ಯಾಘ್ರಗಿರಿ ವರದವಿಠಲ || ಶ್ರೀವಾಸ || ೩ ||

43, ರಾಗಾ—ವರಾಳಿ.

ತವದಾಸೋಹಂ ತವದಾಸೋಹಂ ! ತವದಾಸೋಹಂ | ದಾಶರಥೆ || ಪ || ದಶರಥಪುತ್ರಾ – ಪಶುಪತಿಮಿತ್ರ—ಶಶಿರವಿನೇತ್ರಾ-ದಾಶರಥೆ || ಪ || ವಿಧೃತಕೋದಂಡ – ವಿಪುಲದೋರ್ದಂಡ | ಕದನಪ್ರಚಂಡ-ದಾಶರಥೆ || ೨ || ತಾಟಕಾಹನನ—ತಾಡಿತ ಕುಜನ | ಹಾಟಕವಸನಾ—ದಾಶರಥೆ || ೩ || ಮನಸಿಜವೇಷ | ಮಂಜುಳಭಾಷ | ಮನುಜವಿಶೇಷ-ದಾಶರಥೆ || ೪ || ಶರದಾಭಗಾತ್ರ—ಶರನಿಧಿಯಾತ್ರಾ | ಕರಧೃತಗೋತ್ರ—ದಾಶರಥೆ || ೫ || ರಾವಣಹರಣ—ಪಾವನಚರಣ-ಶ್ರೀವಧೂರಮಣ—ದಾಶರಥೆ ||೬|| ರಕ್ಷಿತಲೋಕ | ರಚಿತಸುಶ್ಲೋಕ|ಶಿಕ್ಷಿತಕಾಕ | ದಾಶರಥೆ || ೭ || ವ್ಯಾಘ್ರಾಗಶಮನ – ವ್ಯಾಘ್ರಾರಿಗಮನ | ವ್ಯಾಘ್ರಾದ್ರಿಸದನ-ದಾಶರಥೆ || ೮ || ಪರಿಹೃತಕುಟಿಲ-ಸರಸಿಜನಿಟಿಲ | ವರದಾರ್ಯವಿಠಲ-ದಾಶರಥೆ || ೯ ||

44. ರಾಗಾ-ಶಂಕರಾಭರಣ.

ಪಾಲಿಸೋಯನ್ನಪರಾತ್ಪರಾ—ಹರಿ ||ಪ|| ಪಾಲಿಸೊ ಬುಧಹಿತ, ಫಾಲನಯನನುತ | ಲೀಲಾನಟನಫಣಿ ಶೈಲನಿಳಯ—ಹರಿ ||ಅ|| ಜಲಜಭವನ ನಿಜಕುಕ್ಷಿಯೊಳಿದ್ದ—ಸುಲಲಿತವೇದಾಪಹಾರಿಯ || ಕಂಡು || ಜಲಚರರೂಪಿನಿಂದಾ ಖಳನಸಂಹರಗೈದು, ಜಲಜಸಂಭವನಿಗೆ ಒಲಿದ ಮತ್ಸ್ಯಾವತಾರ ||೧|| ಅಂದುದೂರ್ವಾಸನಶಾ

ಪದಿ—ಜಗವು-ಇಂದಿರೆ ಕರುಣಾವಿಹೀನದಿ || ಬಲು || ನೊಂದು ಕಂಗೆಡುತಲಿರೆ, ಸಿಂಧುಮಥನಗೈದು | ಇಂದಿರೆಯನುತಂದ ಮಂದರಧರಕೂರ್ಮ || ೨ || ದುರುಳ ಹಿರಣ್ಯಾಕ್ಷನೆಂಬುವ-ದೈತ್ಯ-ಧರಣಿಯನಪಹಾರಗೈಯ್ಯಲು || ಬೇಗ || ಪರಮೇಷ್ಟಿ ಗೊಲಿದು ಸೂಕರನ ರೂಪವತಾಳಿ | ಧರಣೀಚೋರನ ಕೊಂದ ಸರಸೀರುಹಾಂಬಕ || ೩ || ಸರಸಿಜಜನ ವರದರ್ಪದಿ | ಜಗವ ನುರುಜಿ-ತರಳನಭಾದೆಗೈಸಿದ || ಬಲು || ದುರುಳ ಹಿರಣ್ಯಕನುರವನಖದಿಂದ ಸೀಳೀ || ಕರುಳಮಾಲೆಯನಿಟ್ಟ ಧುರಧೀರನರಹರಿ || ೪ || ಬಳಿಯ ಮೂರಡಿ ಭೂಮಿದಾನವ-ಬೇಡಿ-ಅಳೆದು ಈರಡಿಮಾಡಿ ಲೋಕವ ||ಮತ್ತೆ|| ಉಳಿದೊಂದು ಪಾದದಿ ಬಲಿಯ ತಲೆಯನು ಮೆಟ್ಟಿ, ನಲಿದು ಗಂಗೆಯಪೆತ್ತ | ಚಲುವ ವಾಮನರೂಪ || ೫ || ಚಕ್ರಾಂಶನಾದ ಕಾರ್ತವೀರ್ಯನ-ಭುಜ ಚಕ್ರದೊಡನೆ ದುಷ್ಟಭೂಪರ || ಅತಿ || ಅಕ್ರಮವನು ಕಂಡು ವಿಕ್ರಮಾನ್ವಿತ ನೃಪ, ಚಕ್ರವ ಮುರಿದ ಮುನಿಚಕ್ರರಕ್ಷಕರಾಮ || ೬ || ಕ್ರೂರರಾವಣ ಕುಂಭ ಕರ್ಣರ—ಬಲು-ಘೋರತನಕೆ ತ್ರಿದಿವೇಶರ || ದೊಡ್ಡ || ದೂರಕೇಳುತ ಮನುಜಾಕಾರವ ಧರಿಸಿ ದೈತ್ಯ || ವೀರರ ಮಡುಹಿದ | ಶ್ರೀರಾಮ ಮಾರುತಿ ||೭|| ಬಲಭದ್ರನೆಂಬುವ ನಾಮದಿ-ಧುರದಿ-ಹಲ ನೇಗಿಲುಗಳನು ಹಸ್ತದಿ ||ಪಿಡಿದು|| ಬಲವಂತರಾದ ದೈತ್ಯಕುಲವತರಿದು ದಿವಿಜ, ಕುಲವ ಸಂರಕ್ಷಿಸಿದ ಜಲಧರ ನಿಭಚೇಲ ||೮|| ದುಷ್ಟಕ್ಷತ್ರಿಯರ ಭಾರ ತಾಳದೆ—ಧರಣೀ- ಸೃಷ್ಟೀಶನಲ್ಲಿ ದೂರಿಡೆ || ಬಲು ಭ್ರಷ್ಟ ಕೌರವ ಯುಧಿಷ್ಠಿರರಿಗೆ ವೈರ ಪುಟ್ಟಿಸಿ ಭೂಭಾರ ಮಟ್ಟುಮಾಡಿದಕೃಷ್ಣ ||೯|| ಕಲಿಯಿಂದ ಕಿಡೆ ನಿಜಧರ್ಮವು-ಬಹು-ಖಳರಿಂದ ವ್ಯಾಪಿಸೆ ಲೋಕವು ||ಆಗ-ಲಲಿತತೇಜಿಯನೇರಿ ಕಲುಷಾತ್ಮಕರಕೊಂದು | ವಿಲಸಿತ ಧರ್ಮವನ್ನು ಸಲಹಿದ ಕಲ್ಕಿರೂಪ ||೧೦|| ಗಿರಿಜಾವಿವಾಹದಿ ತ್ವಷ್ಟ್ರನ-ಶಾಪ-ಶರಧಿಯೀಂಟಿದ ಮುನಿಗೈದಲು||ಬೇಗ-ವರವ್ಯಾಘ್ರಗಿರೀಶನೆ ಶರಣೆಂದಮುನಿಪಗೆ ವರವಿತ್ತುಸಲಹಿದ ವರದವಿಠಲಹರಿ||೧೧||

45. ರಾಗ-ಆನಂದ ಭೈರವಿ.

ಶ್ರೀನಿವಾಸಸಾಹಿಮಾಂಸದಾ-ಶ್ರಿತಜನಾಮೋದ-ಮೌನಿಜನಚಾತಕಾಂಬೋದ||೧|| ಸಾನುರಾಗ ಯುಗಮುನಿ-ಮಾನಿತಾವರಾರವಿಂದ | ಭಾನುಕೋಟಿತೇಜ ಸಾಮಗಾನಲೋಲ ಶ್ರೀಮುಕುಂದ||ಅ||ವಾರಿಜಾಸನಾರ್ಚಿತಪ್ರಭೋ-ವಂದಾರುಜನ ಪಾರಿಜಾತ ಧೃತಕೌಸ್ತುಭ|ಶಾರದೇಂದೀವರನೇತ್ರ, ಶ್ಯಾಮಳ ನೀರದಗಾತ್ರ||ಸಾರ

ಸನ್ಮಣಿ ಕೇಯೂರಹಾರ-ಭೂಷಾಸುಪವಿತ್ರ ॥೨॥ ಸರ್ವಲೋಕಪಾಲಕೇಶ್ವರ-ಸೇವಿತಸುಪರ್ವಗಣಸದ್ಗುಣಾಕರ ॥ ಶರ್ವಸುರಪತಿಮುಖ್ಯ-ಸರ್ವದೇವವರವರ್ಯ ಗರ್ವಿತದೈತ್ಯಾಂಧಃಸೂರ್ಯ-ಪರ್ವತಾಧಿರಾಜಧೈರ್ಯ ॥೩॥ ಸೃಷ್ಟಿರಕ್ಷಣಾಂತಕಾರಕ-ಸರ್ವಾತ್ಮಕ-ಶಿಷ್ಟದೇವ ದ್ವಿಜರಕ್ಷಕ । ಅಷ್ಟಸಿದ್ಧಿಪ್ರದಾ ಸರ್ವೋತ್ಕೃಷ್ಟಕಷ್ಟನಿವಾರಣ । ಅಷ್ಟಮೂರ್ತಿ ಪ್ರಿಯಸರ್ವಾಭೀಷ್ಟದ ಗೋಪಾಲಕೃಷ್ಣ ॥ ೪ ॥ ಶ್ರೀಕರಶೃಂಗಾರಶೇಖರ—ಶ್ರೀಕರಗೃಹ-ಶ್ರೀಕರ ಧಾರಿತ ಮಂದರ ॥ ಪಾಕವೈರಿಮಣಿನೀಲ, ಪಾವನಸುಗುಣಶೀಲ॥ ಶೋಕಮೋಹಸುವಿವೇಕ ನಿತ್ಯೋದಾರ ಶೂರ ॥ ೫ ॥ ಮಾರಜನಕಮಂಗಳಾಕರ।ಮಾರಶತಕೋಟಿ ಸುಂದರ॥ಸಾರವಸ್ತು ಜಯಪರಿ ಪೂರವ್ಯಾಘ್ರಾದ್ರಿವಿಹಾರ । ಧೀರವರದವಿಠಲ, ಸುರಾಸುರಾರ್ಚಿತಾಂಘ್ರಿಕಮಲ ॥ ೬ ॥

46. ರಾಗಾ-ಪಂತುವರಾಳಿ-ಆಟತಾಳ.

ಏನುಂಟು ನಿನ್ನೊಳಗೆ-ನಾ ಬೇಡಲು-ಏನುಕೊಡುವೆ ಯನಗೆ ॥ಪ॥ ಶ್ರೀನಿವಾಸನೇಬಲು ದೀನನೊಳವಲಕ್ಕಿಯೇನೆಂದು।ಬೇಡಿದೆ ಮಾನವನೋಡದೆ ॥ ೧ ॥ತಿರುಕನಾಗಿತಂದೆ ಧರೆಯ ಕಶ್ಯಪನೆಂಬ । ತಿರುಕಹಾರುವನಿಗೆ ಗುರಿಮಾಡಿದೆ ॥ ಸಿರಿಯನು ರಜಕನ ಪರಿವಾರದಿ ಬಿಟ್ಟು । ಗರಳನಹಾಸಿನೊಳೊರಗಿದೆಕೃಷ್ಣ ॥ ೭ ॥ ಧನಕನಕಂಗಳು ನಿನಗಿರೆ ಸತ್ರಾಜಿತನ ಮಣಿಯನ್ನು ನೀಗಣಿಸುವೆಯಾ ॥ ಅನುವಾದ ಮನೆಯಿರೆ ಮುನಿಮನವೇತಕೆ । ಮನೆವಾರ್ತೆಯುಳ್ಳರೆ ವನವಾಸವೇಕೆ ॥೨॥ ಕಾಮಧೇನುವು ಕಲ್ಪನಾಮಕ ತರುವುಜಿಂ । ತಾಮಣಿಗಳನು ಸುತ್ರಾಮನಿಗಿತ್ತು ॥ ಗೋಮಯರಸಗಳ ಕಾಮಿಸಿ ಕದ್ದುನೀದಾಮೋದರನಾದೆ । ತಾಮರಸಾಕ್ಷ ॥ ೩ ॥ ಖ್ಯಾತಿನೋಡದೆರಣ । ಭೀತಿಯೊಳೋಡಿದೆ। ಜಾತಿನೋಡದೆ ಜಾಂಬವತಿಗೂಡಿದೆ ॥ ನೀತಿಯನೋಡದೆ ಕೋತಿಯೊಳಾಡಿದ । ಮಾತುನೋಡದೆ ಬರಿಮಾಯೆಯಪಿಡಿದೆ ॥ ೪ ॥ ಗತಿಹೀನರಿಗೆವರ ಗತಿಯತೋರಿಪನಾಮ ಸ್ಮೃತಿಯೊಂದಿತ್ತರೆಸಾಕೆನಗೆ ॥ ಅತಿಶಯವಿದುಯನ್ನಮತಿಯೊಳು ನಿನ್ನಯ ರತಿಯನ್ನು ಪಾಲಿಸು।ವರದವಿಠಲರಾಯ ॥೫॥

47. ರಾಗ—ಬೇಹಾಗು.

ನಿನ್ನ। ದಾಸರದಾಸ ನಾನಯ್ಯ-ಹರಿ-ಯನ್ನನುಪೇಕ್ಷಿಪರೇನಯ್ಯ ॥ ಪ ॥ ಕಾಮಕ್ರೋದಗಳಿನ್ನೂ।ಬಿಡಲಿಲ್ಲ-ನಿನ್ನ - ಪ್ರೇಮವೆನ್ನೊಳುಕಾಲಿಡಲಿಲ್ಲ । ನೇಮನಿಷ್ಠೆಗಳನು ಕೊಡಲಿಲ್ಲ-ಭವ-ತಾಮಸಬೀಜವ ಸುಡಲಿಲ್ಲ ॥ ೧ ॥ ಆಚಾರದಲಿ ಕಾಲಗತಿಯಿಲ್ಲ-ಒಲು-ನೀಚರಸಂಗಕೆ ಮಿತಿಯಿಲ್ಲ । ಪ್ರಾಚೀನಕರ್ಮಕ್ಕೆಚ್ಯುತಿಯಿಲ್ಲ-ಇದ-

ಗೋಚರಪಡಿಸುವಮತಿಯಿಲ್ಲ || ೨ || ದೇಹದಿಬಲವಿಲ್ಲವಾದರೂ–ವ್ಯಾ–ಮೋಹವು ಬಿಡದಲ್ಪವಾದರೂ || ಗೇಹದಿಸುಖವಿಲ್ಲದಿದ್ದರು–ಈ ಸೋಹಮೆಂಬುದಕಿಲ್ಲ ಬೇಸರು || ೩ || ದಾಸರಸಂಗದೊಳಾಡಿಸು–ಹರಿ–ವಾಸರವ್ರತದೊಳು ಕೂಡಿಸು || ವಾಸುದೇವನೆನಿನ್ನ ಪಾಡಿಸು–ಸಿರಿ ವಾಸನಾಮದಸವಿ ಯೂಡಿಸು || ೪ || ಶರಣವತ್ಸಲನ ಹುದಾದರೆ–ಘನ–ಕರುಣಾರಸನಿನಗುಳ್ಳರೆ | ಕರುಣಿಸುಪುಲಿಗಿರಿ ವಾಸಹರೆ–ಸಿರಿ–ವರದವಿಠಲನೀನೆ ನಮ್ಮದೊರೆ || ೫ ||

48. ರಾಗ—ಕೇತಾರಗೌಳ.

ಕೊಡುಕೊಡುವರವನು, ತಡವುಮಾಡದೆ ಯೆನ್ನೊಡೆಯ ಶ್ರೀಹರಿ ಕೃಪೆ ಮಾಡಯ್ಯ || ಪ || ಬಿಡದಿರೆನ್ನನು ಜಗ ದೊಡತಿಯಾಣೆನಿನ್ನಡಿಗಳನೆಂದಿಗೂ ಬಿಡೆನಯ್ಯ || ಅ || ಕ್ಷಿತಿಯೊಳಗತಿಶಯ ಪತಿತಪಾವನಶ್ರೀ–ಪತಿನೀಗತಿಯೆನುತಿಹೆನಯ್ಯ|| ರತಿಪತಿ ಪಿತನೆಸು ಮತಿಯನು ಪಾಲಿಸಿ | ಗತಿಯನು ತೋರಿಪುದೆನಗಯ್ಯ || ೧ || ನಿನ್ನಪದವನಂಬಿ–ನಿನ್ನವನೆನಿಸಿದ–ಯನ್ನನುಪೇಕ್ಷಿಪರೇನಯ್ಯ || ಸನ್ನುತ ನಿನ್ನನು ಮನ್ನಿಸಿ ಕೇಳುವ | ಬಿನ್ನಪವಿನಿತೆ ಕೇಳಯ್ಯ || ೨ || ಎಲ್ಲರ ಹೃದಯದೊಳಲ್ಲಿ ನೆಲಸಿರುವ | ಫುಲ್ಲನಯನನೀ ಪೇಳಯ್ಯ || ಕಲ್ಲುಮನದಿನೀ ನೊಲ್ಲದೊಡೀ ಜಗ–ದಲ್ಲ ಪೋಪುದಿನ್ನೆಲ್ಲಯ್ಯ || ಪತಿಯಗಲಿದ ಪತಿವ್ರತೆಗೆ ಇತರರಲಿ ರತಿ ಸಂಜನಿಸುವದೇನಯ್ಯ | ಗತಿಪತಿಯೆಲ್ಲರ ಪತಿನೀನೆನ್ನುತ | ಶ್ರುತಿನುತಿಪುದು ಪುಶಿಯೇನಯ್ಯ || ೪ || ಜಗದೊಳು ನಿನ್ನನೆ ಸುಗುಣಿಯುಯೆನ್ನುತ | ನಿಗಮವು ಪೊಗಳುತಲಿಹುದಯ್ಯ || ಖಗಪತಿಗಮನನೆ ಬಗೆಬಗೆಯಲಿ ರತಿ | ಸೊಗಯಿಸು ನಿನ್ನೊಳು ಯನಗಯ್ಯ|| ೫ || ಸೃಷ್ಠಿನಾಥಪದ ವಿಷ್ಟರ ಭಕ್ತಿಯ | ಕೊಟ್ಟರಭೀಷ್ಟವು ಯನಗಯ್ಯ || ಇಷ್ಟರಮೇಲಿನ್ನು ಲಕ್ಷ್ಮೆಕೊಟ್ಟರೂಯನ ಗಿಷ್ಟವಿಲ್ಲಶ್ರೀ ಕೃಷ್ಣಯ್ಯ || ೬ || ಚರಣಕಮಲದೊಳಗೆರಗುವೆ ಪುಲಿಗಿರಿ ವರದವಿಠಲ ದಯೆಯಿರಿಸಯ್ಯ || ಚರಣಶರಣನಿಗೆ ಕರುಣಿಸದಿರ್ದರೆ ಕರುಣಿಗಳರಸರಿನ್ನಾರಯ್ಯ || ೭ ||

49 ರಾಗ—ಶ್ರೀರಾಗ.

ಇದನಾದರು ಕೊಡದಿದ್ದರೆ ನಿನ್ನ–ಪದದ ಸೇವೆಗೆ ಜನರೊದಗುವರೆ || ಪ || ದೊರೆತನವಾಗಬೇಕೆನಲಿಲ್ಲ–ಬಲು, ಸಿರಿತನವನು ವಾಂಛಿಸಲಿಲ್ಲ || ಪರಿಪರಿಭೋಗದ ಸ್ಪೃಹೆಯನಗಿಲ್ಲ–ನಿನ್ನ–ಸ್ಮರಣೆಯೊಂದಿತ್ತರೆ ಸಾಕಲ್ಲ ||೧|| ಅನ್ನವಸ್ತ್ರವಕೇಳುವದಿಲ್ಲ

ಒಳ್ಳೆ-ಚಿನ್ನ ಬಣ್ಣವಕೊಡು ಎನಲಿಲ್ಲ || ಹೆಣ್ಣುಮಣ್ಣಿನೊಳಾಸೆ ಯನಗಿಲ್ಲ-ಪರಿ-ಪೂರ್ಣಸೀನೊಲಿದರೆ ಸಾಕಲ್ಲ || ೨ || ಸುರರ ಭೋಗದಿ ಮನವೆನಗಿಲ್ಲ-ಪುಲಿ-ಗಿರಿ ಧೊರೆಬಲ್ಲೆ ನೀನಿದನೆಲ್ಲ || ೩ ||

50 ರಾಗ—ಕಾಪಿ.

ಕ್ಷಮಿಸೆನ್ನ ದೋಷಗಳ-ಕ್ಷಿಪ್ರದಿ ಹರಿ || ಪ || ಕ್ಷಮೆಯನ್ನು ಧರಿಸಿದ, ಕಮಲಾನಿವಾಸನೆ || ಅ || ಕರಣತ್ರಯದಿಕಾಲ-ಹರಣವಿಲ್ಲದೆ ಪಾಪಾ| ಚರಣೆಯಿಂ ದೋಷದ ಭರಣಿಯಾದೆನು ಹರಿ || ೧ || ಮಾಡಬಾರದಪಾಪ ಮಾಡುವೆನನುದಿನ|| ಮೂಢನ ಸುಕೃತವ ನಾಡಿತೋರಿಸಲೇಕೆ || ೨ || ಹರಿಗುರುಹಿರಿಯರ-ಜರಿದು ಸಜ್ಜನರನು | ತೊರೆದು ದುರ್ಜನರೊಳು ಬೆರೆದು ಪಾಮರನಾದೆ || ೩ || ಸರ್ವಂಸಹಾಧಿಪ ಸರ್ವಚೇತನದೀಪ | ಸರ್ವಾಪರಾಧವ ನಿರ್ವಹಿಸುವ ಭೂಪ || ೪ || ದುರಿತವೈರಿಯೆ ನಿನ್ನ-ಮರೆಹೊಕ್ಕ ಮನುಜಗೆ | ದುರಿತದುಃಖಗಳುಂಟೆ-ವರದವಿಠಲರಾಯ || ೫ ||

51. ರಾಗ—ಯಮುನಾಕಲ್ಯಾಣಿ.

ಮನೆಗೆ ಬಾರೋ ರಂಗ-ಮನಸಿಜನಯ್ಯನೆ | ಕಣ್ಣಿನೊಳಗೂನಿನ್ನ ನೆನಹು ಬಿಡದುಯನ್ನ || ಪ || ಮನೆಗೆ ಬಾರೋ ರಂಗ-ಮನೆಗೆ ಬಾರೋ ಕೃಷ್ಣ | ಮನೆಗೆ ಬಾರೋ ರಾಮ || ಅ || ಮನೆಗೆ ಬಂದರೆನಿನ್ನ ಮಹಿಮೆಯ ಪಾಡುತ | ಮನದಣಿ ವಂದದಿ ಕುಣಿದೇನೊ ರಂಗಯ್ಯ || ೧ || ಮನೆಯುನಿನ್ನದುಯನ್ನ-ತನುವುನಿನ್ನುದ ಮುನ್ನ ಧನವು ನಿನ್ನದುಯನ್ನ ಘನವು ನಿನ್ನದು ರನ್ನ || ೨ || ದರಹಸಿತಾನನ-ಸರಸಿಜನಯನ | ವರದವಿಠಲಪುಲಿ ಗಿರಿವರಸದನ || ೨ ||

52. ರಾಗ—ಸೌರಾಷ್ಟ್ರ—ಆದಿತಾಳ.

ವೆಂಕಟಾಚಲವಾಸ-ಪಂಕಜಪ್ರಿಯಭಾಸ || ಶಂಕರಾರ್ಚಿತಚರಣ ಪಂಕಜಾಸನಪಿತ | ಪಂಕಜಲೋಚನ-ಕಿಂಕರಜನಶರಣ || ಪ || ಪರಮಾತ್ಮನಿನ್ನ ಶ್ರೀ ಪದಸೇವಕನಾಗಿ | ಪರರನುಸರಿಸುವನೆ|| ಸಿರಿರಮಣನೆನಿನ್ನ ಕರುಣೆಯುಳ್ಳವಪರ ಸಿರಿಯ ಬಯಸುವನೆ || ೧ || ಧರಣೀಯನಾಳುವ ಧೊರೆಯ ಕುಮಾರನು ತಿರಿಕೆಯ ಬೇಡುವನೆ || ಸುರತರುವಿನತಂಪು ನೆರಳೊಳು ಕುಳಿತುತಾ | ಗರುಕೆಯನರಸುವನೆ || ೨ || ಸಾರನಿಗಮವಿಚಾರವುಳ್ಳವ ನಿಸ್ಸಾರದಿ ಬೆರೆಯುವನೆ | ವಾರಿಧಿಲಂಘಿಪ ಧೀರನು ಕೊಳಚೆಯ ನೀರಿಗೆ ಜರಿಯುವನೆ || ೩ || ಕ್ಷೀರಾಬ್ಧಿಮಥಿಸಿದ ಶೂರನಿನ್ನವನಿಗೆ

ನೀರುಮಜ್ಜಿಗೆ ಗಣನೆ || ನಾರಸಿಂಹಸಪದ ಸಾರಿದವನು ಮದ ವಾರಣಕ್ಕಂಜುವನೆ || ೪ || ಗರುಡಗಮನನಿನ್ನ ಶರಣನಾದವನಿಗೆ ತರಳನಹಾವಳಿಯೆ || ನರಕಾಂತಕನಿನ್ನ ಸ್ಮರಿಸುವನರನಿಗೆ | ದುರಿತಂಗಳಟ್ಟುಳಿಯೆ || ೫ || ಹೊಳೆಯೊಳು ನೆನೆಯದ ಬಲುಗಟ್ಟಿ ಕಲ್ಲುತಾ-ಮಳೆಯೊಳು ನೆನೆಯುವದೆ | ಇಳೆಯೊಳು ಪುಲಿಗಿರಿ ನಿಳಯನ ದಾಸರ ಬಲುಹುಕುಂದಕವಹುದೆ || ೬ || ಇಷ್ಟದಿ ಮನೆಯೊಳು ಮೃಷ್ಟಾನ್ನವುಂಡವ | ಪಿಷ್ಟವ ಬಯಸುವನೆ || ಸೃಷ್ಟೀಶನಿನ್ನೊಳಗಿಟ್ಟುದುರ್ದೈವದ ದೃಷ್ಟಿಯನರಸುವನೆ || ೭ || ನಿಗಮಾಗೋಚರಕೇಳು| ಜಗವತೂಗುವನಿಗೆ-ಮಗುವತಿಘನವಹುದೆ|| ಜಗದಘಹರಣಯನ್ನಘವನೀಗಲು ನಿನ್ನ ಬಗೆಗೆ ದುರ್ಘಟವಹುದೆ || ೮ || ಪರಮಾತ್ಮ ಪರಿಪೂರ್ಣ ಪರವಸ್ತು ನೀನೆಂದು ಮರೆಹೊಕ್ಕೆಕಾಯೊಯನ್ನ || ವರಸುಗಣಾಕರ ವರದ ವಿಠಲಪುಲಿ ಗಿರಿದೊರೆಸುಪ್ರಸನ್ನಾ || ೯ ||

53. ರಾಗಾ—ಸಾವೇರಿ—ಆದಿತಾಳ.

ಶ್ರೀನಿವಾಸ ತವಚರಣ ಸರೋರುಹ-ಮಾನತೋಸ್ಮಿ ಸತತಂ || ಸಾನುರಾಗ ಮನಸಾವಚನಾ ಶಿರಸಾನುಕೂಲಪಲದಂ ಶುಭಚರಿತಂ|| ವಾಸವಸನ್ನುತ ವಾಸುಕಿಶಯನ ಶ್ರೀಶವಾಸಹಿರಣ್ಮಯವಾಸಸಮುಸ್ತಾವಾಸ ತರಣಿಶತಭಾಸಸುಮನೋಲ್ಲಾಸವಿಜಿತರೋಷ | ವಾಸರೇಶ ಶತ ಭಾಸುರ ಭೂಷಣ ಭೂಷಿತಾಂಗವಿಶೇಷಕರುಣಮೃದು ಭಾಷಣ || ಸಜ್ಜನಪೋಷಣ ನಿರ್ಜಿತ ದೂಷಣ ಭವಜಲಶೋಷಣ ಪೂಷಣ || ೧ || ಪುಂಡರೀಕಾಸನ ಖಂಡಪರಶು ಆ ಖಂಡಲ ಮುಖಸುರಮಂಡಲಸೇವಿತ ಚಂಡನಿಶಾಚರ ಮಂಡಲ ಖಂಡನ ಪಂಡಿತರಣ ಶೌಂಡ | ಪುಂಡರೀಕ ನಯನಾಂಡಜವಾಹನ | ಖಂಡಿತಕೇಶ ಕೋದಂಡಕೃತಾರ್ಜುನ ಪುಂಡರೀಕಗಿರಿ ಮಂಡನ ಹಿಮಕರಮಂಡಲ ಸನ್ನಿಭಕುಂಡಲಾಭರಣ || ೨ || ವಾರಿದನೀಲಶರೀರ ಧರಾರ್ಧ್ರ ಧೀರ ಸುಮಂದರಧಾರಣ ಚತುರುಕರಾಗ್ರವಿ ದಾರಿತ ಶೂರಹಿರಣ್ಯಾಕವೀರನರ ಮೃಗೇಂದ್ರಾ ವಾರಿಜನಿಲಯಾವರ ಕರುಣಾಕರ, ಮಾರಜನಕ ಸುರವಾರವಂದ್ಯಪದ ಸಾರಸುಗುಣಪರಿ ಜಲಧಿ ಗಂಭೀರ ವ್ಯಾಘ್ರಗಿರಿವರದ ವಿಠಲಹರಿ || ೩ ||

54. ರಾಗಾ—ಶಹನಾ.

ಬಾರೋಮನೆಗೆ ಶ್ರೀದಾರನೆ ನಿಜಪರಿವಾರದೊಡನೆ ಗುಣವಾರಿಧಿಯೆ || ಪ || ಮಾರಜನಕಸುಕುಮಾರಾಂಗ ಪರಮೋದಾರಾಕೃತಿಯನೀ ತೋರಿಸೆನಗೆ || ೧ || ಎಷ್ಟು ಜನ್ಮದ ತಪವೊಟ್ಟಾಗಿ ಸೇರಲು ದೃಷ್ಟಿಸುವೆನೊ ಶ್ರೀಕೃಷ್ಣ ನಿನ್ನನು || ೨ || ಚಿನ್ನದ ಪೀಠದಿ ರನ್ನದ ಕಲಶದಿ | ಚನ್ನಾಗಿ ತೊಳೆಯುವೆ ನಿನ್ನಡಿಗಳ || ೩ || ಗಂಧವ ಹಚ್ಚಿ ಸುಗಂಧ ತುಳಸೀ ದಳ | ದಿಂದಾಲಂಕರಿಸುವೆ ಸುಂದರಾಂಗನೆ || ೪ || ಜಾಜಿಯು ಮೊದಲಾದ ಹೂಜಾತಿಗಳ ತಂದು | ಮೂಜಗದೊಡೆಯನನು ಪೂಜಿಸುವೆನೊ || ೫ || ಲೋಪವಿಲ್ಲದೆ ದಿವ್ಯ ಧೂಪವನರ್ಪಿಸಿ | ದೀಪಂಗಳನು ಬಹು ದೀಪಿಸುವೆನು ||೬||ಪಾಲುಸಕ್ಕರೆ ಘೃತ|ಮೇಲಾದ ಭೋಜ್ಯವ|ಮೇಳೈಸುವೆನು ಶ್ರೀಲೋಲನಿಗೆ || ೭ || ಕರ್ಪೂರ ವೀಳ್ಯವನರ್ಪಿಸಿ ಮೋದದಿ | ಕರ್ಪೂರದಾರತಿಗಳರ್ಪಿಸುವೆನು || ೮ || ಮಣಿದು ನಿನ್ನಂಘ್ರಿಗೆ ಹಣೆಯ ಚಾಚುತಮನ ದಣಿಯುವಂದದಿ ನಾ ಕುಣಿದಾಡುವೆ || ೯ || ಸದಯ ನಿನ್ನಂಘ್ರಿಯ ಹೃದಯಾರವಿಂದದ | ಸದನದೊಳಿಂಬಿಟ್ಟು ಮುದವೊಂದುವೆ || ೧೦ || ಶರಣಾಗತರನೆಲ್ಲ ಕರುಣದಿ ಸಲಹುವ | ವರದ ವಿಠಲ ಪುಲಿ- ಗಿರಿಧಾಮನೆ || ೧೧ ||

55. ರಾಗಾ—ಪೂರ್ವಿ.

ಫಾಲ ನಯನ ನುತ ಪಾಲಿಸು ಸತತ | ಪಾಲಿತಸುರನರ ಜಾಲಸುಚರಿತ || ಪ || ಲೀಲಾ ನಟನ ಫಣಿಶೈಲನಿಳಯ ಭಕ್ತ | ಪಾಲವಿದ್ವೈತವನ ಮಾಲಶ್ರೀಲೋಲ ||೧|| ಬಾಲತನದಿ ನಿಜ ಲೀಲಾ ಚರಿತಗುಣ | ಜಾಲವಿಮೋಹಿತ ಬಾಲಾನುಕೂಲ ||೨ || ಧಾರಾಧರಾಭ ಶರೀರ ತಿರಸ್ಕೃತಮಾರ ವಿಹಗಸಂ ಚಾರವುದಾರ |೩|| ಘೋರದನುಜ ಸಂಹಾರಸುಜನಪರಿವಾರ ನಿಗಮ ವಿಚಾರ ವಿಹಾರ || ೪ || ಕರುಣಾವರಣ ನಿಜ ಶರಣಾ ಭರಣ ಭಯ ಹರಣ ಸಕಲ ಸುಖಕರಣ ಶ್ರೀರಮಣ ||೫|| ಶೇಷಶಯನ ಕಲಿ ದೋಷದಮನ ಮೃದು | ಭಾಷ ಮನೋಹರ ಭೂಷಸುವೇಷ || ೬ || ಹರಿದಾಸರನು ಬಲು | ಹಿರಿದಾಗಿ ಮೆರೆಸುವ | ದ್ವಿರದವರದ ಶ್ರೀ ವರದವಿಠಲ||೭||

56. ರಾಗಾ—ದೇಶೀಯ.

ಶ್ರೀನಿವಾಸ ಪದ ಧ್ಯಾನಕರೋರೆ| ಸಾನುರಾಗ ಯುತಮಾನಸಮೀರೆ ||ಪ|| ಮದಪರಿಪೂರಿತ ಹೃದಯಸುನೋರೆ | ಸದಯ ಹೃದಯ ಪರಿಪದ ಮಿಳನಾರೆ || ೧ || ಕಾಮಕ್ರೋಧವುಪರಾಮ ಕರೋರೆ | ರಾಮನಾಮ ಜಪಕಾಮು ಕರೋರೆ|| ೨ ||

ದೇಹಗೇಹಧನ ಮೋಹನಲೇರೆ | ಶ್ರೀಹರಿ ಸ್ಮರಣ ಕಾಂಹಿ ಚಲೇರೆ || ೩ || ಪುತ್ರ ಮಿತ್ರ ಬಹು ಶತ್ರುಕುಮಾರೆ-ವೃತ್ರ ವೈರೀಸುತ ಮಿತ್ರನಗಾರೆ || ೪ || ಭಂಗಕರಣ ಜನಸಂಗ ನಕೋರೆ | ಮಂಗಳಾಂಗ ನರಸಿಂಹ ಭಜೋರೆ || ೫ || ಸೂಕ್ಷ್ಮಬುದ್ಧಿ ನಿರಪೇಕ್ಷ ಭಲಾರೆ | ಮೋಕ್ಷ ದಾತ ಕಮಲಾಕ್ಷಕು ಲಾರೆ || ೬ || ದಾಸಲೋಕ ಸಹವಾಸ ಕರೋರೆ | ವಾಸುದೇವ ನಿಜ ದಾಸಕು ಹೋರೆ || ೭ || ಶ್ರೀಪುಲಿಗಿರಿವರ ಭೂಪಮುರಾರೆ - ಶ್ರೀಪತಿಘನ ಚಿದ್ರೂಪಕಹೋರೆ || ೮ || ಪರಮ ಪುರುಷ ನರ ಹರಿ ಕರುಣೀರೆ-ವರದ ವಿಠಲ ಕರಿವರ ಧಣೀರೆ || ೯ ||

57. ರಾಗಾ—ಶುದ್ಧಸಾವೇರಿ.

ಹಣ್ಣು ಬಂದಿದೆ-ಜನರು-ಹಣ್ಣು ಕೊಳ್ಳಿರೋ|ಗಣ್ಯಮಾಗಿ ಬಣ್ಣಿಸುತ್ತ ಪುಣ್ಯ ವಂತರುಣ್ಣುತಿರುವ || ಪ || ಬೀಜವಿಲ್ಲದಾ- ಬೆಳೆದ ಭೂಜವಲ್ಲದ ಬೀಜ ಭೂಜಗಳಿಗೆ ತಾನೇ ಬೀಜಮಾಗಿ ಮೆರೆಯುತಿರುವ || ೧ || ಹುಟ್ಟಿಬೆಳೆಯದಾ - ಜನರು_ಮುಟ್ಟಿ ತೊಳೆಯದಾ | ಎಷ್ಟುದಿವಸ ವಿಟ್ಟಿರಲು ಕೊಳೆತು ಕೆಟ್ಟು ಹೋಗದ || ೨ || ಬೆಲೆಗೆ ಬಾರದಾ - ತನ್ನ-ನೆಲೆಯತೋರದ || ಒಲಿದವರಿಗೆ ಸುಲಭವಾಗಿ | ಹಲವು ವಿಧದಿ ಹೊಳೆಯುತಿರುವ || ೩ || ಅರಿಯುದವರಿಗೆ-ರುಚಿಯು-ನರಿತಜನರಿಗೆ || ಅರಿತ ಮೇಲೆ ನಿರುತ ವಿರುತ | ಸರಸಮಧುರ ಭರಿತ ಬರಿತ || ೪ || ಸಿರಿಮನೋಹರ-ವ್ಯಾಘ್ರ-ಗಿರಿಯ ಮಂದಿರ || ಶರಣ ಜನರ ಪೊರೆವ ನಮ್ಮ | ವರದವಿಠಲ ನೆಂಬದಿವ್ಯ || ೫ ||

58. ರಾಗಾ—ದೇಶೀಯ.

ಚಿಂತಿಸು ಮನವೆ ಶ್ರೀಹರಿಯ-ನಿಶ್ಚಿಂತೆ ಯೊಳಗೆ ಪುಲಿ ಗಿರಿಧೊರೆಯ || ಪ || ಶ್ರೀರಮಣೀ ನಿಜವಲ್ಲಭನ-ವಾರ ಚತುರ್ಮುಖರಿಗೆ ಪಿತನ || ನಾರದ ಶರ್ವ ಪಿತಾ ಮಹನ-ಮದ-ವಾರಣಮುಖ ಪ್ರಪಿತಾಮಹನ || ೧ || ಉರದಲ್ಲಿ ಸಿರಿಯನ್ನು ಧರಿಸಿಹನ-ನಿಜ-ಶಿರದಿ ಕಿರೀಟವ ನಿರಿಸಿಹನ || ಕರದಲ್ಲಿ ಚಕ್ರವಪಿಡಿದಿಹನಾ - ನಿಜ-ಕರುಣದಿ ಭಕ್ತರಿಗೊಲಿದಿಹನ || ೨ || ನೀಲ ಜಲದಸಮ ವಿಗ್ರಹನ ವನಮಾಲೆಯು ಕೊರಳೊಳು ಪೊತ್ತಿಹನ || ಬಾಲಕ ಸುಕೃತಾನು ಗ್ರಹನ-ನಿಜ ಲೀಲೆ ಯೊಳಾಸುರ ನಿಗ್ರಹನ || ೩ || ಅಂಗಜನಿಭ ಸುಂದರನ-ಸುರ- ಗಂಗೆಯ ಪಡೆದ ಪಾದಾಂಬುಜನ ತುಂಗ ವಿಹಂಗತು ರಂಗಮನ-ಶುಭ_ಮಂಗಳ ಗುಣಗಣಸಂಗತನ || ೪ || ಸರಸಿಜ ಸನ್ನಿಭ ಲೋಚನನ-ನಿಜ ಶರಣರ ಭವಭಯ ಮೋಚನನ || ವರವ್ಯಾಘ್ರಾಚಲ ನಾಯಕನ -ನಮ್ಮ-ವರದವಿಠಲ ವರದಾಯಕನ|| ೫ ||

59. ರಾಗಾ—ಜಾವಡಿ.

ಮರೆತಿರಲಾರೇ -ಮನಸಾರೇ ಹರೇ || ಪ || ಮರೆತಿರಲಾರೆನಾಮಹಿತಚಾರಿತ್ರನ | ಸರಸಿಜ ಪತ್ರನೇತ್ರನ || ಅ || ಬಗೆಬಗೆರತಿಯಲ್ಲಿ ಜಗವನುಮೋಹಿಪ | ಸುಗುಣನ ಜಗತ್ಪ್ರಾಣನ || ೧ || ಚೇತನರಿಗೆ ಸುಖದಾ ತನ ದುಃಖ ವಿಘಾತನ ಲಕ್ಷ್ಮೀನಾಥನ || ೨ || ದಾಸರಹೃದಯ ನಿವಾಸನ - ದೋಷನಿರಾಸನ ಶ್ರೀನಿವಾಸನ || ೩ || ವೆಂಕಟರಮಣನ -ಕಿಂಕರಶರಣನ ಸಂಕಟಹರ ನಿಷ್ಕಳಂಕನ ||೪|| ಮಾನಿನಿಯಅಭಿಮಾನವಕಾಯ್ದನ | ದೀನರ ಹರ್ಷನಿಧಾನನ || ೫ || ರಾಮನ ದೈತ್ಯವಿರಾಮನ ಪಾವನ -ನಾಮನ ಹೃದಯಾರಾಮನ || ೬ || ಧರೆಯೊಳುತ್ತಮ ಪುಲಿ ಗಿರಿಯೊಳು ನೆಲಸಿಹ | ವರದ ವಿಠಲವರದನ ದೇವನ || ೭ ||

60 .ರಾಗಾ—ರಾಗಾ—ಸುರುಟಿ—ಆದಿ.

ಸಲಹೊ ಶ್ರೀನಿವಾಸ-ಸದ್ಗುಣ - ನಿಲಯವೆಂಕಟೇಶ | ಒಲಿದುಸಕಲಗೋಕುಲವನುಸಲಹಿದ ಜಲಜಾಂಬಕ ನೀನಲಸದೆ ಯೆನ್ನನು ||ಪ|| ವಾತವುಮಿತಿವಿಾರಿ-ಪಿತ್ತವ್ರಾತದೊಡನೆ ಸೇರಿ | ಧಾತುಗಳೆಲ್ಲವಿಘಾತಿಸಿ ಕಫಸಂಘಾತವು ಹೆಚ್ಚಿದ ಹೇತುವನೋಡಿ ||೧|| ಶ್ವಾಸನಿರೋಧದಲಿ ಸೇರಿದ-ಕಾಸಗಳುದರದಲಿ| ಕೇಶರಂಧ್ರದವಕಾಶದೊಳೂರ್ಧ್ವಶ್ವಾಸ ಹೆಚ್ಚಿ ಬಲುಘಾಸಿಪಡಿಸುತಿದೆ ||೨|| ಕಾಯದಬಲವೆಲ್ಲಾ-ಕದಲುತ-ವಾಯುವಾದವಲ್ಲ || ದಾಯತಪ್ಪಿ ದುರ್ವಾಯುಮಿಂದ ತಲೆ! ನೋಯುತ ದೇಹದೊಳಾಯಸ ಹೆಚ್ಚಿತು ||೩|| ನಿದ್ರೆಬಾರದಯ್ಯಾ-ನಿಶಿಯೊಳ-ಗೆದ್ದಿರಬೇಕಯ್ಯಾ | ಮದ್ದುತಿಂದವನ ಬುದ್ಧಿಯೆಂತೆ ಮೈ | ಗುದ್ದಿಕೊಂಡು ಬಿದ್ದಾಡ್ದಾಡಿಸುತಿದೆ ||೪|| ಅನ್ನವರೋಚಕವು | ಆಪ್ತರೊಳನ್ಯತೆಗೋಚರವು | ಮುನ್ನವೈದ್ಯರುಗಳನ್ನು ಕಾಣೆ ನೀ ಕಣ್ಣಾತೆರೆದು ನೋಡೆನ್ನ ಕಟಾಕ್ಷದಿ ||೫|| ರೋಗವು ಘನವಯ್ಯಾ-ರೋದನೆ-ಯಾಗಿಹುದೆನಗಯ್ಯಾ | ನೀಗಲಾಡು ಈ ರೋಗವನ್ನು ಭವ-ರೋಗವೈದ್ಯ ನೀನೇ ಗತಿಯೆಂದಿಗು ||೬|| ಪರಮಪುರುಷ ನಿನ್ನ-ಚರಣವ ಮರೆಹೊಕ್ಕಿಹೆ ಮುನ್ನ | ಶರಣಾಭರಣ ಪುಲಗಿರಿಯೊಳು ನೆಲಸಿಹ | ವರದ ವಿಠಲ ಧೊರೆ ವರದದಯಾನಿಧೆ ||೭||

61. ರಾಗ—ಜುಂಜೋಟಿ—ಅಟ್ಟತಾಳ.

ಶ್ರೀವಾಸಾನತಮಾಕಲಯಾಚ್ಯುತ| ಶ್ರೀವಾಸುಕಿಶಯಮಾಮನಿಶಂಹೃದಾ|| ||ಪ|| ಪುಂಡರೀಕನಯನಾಂಡಜವಾಹನ-ಕುಂಡಲಶಯಮಾಂಡವ್ಯಸೇವ್ಯಪದ ||೧||

ಪುಂಡರೀಕಸುಮಂಡಿತಾಂಗಪದಪುಂಡರೀಕ ಶ್ರಿತಪಾಂಡುತನಯಭೋ || ೨ || ನಂದಗೋಪವರ ನಂದನಸುಮನೋ | ನಂದನಮುನಿಜನ-ವಂದಿತಪದಯುಗ || ೩ || ಧರ್ಮತನಯ ಸಹಧರ್ಮಚಾರಿಣಿ | ವರ್ಮಪಾಲಸದ್ಧರ್ಮಶೀಲಹರಿ || ೪ || ವ್ಯಾಘ್ರನಾಮ ದೈತ್ಯಾಗ್ರನಿಗ್ರಹಣೋಗ್ರಸೇನ ತನಯಾಗ್ರವಿದಾರಣ || ೫ || ಬಾಲಭಕ್ತಪರಿಪಾಲಹೇಮಮಯಚೇಲವಿಧೃತವನಮಾಲ ನರಹರೆ ||೬|| ಮಾರ ಜನಕಸುರವಾರವಂದ್ಯಮಂದಾರಹಾರ ಸುಕುಮಾರಶರೀರ ||೭|| ಮಂದರಧರ ಪೂರ್ಣೇಂದುವದನಗೋವಿಂದಮುಕುಂದಸನಂದವಂದಿತ ||೮|| ಖಂಡಪರಶು ಕೋದಂಡವೇತಂಡಹಸ್ತಭುಜದಂಡರಘೂದ್ವಹ ||೯|| ಅಂಬರೀಷವರದಂಬುಜಾ ಸನಾ | ಲಂಬಮಾನಚರಣಾಂಬುಜ ಕೇಶವ ||೧೦|| ಸಾರವಸ್ತುಪರಿಪೂರವ್ಯಾಘ್ರ ನಗ | ಪಾರಿಜಾತವರದಾರ್ಯವಿಠಲ ಶ್ರೀ ||೧೧||

62. ರಾಗ—ಪಂತುವರಾಳಿ.

ಮುತ್ತುಬಂತಿದೆ-ದಿವ್ಯಮುತ್ತುಕೊಳ್ಳಿರೋ ||ಪ|| ಮುತ್ತುಬಂದಿಹುದೀಗನೀ ವೆತ್ತಿಕೊಳ್ಳಿರೆಲ್ಲಬಂದು | ಉತ್ತಮವ್ಯಾಘ್ರಾದ್ರಿಪುರುಷೋತ್ತಮನೆಂಬುವದಿವ್ಯ ||೧|| ಲೆಕ್ಕವಿಲ್ಲದಹಣವಿತ್ತರು | ಸಿಕ್ಕದದುರ್ಲಭಮುತ್ತು | ರೊಕ್ಕವಿಲ್ಲದೆ ಭಕ್ತರಿಗೆ ಪುಕ್ಕಟೆಯಲಿ ಸಿಕ್ಕುವಂಥ ||೨|| ಧನವಂತಗೆ ದೊರಕುವದಲ್ಲ-ಜನರಕೈಗೆಸಿಕ್ಕುವದಲ್ಲ ಮನದಲ್ಲಿ ಧ್ಯಾನಮಾಳ್ಪಮುನಿಗಳ ಸ್ವಾಧೀನವಾದ ||೩|| ಕ್ಷೀರಪಾರಾವಾರದಲ್ಲಿ-ತೋರಿಮೆರೆವ ಮುತ್ತು | ಶ್ರೀರಮಾಮನೋಹರನುದಾರವರದ ವಿಠಲನೆಂಬ ||೪||

63 ರಾಗ—ಧನಾಧರಿ—ಆದಿ.

ಏನಯ್ಯ ಧೊರೆಯೆ-ನಿನ-ಗಾನಂದವೆ ಧೊರೆಯೇ ||ಪ|| ಮಾನಿತಜನರವ ಮಾನವನೋಡದೆ | ಹೀನಜನರ ನುಡಿನೀನೊಲಿದಾಲಿಪುದು || ಅ || ಜಾತಿಧರ್ಮ ವಿಲ್ಲಾ-ಶಾಸ್ತ್ರದರೀತಿನಡತೆಯಿಲ್ಲ | ಮಾತಿದುಪುಸಿಯಲ್ಲಾ-ಮಾನದ-ಭೀತಿಯು ಮೊದಲಿಲ್ಲಾ || ನೀತಿಯನರಿಯದ-ಕೋತಿಗಳಂದದ | ಜಾತಿಯಜನರೊಳು ಮಾತಿನವಾಶಿಯಿಲ್ಲ ||೧|| ದುರ್ಜನರು ಬೆರೆದು-ನೋಷವಿ | ವರ್ಜಿತರನ್ನು ಜರಿದು ಲಜ್ಜೆಯನೆರೆತೊರೆದು—ಗರ್ವದಿ ಗರ್ಜಿಸಿ ಮೊರೆದು || ಈ ಜಗದೊಳಗಿಹ ಸಜ್ಜನರಿಗೆ ಕುಲಕಜ್ಜಳರವಮತಿ ಗುಜ್ಜುಗಿಸುತ್ತಿಹ || ೨ || ಗಂಡನಬಿಟ್ಟಿಹರು-ಗರತಿಯು-ಕಂಡುನಗುತ್ತಿಹರು || ಮಿಂಡರಬೆರೆದಿಹರು-ಮೇಲತಿ-ದಿಂಡೆಯರಾಗಿಹರು | ಭಂಡ ತನದಿ ಪರಗಂಡಸರೊಳು ಸಮದಂಡಿಯೆನಿಸಿ ಬಲುಚಂಡಿಸುತಿರ್ಪರೋ ||೩|| ಕೇಳ್ಳ

ಹಂದೆಯಾಳು-ಕ್ಲೇಶವ ಪೇಳಲು ಮತಿತಾಳು | ಕೇಳುಜನರಬಾಳು | ಕಿವಿಯಲ್ಲಿ ಕೇಳಬಹುದೆ ಪೇಳು || ಕಾಳಮೂಳಿಯರಮೇಳದಿ ಹಿಗ್ಗುವ ಬಾಳುಗೇಡಿಜನರೂಳಿಗ ಬಲುಘನ ||೪|| ಧರೆಯೊಳಧಿಕವಾದ ಶ್ರೀಪುಲಿ-ಗಿರಿಯೊಳು ನೆಲೆಯಾದ-ಸಿರಿವರನಿಜ ಪಾದ-ಸೇವೆಯ-ಕರುಣಿಸು ಬಹುಮೋದ||ಶರಣಾಭರಣ ನಿಜ | ಕರುಣವತೋರಿಸು ವರದವಿಠಲಧೊರೆ ವರಹದಯಾನಿಧೆ ||೫||

64. ರಾಗಾ—ವಸಂತಭೈರವಿ.

ರಾಮಭಜೇ ತೇ ಪದಯುಗಳಂ - ಸೀತಾ ರಾಮಭಜೇ ತೇ ಪದಯುಗಳಂ ||ಪ|| ರಾಮಸುಂದರ ಘನ ಶ್ಯಾಮರಘೂದ್ವಹ ||ಅ|| ದಶರಥಹೃದಯಾನಂದಕರಂ-ತ್ರಿದಶಗಣಚಿತ್ತಾಮೋದಕರಂ ||೧|| ಪೂರಿತ ಕೌಶಿಕಯಜನಂ|ಸಂ ತಾರಿತಗೌತಮ ಲಲನಂ ||೨|| ಖಂಡಿತಶಂಕರ ಚಾಪಂ | ಪರಿ-ದಂಡಿತಭಾರ್ಗವ ಕೋಪಂ || ೩ || ಸ್ವೀಕೃತ ಜಾನಕೀ ಹೃದಯಂ-ದೂರೀಕೃತಪಾತಕನಿಚಯಂ ||೪|| ಪಾಲಿತಮಾತಾಪಿತೃವಚನಂ - ಸಂ ಲಾಲಿತ ಮುನಿಜನ ಸ್ತುತಿರಚನಂ ||೫|| ಭರತಸಮರ್ಪಿತ ನಿಜರಾಜ್ಯಂ|ಮುನಿವರಭಾರದ್ವಾಜಾರ್ಪಿತ ಭೋಜ್ಯಂ ||೬|| ದಂಡಕಾರಣ್ಯಾಪಾವನಚರಣಂ ಉದ್ದಂಡವಿರಾಧಪಾತಕಹರಣಂ ||೭|| ಕುಂಭಜಾರ್ಪಿತ ಶರಕೋದಂಡಂ|ಸಂರಂಭ ನಿರ್ಜಿತರಾಕ್ಷಸಷಂಡಂ ||೮|| ಪಂಚವಟೀತಟಕೃತವಾಸಂ | ದೃಗಂಚಲ ಧೃತಜಗದುಲ್ಲಾಸಂ ||೯|| ಶೂರ್ಪನಖೀವಚನಾಲೋಲಂ | ಸಹಜಾರ್ಪಿತವಿವಿಧಾಯುಧಜಾಲಂ ||೧೦|| ರೂಪನಿರ್ಜಿತ ಸುಮಬಾಣಾಂಗಂ | ವಿರೂಪಿತ ದುಷ್ಟ ಶೂರ್ಪನಖಾಂಗಂ ||೧೧|| ಖರತರ ಖರದೂಷಣಕಾಲಂ | ಸುರ, ನರವರ ಮುನಿಗಣ ಪರಿಪಾಲಂ || ೧೨ || ಮಾಯಾಮೃಗಾರ್ಪಿತ ಬಾಣವರಂ - ಜಟಾಯುಸಂಪಾದಿತ ಲೋಕವರಂ || ೧೩ || ರಾವಣಹೃತನಿಜ ಪತ್ನೀಕಂ | ಲೋಕಾವನಗತಕೋಪೋದ್ರೇಕಂ || ೧೪ || ಸಾಧಿತಶಬರೀ ಮೋಕ್ಷಕರಂ - ಕಬಂಧಬಂಧನ ಮೋಚನ ಚತುರಂ || ೧೫ || ವಾತತನೂಭವ ಕೃತಸ್ತೋತ್ರಂ-ಪಂಪಾತಟನಿರ್ಮಿತಸುಕ್ಷೇತ್ರಂ || ೧೬ || ಶಿಕ್ಷಿತಸಂಕ್ರಂದನತನುಜಂ - ಸಂರಕ್ಷಿತಚಂಡಕಿರಣತನುಜಂ || ೧೭ || ಸೀತಾಲೋಕನ ಕೃತಕಾಮಂ - ನಿಜಧೂತಾಮೋದನ ಸುಪ್ರೇಮಂ || ೧೮ || ನಿಜಕರಭೂಷಣ ದಾತಾರಂ-ಘುರವಿಜಯುವನಾಲಯಪರಿವಾರಂ || ೧೯ || ಧೂತಾಹೃತ ಶುಭದೃಷ್ಟಾಂತಂ - ವಿಜ್ಞಾತನಿಜಸ್ತ್ರೀ ವೃತ್ತಾಂತಂ || ೨೦ || ಭೀಷಣಜಲನಿಧಿ ಬಂಧಕರಂ - ವಿಭೀಷಣಸಂರಕ್ಷಣ ಚತುರಂ || ೨೧ || ಶೋಷಿತರಾವಣ

ಜಲಧಿಂ-ಸಂತೋಷಿತ ದೈವತಪರಿಧಿಂ ॥ ೨೨ ॥ ಸೀತಾಸಮಾಶ್ರಿತ ವಾಮಾಂಕಂ-ಪರಿಭೂತಪಾತಕ ನಿಜನಾಮಾಂಕಂ ॥೨೩॥ ಸ್ವೀಕೃತಸಾಕೇತಾವಾಸಂ-ಅಂಗೀಕೃತ ಮಾನುಷ್ಯವಿಲಾಸಂ ॥ ೨೪ ॥ ವರವ್ಯಾಘ್ರಭೂಧರ ಕಲ್ಪತರುಂ - ಶ್ರೀ ವರದವಿಠಲ ಮತಿಶಯರುಚಿರಂ ॥ ೨೫ ॥

65 ರಾಗಾ—ಸುರಟಿ—ಆದಿ.

ಮಳೆಯ ಪಾಲಿಸೈಯ್ಯ - ಮಂಗಳ-ನಿಳಯ ಲಾಲಿಸಯ್ಯ ॥ಪ॥ ಇಳೆಯೊಳು ಮಳೆಯನು, ತಳೆಯದೆ ತೃಣಗಳು | ಬೆಳೆಯದೆ ಗೋವುಗಳಳಿವುವಯ್ಯಾ ॥ ಅ ॥ ಗೋವಿಪ್ರರ ಕುಲವ-ಕಾಯುವ-ದೇವನು ನೀನಲ್ಲವಮೇವುಗಳಿಲ್ಲದೆ ಗೋವುಗಳೆಲ್ಲವು ಸಾವುವು ನಿನ್ನುಳಿದಾವನು ಕಾವನು ॥ ೧ ॥ ಕೆರೆಯೊಳು ನೀರಿಲ್ಲಾ-ಬಾವಿಗಳೊರತೆಯ ಸೋರಿಲ್ಲಾ ॥ ತುರುಗಳು ಜೀವನದಿರವನು ಕಾಣದೆ | ಹರಣವ ಬಿಡುವುವು ಕರುಣದಿ ಬೇಗನೆ ॥ ೨ ॥ ಬಲರಿಪುಖಾತಿಯುಲಿ - ಬಾಧಿಸೆ ಜಲಮಯರೀತಿಯಲಿ | ಜಲಿಸದೆ ಕರದೊಳಾಜಲವನು ಕೊಡೆವಿಡಿದುಳುಹಿದೆ ಗೋವ್ಗಳ. ಬಳಗವ ನೀಗಳುಂ ॥೩॥ ಜಲನಿಧಿಕೃತಶಯನ ಶಾರದ ಜಲರುಹದಳನಯನ ॥ ಜಲಧೀದಿತಿ ಜಲಚರಮಾರುತಿ | ಜಲಜಕರಗಳಿಂ ಜಲದಾಗರದಿಂ ॥೪॥ ದಾರಿಯಜನರೆಲ್ಲ-ಬಹು ಬಾಯಾರಿ ಬರುವರಲ್ಲಾ ॥ ದೂರದಿಂತಂದಿಹ ನೀರನುಲೋಭದಿ | ನಾರಿಯರೆಲ್ಲ ವಿಚಾರಿಸುತಿರ್ಪರು ॥ ೫ ॥ ಬೆಳದಿಹ ಸಸ್ಯಗಳು-ಬಿಸಲಿನ-ಜಳದಲಿ ಬಾಡಿಹವು ॥ ನಳಿನನಯನನಿನ್ನೊಲುಮೆಯತೋರಿಸಿ | ಫಳಿಲನೆ ಪೈರುಗಳುಳಿಯುವ ತೆರದೊಳು ॥ ೬ ॥ ಕರುಣಾನಿಧಿಯೆಂದು-ನಿನ್ನನು-ಶರಣುಹೊಕ್ಕೆನಿಂದೂ ॥ ಶರಣಾಭರಣಪುಲಿಗಿರಿಯೊಳು ನೆಲಸಿಹ| ವರದವಿಠಲದೊರೆವರದ ದಯಾನಿಧೆ ॥ ೭ ॥

66. ರಾಗ—ಶಂಕರಾಭರಣ—ಆದಿತಾಳ.

ಶ್ರೀ ಶ್ರೀನಿವಾಸ-ಶ್ರೀಭೂವಿಲಾಸ-ಶ್ರಿತಜನಪೋಷ-ಪಾಹಿಸುವೇಷ ॥ ಪ ॥ ಅಚ್ಯುತಮಾನ ಮದಚ್ಯುತವಿ ಪಚ್ಛಿನ್ನಮನೋರಥ, ನಿಚ್ಚಿತ (?) ಪಾಹಿ ॥ ೧ ॥ ಅಂತರಹಿತನಿತ್ಯಾ ನಂತಮಹಿಮ ದುರಂತವಿಕ್ರಮ ದನುಜಾಂತಕ ಪಾಹಿ ॥ ೨ ॥ ಗೋವಿಂದ ನತಸುಮನೋವೃಂದ ದಳಿತತಮೋವೃಂದ, ಪೋಷಿತ ಗೋಬೃಂದಪಾಹಿ॥೩॥ಕೇಶವ ಸಕಲ ಲೋಕೇಶ ಗೌರೀಶ ವಾಗೀಶಸನ್ನುತ ಕೋಶಮಾಂ ಪಾಹಿ ॥೪॥ ನಾರಾಯಣಭಕ್ತಪರಾಯಣಾಪರಿ | ವಾರಾಯಿತ ಸುರವಾರಮಾಂಪಾಹಿ ॥೫॥ ಮಂದರಧರ ಮುಚುಕುಂದವರದ ಆ | ನಂದಸದನ ಗೋವಿಂದಮಾಂಪಾಹಿ

||೭|| ವಿಷ್ಣೋಸುಜನವರ್ಧಿಷ್ಣೋಸಂ | ತೋಷಿತಜಿಷ್ಣುಸುರಜೇಷ್ಣೋಮಾಂಪಾಹಿ ||೮|| ಮಧುಸೂದನ ದುರ್ಮದಭೇದನ ಬಹುವಿದಭೇದನ, ನುತಬುಧಜನಪಾಹಿ||೯|| ಅಕ್ರಮನುಪಿತ ನಿಜ ಕ್ರಮ ಜಿತವಿಶ್ವಶಕ್ರಸಹಜತ್ರಿವಿಕ್ರಮಪಾಹಿ || ೧೦ || ವಾಮನದೈತ್ಯವಿರಾಮ ನಮಿತ ಸುರಕಾಮನ ಮುನಿಜನಪ್ರೇಮಮಾಂಪಾಹಿ ||೧೧|| ಶ್ರೀಧರ ಕರಧೃತ ಭೂಧರಚಕ್ರಗದಾಧರ ಕೌಸ್ತುಭ ಕಂಧರಪಾಹಿ ||೧೨|| ನಾಕೇಶ ವಂದ್ಯ ಹೃಷೀಕೇಶ ಮುನಿಹೃದಯಾಕಾಶ ಗೋಚರರಾಕೇಂದು ಪಾಹಿ || ೧೩ || ಪದ್ಮನಾಭ ನತಪದ್ಮಜಮಾನಸ ಪದ್ಮಗೋಚರ ಪದಪದ್ಮಮಾಂಪಾಹಿ || ೧೪ || ದಾಮೋದರ ಸುಜನಾಮೋದನ ಧೃತ ಕೌಮೋದಕ ಜಿತಕಾಮಮಾಂಪಾಹಿ ||೧೫|| ದೋಷರಹಿತಗುಣ ಭೂಷಣ ನತಜನ | ಪೋಷಸಂತೋಷಿತ. ಶೇಷಮಾಂಪಾಹಿ ವಾಸುಕಿಶಯನ ವಿಕಾಶ ಕಮಲನಯನಾಸುರದಮನ ಶರಾಸನಪಾಹಿ || ೧೭ || ದುಷ್ಟಮರ್ದನ ಜಗದಿಷ್ಟವರ್ದನಸುರ ಕಷ್ಟಕೃಂತನಪರಿತುಷ್ಟಮಾಂಪಾಹಿ || ೧೮ || ವರದವಿಠಲವ್ಯಾಘ್ರುಧರಣೀಧರಾಗ್ರವಿಹರಣ ಸಕಲ ಗುಣಾಭರಣಮಾಂಪಾಹಿ||೧೯||

67. ರಾಗ—ಕಲ್ಯಾಣಿ—ಆದಿತಾಳ.

ನೀನುಳಿಯೆ ರಕ್ಷಕರ ಕಾಣೆನೀ ಜಗದೊಳಗೆ| ಶ್ರೀನಿವಾಸ ಜಗನ್ನಿವಾಸ||ಪ|| ದೀನ ರಕ್ಷಕ ನಿಖಿಲ ಮಾನವರ ಮಾನಾಭಿ ಮಾನದೊಡೆಯನುನೀನೇಯಲ್ಲದಿಲ್ಲಾ || ಅ || ನಕ್ರಮುಖದಲ್ಲಿಸಿಕ್ಕಿ ದುಃಖಿಸುವ ಕರಿರಾಜ | ಚಕ್ರವರ್ತಿಯು ಶರಣು ಹೊಕ್ಕೆನೆನಲು|| ಚಕ್ರವನು ಪಿಡಿದುನೀನಕ್ಕರೆಯೊಳೈತಂದು ನಕ್ರವದನವಸೀಳಿ ರಕ್ಷಿಸಿದೆ ಗಜವಾ-ದೇವ- || ೧ || ಹಿಂದೆ ನಾನಾನ್ನಗಿರಿಯಿಂದ ಬಹದಾರಿಯೊಳು, ಸಂದುಗಳೀಚಲು, ಭಂಡಿ ಸಂಜೆಯೊಳಗೆ || ಮುಂದಾಗ ಜೊತೆಯೊಳಗೆ ಬಂದುಜನ ಕೆಲ್ಲನೀ ಬಂದುಬೆಳಕನುತೋರಿ ಮಂದೆಗೂಡಿದೆ ಕೃಷ್ಣಾ || ೨ || ಇಂದುನಿಜ ಸತಿಯು ನೊಂದಳುಬ್ಬಸರೋಗದಿಂದ ಗಾಳಿಯದೀಪದಂದಮಾಗಿ || ನಂದಿಪೋಗದ ಮುನ್ನ ಬಂದು ನೀಮರೆಯಾಗು ಎಂದು ಮೊರೆಯಿಡಲೀಗ ಬಂದುಸಲಹಿದೆತಂದೆ || ೨ || ಗುರುಸುತನ ಸಂಯಮಿನೀ | ಪುರದಿಂದತಂದಿತ್ತೆ, ತುರುಗಾಯ್ವರಸುಗಳನು ಮರಳಿಪಡೆದೆ || ನರಪೌತ್ರನನುಬಾಣದುರಿಯಿಂದ ರಕ್ಷಿಸಿದೆ | ಸರಿಯಾರು ನಿನಗೆಸುರನರಭುಜಂಗರಲ್ಲಿ || ೪ || ತರಳಧ್ರುವ ಪ್ರಹ್ಲಾದ ತರುಣಿ ಪಾಂಚಾಲಿ ಕುರು ವರವಿಭೀಷಣ ತಾಪಸರನುಪೊರೆದೆ || ಶರಣರನುಪಾಲಿಸುವ ಬಿರುದು ಧರಿಸಿಹ ವ್ಯಾಘ್ರುಗಿರಿಯೊಳಗೆ ನೆಲಸಿರುವ ವರದವಿಠಲರಾಯ ||೫||

68. ರಾಗಾ-ಕಲ್ಯಾಣಿ-ಅಟ್ಟತಾಳ.

ಪಚ್ಚೆಯು ಬಂದೀಗ-ಶ್ರೀಪುಲಿಗಿರಿ-ಪಚ್ಚೆಯ ನೋಡಿಬೇಗ ॥ ಪ ॥ ಸಚ್ಚಿದಾನಂದರೂಪಚ್ಚರಿಯಾದಂಥ । ಮುಚ್ಚುಮರೆಯಿಲ್ಲದಚ್ಚುತ ನೆಂಬುವ ॥೧॥ ಕೈಗೆಸಿಕ್ಕುವದಲ್ಲವೈತ-ಕ್ಕಡಿಯಲ್ಲಿ-ತೂಗಿನೋಡುವದಲ್ಲವೈ ॥ ಆಗಮಾಂತಗಳಲ್ಲಿ ಯೋಗಿಹೃದಯದಲ್ಲಿ । ಭಾಗವತರೊಳನು ರಾಗದಿಮರೆಯುವ ॥ ೧ ॥ ಬೆಲೆಯಕಟ್ಟುವದಲ್ಲವೈ-ಈ ಪಚ್ಚೆಯ ನೆಲೆಯಕಂಡವರಿಲ್ಲವೈ ॥ ನಲಿದು ಧ್ಯಾನಿಪರಿಗೆ-ಒಲಿದುತೋರುವದಿವ್ಯ ಜಲಧರವರ್ಣದ ಜಲಜಾಕ್ಷನೆಂಬುವ ॥ ೨ ॥ ಧರೆಯೊಳುತ್ತಮವಾಗಿಹ-ಶ್ರೀಪುಲಿಯೆಂಬ-ಗಿರಿಯೊಳು ನೆಲೆಯಾಗಿಹ । ಚರಣವನಂಬಿದ ಶರಣರ ಪೊರೆಯುವ । ವರದವಿಠಲಧೊರೆ ವರದನೆಂದೆಸರಾದ ॥ ಪಚ್ಚೊ ॥ ೩ ॥

69, ರಾಗಾ—ಶ್ರೀರಾಗಾ.

ಸರ್ವಾಂತರ್ಯಾಮಿ-ನೀನೇಸರಿ-ಸರ್ವಜ್ಞನು ಸ್ವಾಮಿ॥ ಪ ॥ ಸರ್ವ ಕಾರಣ ಸರ್ವಾಧಾರನು। ಸರ್ವಶರಿರೇಕ ಸರ್ವನಿಯಾಮಕ ॥ ಅ ॥ ಹರಿತನಯನಿಗಂದೂಸ್ವಶಕ್ತಿಯ ಹರಿಕೊಡುವನು ಬಂದು । ಹರಿತನುಜನಿಗದು ಹರಿಯದು ಯೆನ್ನುತ-ಹರಿಸುತನನು ಗುರಿಮಾಡಿದೆ ಹರಿ ॥೧॥ ದ್ರೋಣನಸುತ ಬಂದು । ನಿಶಿಯೊಳುಮನೆ ಕಾಣಿಸುವನು ಎಂದೂ॥ಪ್ರಾಣಪದಕರನು ಕಾಣದಂತೆ ಬಲು ಜಾಣತನದಿ ಸಪ್ರಾಣರಮಾಡಿದೆ ॥೨॥ ಮರುತನ ಸುತನೆಂದು ಧೃತರಾಷ್ಟ್ರನು ಕರದಪ್ಪುವನೆಂದು॥ಭರದಿಂ ಲೋಹ ದೊಳೆರಕದ ಭೀಮನ ವಿರಚಿಸಿ ಶರಣನಹರಣವನುಳುಹಿದೆ ॥ ೩ ॥ ಶೈಲದ ಗುಹೆಯೊಳಗೆ -ಮಲಗಿದ್ದ ನೃಪಾಲನ ಖತಿಯೊಳಗೆ ಕಾಲಯವನನಂ ಕಾಲನಕಾಣಿಸಿ ಮೇಲೆಶರಧಿಯೊಳಾಲಯ ಮಾಡಿದೆ ॥೪॥ ಪರಮ ಋಷಿಯನಂದು - ತಾಪಿಡಿಯಲು ದುರುಳಪುಲಿಯುಬಂದು ॥ ಕರದಖಡುಗದಿಂ - ಹರಿಯನುಖಂಡಿಸಿ ಶರಣನಸಲಹಿದ ವರದವಿಠಲಹರಿ ॥ ೫ ॥

70. ರಾಗಾ—ಸುರಟಿ.

ಬೃಂದಾವನವೇರಿ - ಬಹುನಲವಿಂದ ಬಂದಶೌರಿ ॥ ಪ ॥ ಬೃಂದಾರಕವರದಿಂದಶೌರಿಯಾ ನಂದವ ಸೇವಕ ಬೃಂದಕೆತೋರಿ ॥ ಅ ॥ ಕುಂದಮುಕುಳದಿಂದಾ ಕುಮುದಸು ಗಂಧಿಯಗಳಿನಿಂದಾ ॥ ಕೆಂದಾವರೆ ಶ್ಯಾವಂತಿಗೆಜಾಜಿಯಿಂದ ರಚಿಸಿ ಸೊಗಸಿಂದಲಿ ಮೆರೆಯುವ ॥ ೧ ॥ ಸುತ್ತಿರೆ ಹಸ್ತಿಗಳೂ - ಕೂರ್ಮನು ಪೊತ್ತಿರೆ ಮಧ್ಯದೊಳು ॥ ಮತ್ತೆಫಣೇಂದ್ರನ ಮಸ್ತಕದಲ್ಲಿರೆ। ಸ್ವಸ್ತಿಕಾದಿಬಹು ಚಿತ್ರದಿ

ಶೋಭಿಸ ||೨|| ಪಂಕಜಚಿಹ್ನೆಗಳಾ-ಸೂರ್ಯಶ-ಶಾಂಕಸುರೇಖೆಗಳಾ || ಶಂಖಚಕ್ರ ಬಿರುದಾಂಕಿತ ದಿವ್ಯವಿಟಂಕದಿಂದ ಬಹು ಬಿಂಕದೊಳೆಸೆಯುವ ||೩|| ಕೋಟಿಯು ತೆನೆ ಗಳಲಿ-ದಿವ್ಯವಧೂಟಿಯರೊಲವಿನಲಿ | ನಾಟಕರಚನೆಯ ಪಾತಕರಂದದಿ | ನೋಟಕರಿಗೆ ಬಹು ದೀಟಿಲಿ (?) ತೋರುವ ||೪|| ಶಾರದಾಭ್ರನೀಲ-ಶರೀರದಿ-ಹೈರ ಣ್ಮಯಚೇಲಾ | ಹಾರಮಕುಟಕೇಯೂರಕಟಕಮಂ ಜೀರಭೂಷಣೋದಾರವಿಹಾರ ||೫|| ಮಂಗಳರವದೊಳಗೆ-ಶಂಖಮೃದಂಗ-ಧ್ವನಿಮೊಳಗೆ | ಸಂಗತ ಸುರವಾರಾಂಗ ನೆಯರು ಗಾನಂಗಳಿಂದ ನಾಟ್ಯಂಗಳರಚಿಸಲು ||೬|| ವರವಿಪ್ರರು ಪೊಗಳೆ-ಛತ್ರಚಾ ಮರಗಳ ನೆಳಲೊಳಗೆ || ಪರಿಪರಿಜ್ಯೋತಿಗಳೆಸೆಯಲು ಪುಲಿಗಿರಿ | ವರದವಿಠಲನು ವರ ಗಳ ಬೀರುತ ||೭||

71 ರಾಗ—ದ್ವಿಜಾವಂತಿ.

ವಂದೇಹಂ ಕಮಲಾದ್ರಿನಿವಾಸಂ-ಪಲ್ಲವೀಶಂ-ಇಂದೀವರಭಾಸಂ || ಪ || ಬೃಂದಾವನಪರಿಶೀಲನಮನುಗತ | ಬೃಂದಾರಕಗಣಾನಂದವಿಲಾಸಂ || ಅ || ಅಷ್ಟತೀರ್ಥಲಸದಷ್ಟಶೈಲಪರಿ ಶಿಷ್ಟಶಿಖರಿವಿಹಾರಂ | ಅಷ್ಟಮೂರ್ತಿಪರಮೇಷ್ಠಿ ಸಮರ್ಚಿತ-ಮಷ್ಟಸಿದ್ಧಿದಾತಾರಮುದಾರಂ ||೧|| ಅಂಬುಜಭವಪಿತ ಮಂಬುಜಪತ್ರ ವಿಡಂಬಿನಯನಯುಗಳಂ | ಜಂಭನಿಸೂದನ ಡಂಭರಹಿತ ಘಟ ಸಂಭವನುತ ಚರಣಾಂಬುಜಯುಗಳಂ ||೨|| ನಂದಗೋಕುಲಾನಂದಕಾರಣ ನಂದಗೋಪವರ ಕರು ಣಂ | ಮಂದಹಾಸವಿಜಿತೇಂದುಕಿರಣಮತಿ-ಸುಂದರಾಂಗಮಾನಂದವಿತರಣಂ ||೩|| ಕಲಮಧುರಸ್ವನಚಲಿತಹೃದಯಗೋ | ಕುಲಮೋಹನವೇಣುನಿನಾದಂ || ಚಲವ ಲಯಕ್ವಣ ವಿಲಸಿತಪಲ್ಲವ | ಲಲನಾಜನಸಂಮಿಳಿತವಿನೋದಂ ||೪|| ಧರಣೀಭರ ಪರಿಹರಣೋಚಿತವರ ಕರುಣಾಯತನಿಜವೇಷಂ | ಹರಿಣಾರಿಮಹೀಧರಣಾಲಯ ಶ್ರೀ ವರದಾನತಪದಶರಣಸುಪೋಷಂ ||೫||

72. ರಾಗ—ರೇಗುಪ್ತಿ.

ಪರಮಪುರುಷ ಬಾರೋ-ಪಾವನ-ಚರಣಯುಗವ ತೋರೋ ||ಪ|| ಶರ ಣರ ಪೊರೆಯುವ ಕರುಣೆಗಳರಸನೆ | ನಿರುತವುನಿನ್ನನೇ ನೆರೆನಂಬಿದೆ ಹರಿ || ಅ || ದಿಕ್ಕು ನೀನೆ ಎಂದು-ನಂಬಿದೆನಕ್ಕರಿಂದ ಬಂದು | ಟಕ್ಕಿನಿಂದ ನೀ ನಕ್ಕಜಮಾ ಡಲು, ತಕ್ಕುದೇನು ಘನ ರಕ್ಕಸವೈರಿಯೆ ||೧|| ಇಷ್ಟದೇವನಾರೋ-ಮನಸಾ- ಭೀಷ್ಟವಕೊಡುಬಾರೋ | ಅಷ್ಟರೊಳಗೂ ಬಹಳಿಷ್ಟದೆನೆಲಸಿದ || ಕೃಷ್ಣಮೂರ್ತಿ

ನೀಂದೃಷ್ಟಿಸು ನಮ್ಮನು ||೨|| ಕೇಣವ್ಯಾಕೋಹರಿಯೇ-ಕಣ್ಣಿಲಿ-ಕಾಣಬಾರೋ ಧೊರೆಯೇ || ಪ್ರಾಣದೊಡೆಯ ನೀ ಕಾಣಿಸು ಹರ್ಷವ | ಕಾಣೆ ನಿನಗೆ ಸರಿ | ಜಾಣತನದಿಹರಿ ||೩|| ವಾರಿಧಿಕೃತಶಯನ-ವಿಕಸಿತ-ವಾರಿಜದಳನಯನ || ಕ್ಷೀರದೊಳದ್ದುನೀ ನೀರೊಳಗದ್ದುಕಂ | ಸಾರಿ ನಿನ್ನನೆ ಸಾರಿದೆ ನರಹರಿ ||೪|| ಧರೆಯೊಳಧಿಕವಾದ-ಶ್ರೀಪುಲಿ-ಗಿರಿಯೊಳುನೆಲೆಯಾದ || ಶರಣಾಭರಣ ನಿಜ | ಕರುಣವ ತೋರಿಸು | ವರದವಿಠಲಧೊರೆ ವರದ ದಯಾನಿಧೆ ||೫||

73. ರಾಗಾ—ಸಾವೇರಿ.

ಸೇವೇ ಶ್ರೀರಮಣಂ-ಸದಾ-ಸೇವಕಾರ್ತಿಹರಣಂ ||ಪ|| ಪಾವಕ ಶತರುಚಿ ರುಚಿರಾಭರಣಂ | ಪಾವನವ್ಯಾಘ್ರಾಜಲವಿಹರಣಂ ||ಅ|| ಪುಂಡರೀಕಾಯತ ನೇತ್ರಂ | ಮಂಡಿತಖಗಪತಿಪತ್ರಂ || ಖಂಡಪರಶುಕೃತಸನ್ನುತಿಪಾತ್ರಂ | ಚಂಡಕಿರಣಶತಸನ್ನಿಭಗಾತ್ರಂ ||೧|| ಕುಲಿಶಧರಾತ್ಮಜಮಿತ್ರಂ—ಸುಲಲಿತ ಕರಧೃತ ಗೋತ್ರಂ | ಕಲಿತರಥಾಂಗಧರಾಸಿತನುತ್ರಂ | ಕಲಿಮಲಖಂಡನನಿಜಚಾರಿತ್ರಂ ||೨|| ಭಾವಿತಜನಮಂದಾರಂ-ಭಾವಜ-ಜನಕಮುದಾರಂ || ಸೇವಕರಕ್ಷಣ ಧೃತಶರೀರಂ | ದೇವಸಮೂಹಾಕಲಿತವಿಹಾರಂ || ೩ || ಶಂಕರಹೃದಯಧ್ಯೇಯಂ | ಕಿಂಕರಜನ ಸಮುದಾಯಂ || ಪಂಕಜನಿಲಯಾಲಿಂಗಿತಕಾಯಂ | ಸಂಕಟಮೋಚಕ ನಿಜನಾಮಧೇಯಂ ||೪|| ಪರಮಪುರುಷಮನವದ್ಯಂ | ಸರಸಗುಣಾಕರಮಾದ್ಯಂ || ವರ ಯೋಗಿಜನಹೃದಯಾರಾಧ್ಯಂ-ವರದವಿಠಲಮಖಿಳಾಗಮ ಬೋಧ್ಯಂ ||೫||

74. ರಾಗ—ದೇಶಿ.

ಎಂತೋಪೂಜಿಪುದಂತರ್ಯಾಮಿಯಾ - ನಂತಾದಿರಹಿತನ | ಚಿಂತಾದೂರನ ಚಿನುಮಯ ರೂಪನಾ || ದೆಂತೋಧ್ಯಾನಿಪೆನಾ || ಪ || ಈಶ '—ವೀಶ—' ವಾಹನಗೀಸಚರಾಚರವಿಾಸಲಿಗೊಳಗಲ್ಲಾ | ಆಸನವಿತ್ತರೆ ವಾಸುಕಿಭೋಗ ನಿವಾಸಿಗೆ ತರವಲ್ಲಾ || ೧ || ಚರಣದಿಗಂಗೆಯ ಧರಿಸುವಾತನ | ಚರಣವ ತೊಳೆಯುವರೇ | ತರಣಿಗೆ ತೇಜದಭರಣಿಗೆ ದೀಪದ ಸರಣಿಯ ತೋರುವರೆ ||೨|| ವಿಗ್ರಹರಹಿತನಿಗರ್ಘ್ಯದಪೂಜೆಯು ದುರ್ಘಟಕಾರ್ಯವಲೆ | ಭರ್ಗಾದ್ಯಮರರ | ವರ್ಗವು ತಮ್ಮ ನಿಸರ್ಗದಿಕಾಣದಲೆ || ೩ || ಕಲಶಾಂಬುಧಿಯೊಳು ನೆಲಸಿಹ ಮೂರ್ತಿಗೆ-ಸಲಿಲಸ್ಪರ್ಶನವೆ | ಜಲರುಹನೇತ್ರಗೆ | ಜಲರುಹಗಾತ್ರಗೆ | ಜಲದಲ್ಲಿ ಮಜ್ಜನವೆ ||೪|| ಸ್ವರ್ಣಾಂಬರಗಳ ಬಣ್ಣಿಸುತುಡುವಗೆ | ಬಣ್ಣದವಸ್ತ್ರಗಳೆ ||

ಉನ್ನತ ಕೌಸ್ತುಭರನ್ನದ ತೊಡವಿಗೆ | ಬನ್ನಣದೊಡವೆಗಳೆ ||೫|| ಬಿಸಜನಾಭನಿಗೆ ಕುಸುಮಾಸ್ತ್ರನ ಮಾನಸದಿಂಪಡೆದವಗೆ | ಮಿಸುಪತುಲಸಿಯಿಂದೆಸೆವಗೆ ಪೂಗಳ ವಿಸರಮನೋಹರವೇ ||೬|| ಗಂಧವಾಹನ ಸುವಿಂದಲಿಸ್ಯಜಿಸಿದ ಗಂಧವತೀಶನಿಗೆ | ಗಂಧಧೂಪಗಳು ಬಂಧುರಂಗಳೆ ಗಂಧರ್ವಾನತನಿಗೆ ||೭|| ವೇದಗೋಚರಿಸುವೇದಾತ್ಮಕನು | ವೇದೋದ್ಧಾರಕನು || ವೇದಲೇಶದಿಂಮೋದಿಸುವನೋ ಸಮ್ಮೋದಪರಾತ್ಮಕನೆ ||೮|| ಪೊಕ್ಕರೆಜಲಮಂ ಕುತ್ತಿಗೆನೆರೆಯುದವಸ್ತು ಪರಾತ್ಪರನಾ || ನಿತ್ಯತೃಪ್ತನಂ ಚಿತ್ರಾನ್ನಗಳಿಂ ತೃಪ್ತಿಪುದೆಂತುಜನಾ ||೯|| ಮಂತ್ರಮೂರುತಿಗೆ ಮಂತ್ರಜ್ಞನಿಗೆ ಸ್ವತಂತ್ರವಿಹಾರನಿಗೆ || ಮಂತ್ರಯಂತ್ರಗಳ ತಂತ್ರವದೆಂತೊ ಮಂತ್ರಾಧಾರನಿಗೆ ||೧೦|| ಅಂತರ್ಬಹಿಯೊಳಗಂತರವಿಲ್ಲದನಂತಗುಣಾತ್ಮಕನಾ | ಎಂತುಪ್ರದಕ್ಷಿಣೆಯಾಂತು ನಮಿಪೆಜಗದಂತಶರೀರಕನಾ ||೧೧|| ಸರ್ವಾಧಾರನ ಸರ್ವಶರೀರನ ಸರ್ವವ್ಯಾಪಕನಾ | ಸರ್ವನನಮಿಸುವಗರ್ವವೆಂತುಟೊ ಶಕ್ರನಮುಸ್ಕೃತನಾ ||೧೨|| ಧರೆಯೊಳುಪುಲಿಗಿರಿವರದ ವಿಠಲನ ಚರಣವಭಜಿಸುವರ | ಸಿರುತದಿ ಪೂಜಿಪ ಹರುಷವುಸಾಲದೆ ಹರಿದಾಸೋತ್ತಮರಾ ||೧೩||

75. ರಾಗಾ—ಮಾಂಜಿ.

ಬದುಕಿಸೀ ಪಶುಗಳನೂ ಭಗವಂತನೀನು | ಪ || ಬದುಕಿಸೀ ಪಶುಗಳ ಭವರೋಗವೈದ್ಯನೆ | ಕದಲಿಸೀ ರೋಗವ – ಕರುಣಿಗಳರಸನೆ || ಅ || ಗೋವುಗಳೆಲ್ಲಾ ಹೊಟ್ಟೆ – ನೋವಿನಿಂ ಕಂಗೆಟ್ಟು || ಮೇವನುಬಿಟ್ಟವಿ ದಾವರೋಗವೋಕಾಣೆ || ೧ || ಹೊಟ್ಟೆ ಕಳೆದು ಕಂಗೆಟ್ಟುಧಾತುಗಳೆಲ್ಲಾ | ಕೆಟ್ಟು ಜೀವಂಗಳ ಬಿಟ್ಟು ಬಿಡದಮುನ್ನ || ೨ || ನಾಲಿಗೆನೀಡವು ಕಾಲುಕೆಟ್ಟವುಕಂ | ಣಾಲಿ ಕೆಂಣಾಲಿ ಕೆಂಪಾದವು | ಮೂಲವೆ ತಿಳಿಯದು || ೩ || ಗೋವುಗಳಿಗೆ ಭೂದೇವರುಗಳಿಗೆಲ್ಲ | ದೇವನೀನಲ್ಲವೆ – ದೇವಕೀ ತನಯನೆ || ೪ ||ಸತ್ತವರಿಗೆಜೀವ – ವಿತ್ತುಬದುಕಿಸಿದೆ|| ಮೃತ್ಯುದೇವತೆನಿನ್ನ ತೊತ್ತಹಳಲ್ಲವೆ || ೫ || ದಾಸನು ನಾನೆಂಬ | ವಾಸಿಯುಳ್ಳರೆ ಬೇಗ | ವಾಸಿಯಮಾಡಯ್ಯನೀ | ಮೋಸವಮಾಡದೆ || ೬ || ಇಷ್ಟದಿನೆನೆವರ ಕಷ್ಟವಕಳೆವ ಪುಲಿ | ಬೆಟ್ಟದೊಳಿಹವರದ ವಿಠಲ ಕೃಷ್ಣನೀ || ೭ ||

76. ರಾಗ—ಮಾಂಜಿ.

ನಿನಗಿದು ಘನವೆ – ನಿತ್ಯಾತ್ಮಕ || ವನಜಭವಾದಿಗಳನು ಪಾಲಿಪದೇವ ||ಪ|| ಸದಯನೀನಾದರೆ – ಬದುಕಿಸಿ ಪಶುಗಳ || ಮುದವನು ತೋರಿಸು | ಮಧುಸೂಧನ

ಈಗ ||೧|| ಇದಿರಿಗೆ ನೋಡಲಾ - ರದೆ ನಿನ್ನ ದೂರಿದೆ || ಇದುವೊಂದು ತಪ್ಪಯ ನ್ನದು ಎಂದು ಮನ್ನಿಸು || ೨ || ವಿಷದನೀರನು ಕುಡಿ - ದಸುವನ್ನು ಕಳಕೊಂಡ ಪಶುಪಾಲಕರಿಗೆನೀನಸುವಿತ್ತು ಪೊರೆದೆ || ೩ || ಹೊಟ್ಟೆಯೊಳಗೆಸತ್ತು ಹುಟ್ಟಿದ ಶಿಶುವನು | ಮುಟ್ಟಿಜೀವನವಿತ್ತೆ | ಕೃಪಾಳ್ಕೃಪಾಕರ || ೪ || ಗುರುಸುತನನುಯಮ ಪುರದಿಂದ ಕರೆತಂದ | ಪರಮಶ್ರೀಪುಲಿಗಿರಿ ವರದವಿಠಲರಾಯ || ೫ ||

77. ರಾಗಾ—ದ್ವಿಜಾವಂತಿ.

ನೀರಜಾಕ್ಷನಿನ್ನೂರಿಗೆ ಪೋಗುವ ದಾರಿಯ ತೋರಯ್ಯ || ಪ || ಘೋರವಾದ ಸಂಸಾರವೆಂಬಕಾಂತಾರದಿ ತೊಳಲುವೆ ದಾರಿಯಕಾಣದೆ || ಅ || ಜನ್ಮಾಂತರಕೃತ ಕರ್ಮಗಳೆಂಬುವ ಹೆಮ್ಮರಗಳು ಬೆಳೆದು | ಧರ್ಮವಿರೋಧವಿ ಕರ್ಮದ ಬಳ್ಳಿಯು ಬಿಂಮನೆ ಬಿಗಿವಡೆದು || ಹಮ್ಮಿನ ಗುಂದಿಯ ಹೆಮ್ಮೆಯಕಂಟಕ ನೆಮ್ಮನುಕಾಲಿಡ ಲಮ್ಮಗೊಡವು ಹರಿ || ೧ || ನಾರಿಯ ಮೋಹದ ಭಾರಿಯದುರ್ಗವು ದಾರಿಯೊಳಡಸಿಹುದು | ಮಾರಿಬರಲುಘನ ಚೋರರು ಕಾದಿಹರಾರುಮಂದಿಮುಳಿದು || ಮೂರುತೆರದೊಳಿಹ ಘೋರತಾಪಗಳು ಸಾರಿಸಾರಿ ಬಾಯಾರಿಸುತಿರ್ಪವು || ೨ || ಮನೆ ಮನೆ ವಾರ್ತೆಗಳೆನಿಪ ಮಹಾನದಿಯನು ದಾಂಟುವೊಡರಿದು | ಧನಕನಕಾದಿಗಳೆನಿಪ ಪಿಶಾಚಗಳನವರತವು ಬಿಡವು || ತನುಸಂಬಂಧದ ಜನಗಳು ದುರ್ಮಾರ್ಗವನು ಪೋಲುತ ನಮ್ಮನು ಬಾಧಿಸುತಿರುವರು || ೩ || ಕ್ಷುದ್ರ ವಿಷಯಗಳು ಛಿದ್ರವಹುಡುಕುವ ವಧ್ರುಗದೇಹದೊಳು ? ಕದ್ರುಸುತರವೊಲು ಪದ್ರವಗೈವವಭದ್ರದ ಭೀತಿಗಳೂ || ನಿದ್ರೆಯೊಳೆಮ್ಮನು ಮುದ್ರಿಸಿ ಗೈವಳುಪದ್ರವ ಜರೆಯೆಂಬುದ್ರಿಕ್ತಾಂಗನೆ || ೪ || ಸುರನರವರರೊಳು ತರಣೋಪಾಯುವ | ನರಸಿದೆ ಮನವಿವಿಸಿ | ನರಿಗಳಪರಿಯಲಿ ನರಳುವರೆಲ್ಲರು ನರಕಗಳನುಭವಿಸಿ || ಶರಣಾಗತರನು ಪೊರೆಯುವ ಪುಲಿಗಿರಿ, ವರದವಿಠಲನಿಜ ಚರಣವ ನಂಬಿದೆ || ೫ ||

78. ರಾಗ—ರೇಗುಪ್ತಿ—ಅಟತಾಳ.

ತಿಗಣೆಯ ಕಾಟವೇ ಕಾಟ - ಚಲ್ವ - ಸುಗುಣೆಯ ಕೂಟವೇ ಕೂಟ||ಪ|| ಹಗಲಿರುಳೆನ್ನದೆ ಬಗೆಬಗೆ ರತಿಯೊಳು - ಸೊಗಯಿಸಿ ದೇಹಧಾತುಗಳನು ಕೆಡಿಸುವ || ಪ || ಮನೆಯೊಳು ತಿಗಣೆಯು ಹೆಚ್ಚಿತು - ಮನಸಿಜನವಸ್ತ್ರಕೆ ಮನಸೋತು || ಕಾಮುಕ| ಜನದಂತೆ ನಿಶಿಯೊಳಗನುದಿನ ಬಾಧಿಪ || ೩ || ಗೋಡೆ ಕಂಬಗಳಸಂದುಗಳಲಿ ಮನೆ ಮಾಡಿ ಹಾಸಿಗೆ ಮಂಚಾದಿಗಳಲಿ || ರೂಢಿಸಿ ಕಾಮಿನಿ ಕೂಡುವತೆರ

ದೊಳೋಲಾಡಿ ಶರೀರದ ನಾಡಿಯು ನಿಲ್ಲಿಸುವ || ೨ || ಸದ್ದಡಗಲು ಜತೆಗೂಡುತ-ಸುಖ-ನಿದ್ರೆಯ ಸಮಯವನೋಡುತ || ಹೊದ್ದಿ ಸಮೀಪವ ಮುಗ್ಧೆಯರಂದದಿ ಮುದ್ದಾಡುತ ನಮ್ಮ ನೊದ್ದಾಡಿಸುತಿಹ ||೩|| ಹಗಲಿನ ಮೂಲದೊಳೀರಿ-ನಮ್ಮ ಬಗಲಿನ ಸಂಧಿಗೆ ಸೇರಿ || ತೊಗಲಿನ ನರಕಕ್ಕೆ ತಗಲೆ ನಿದ್ರೆಯನಗಲಿಸಿ ಬೇಗದಿ ಸುಗುಳಿಕದ್ದೋಡುವ ||೪|| ಚಿಗಟದ ಹಿಂದೊಡಗೂಡಿ - ನಮ್ಮ - ತೊಗಟಿರಕ್ತದ ಸವಿನೋಡಿ | ತಿಗಟಿಯುಸಂದಿಸಿ, ಚಿಗಟದಪರಿಯಲಿ|ಬುಗುಟೆದ್ದಗಾಯವ ವಿಗಟವ ಮಾಡುವ ||೫|| ನೋಟಕನೀನಾಗಬಹುದೆ - ಕಪಟ-ನಾಟಕಧಾರನೆ ಬರಿದೆ || ಕಾಟಕೆಮರ್ದಬಲು ಕೋಟಲೆಯುಂಬೆ ನಿಶಾಟದಲ್ಲಣ ನಿನ್ನ ಕೂಟದಜನರಿಗೆ ||೬|| ದುರಿತಕೋಲಾಹಲನೆಂದೆ-ನಿನ್ನ ಬಿರುದನು ಪೊಗಳುತನಿಂದೆ || ಧರೆಯೊಳು ತ್ರಮ-ಪುಲಿಗಿರಿಯೊಳುನೆಲಸಿಹ | ವರದವಿಠಲ ನಿನ್ನ ಶರಣರಾದವರಿಗೆ ||೭||

79. ರಾಗಾ-ಆದಿತಾಳ.

ಯಾಕೇ ಕೃಪೆಬಾರದೋ-ಲೋಕರಕ್ಷಕ ನಿನ-ಗ್ಯಾಕೇ || ಪ || ಲೋಕರಕ್ಷಕ ದುಷ್ಟಕಾಕಶಿಕ್ಷಕ ನಿನಗ್ಯಾಕೇ || ಅ || ಪಕ್ಷಿವಾಹನನೆನಿ || ಲಕ್ಷಿಸದಿರಲು ಲೋಕದಿ | ಲಕ್ಷಣವಲ್ಲವೊ ಶುಭಲಕ್ಷಣ ಮೂರುತಿನಿನ || ಗ್ಯಾಕೇಕೃಪೆ || ೧ || ಕುಕ್ಷಿಯೊಳೀ ಜಗವನಿಟ್ಟು | ರಕ್ಷಿಸುವಲಕ್ಷ್ಮೀಪತಿ || ದಕ್ಷಿಣಶೇಷಾದ್ರಿವಾಸ | ರಕ್ಷಿಸುನಿನ||ಗ್ಯಾಕೇಕೃಪೆ || ೨ || ವಾಸವಸನ್ನುತ ಶ್ರೀನಿವಾಸ ನಿನ್ನದಾಸನೊಳು|| ದೋಷವನೆಣಿಸದೆಕಾಯೊ ದೋಷರಹಿತನೆನಿನ| ಗ್ಯಾಕೇ || ೩ || ಸೃಷ್ಟೀಶ ನಿನ್ನ ಶುಭ ದೃಷ್ಟಿಯಿಂದ ನೋಡಿಯನ್ನ | ಕಷ್ಟವ ಬಿಡಿಸಿಮನದಿಷ್ಟವ ಪಾಲಿಸು || ೪ || ವಾರಣವರದ ಭವ | ತಾರಣಚರಣ ಗುಣ | ಪೂರಣ ವರದವಿಠಲ | ಕಾರುಣಿಕರಸ ನಿನ ||ಗ್ಯಾಕೇದಯಬಾರದು || ೫ ||

80. ರಾಗಾ-ಭೈರವಿ-ರೂಪಕ.

ಹರಿಯೆ ಯನ್ನ ಧೊರೆಯೆ ನಿನ್ನ ಮರೆಯ ಹೊಕ್ಕನೊ || ಮರೆಯದೆನ್ನ ಪೊರೆಯೊ ವ್ಯಾಘ್ರ ಗಿರಿಯೊಳಿರುವ ಸಿರಿಯರಮಣ || ಅ || ಸಕಲಲೋಕಗಳನು ನೀನೇ ಸೃಜಿಸುವಾತನು ಸುಖದಿಪ್ರಾಣಿಗಳನು ನೀನೆ ಸಲಹುವಾತನು | ಪ್ರಕಟವಾದ ಜಗವನೀನೆ-ಪ್ರಳಯಗೈವನು| ನಿಖಿಲಜೀವಸಾಕ್ಷಿಯಾಗಿನಿತ್ಯನೀನೆನಿಯಮಿಸ್ಸುವನು || ಹರಿಯೆ ||೧|| ಸ್ಥೂಲಸೂಕ್ಷ್ಮರೂಪನೀನೆ ಮೂಲಪುರುಷನು|ಲೀಲೆಯನ್ನು ಪ್ರಕಟಗೈವ ಕಾಲರೂಪನು || ನೀಲಲೋಹಿತಾದಿ ವಿಬುಧಜಾಲವಂದ್ಯನು ಪಾಲಿ

ತಾಖಿಲಾಂಡ ರಮಾಲೋಲ ಸುಗುಣಜಾಲ ಶ್ರೀ ॥ ೨ ॥ ಪರಮಪುರುಷ ಪಂಕ ಜಾಕ್ಷ-ಪತಿತಪಾವನ | ಶರಧಿಶಯನ ಸಕಲಲೋಕ ಸಂವಿಭಾವನ | ವರಗುಣಾಢ್ಯ ವಿಗತಮಾಯುವಿಶ್ವಮೋಹನ||ದುರಿತಗಜಮೃಗಾಧಿರಾಜವರದವಿಠಲವಿಹಗಯಾನ|೩|

81. ರಾಗಾ-ಭೈರವಿ-(-ಪೂರ್ವಿ)-ಆದಿ.

ಶ್ರೀ ವೆಂಕಟೇಶಪಾಹಿ-ತಾವಕಭಕ್ತಿಂದೇಹಿ ॥ ಪ ॥ ವಾರಿಜನೇತ್ರಾ-ವಾರಿದ ಗಾತ್ರಾ – ನಾರದಸನ್ನುತಪಾತ್ರ, ನರಮಿತ್ರ ಸುಚರಿತ್ರ ॥ಶ್ರೀ॥ ೧ ॥ ಅಂಡಜ ಯಾನ-ಕುಂಡಲಿಶಯನ ॥ ಖಂಡಪರಶು ಪರಿಪಾಲನ ಮುನಿಲಾಲನ ಸುರಖೇಲನ ॥ಶ್ರೀ॥ ೨ ॥ ವೆಂಕಟರಮಣ-ಪಂಕಜ ಚರಣ ॥ ಸಂಕಟಮೋಚನಕಾರಣ | ಭವ ತಾರಣ ಗುಣಪೂರಣ ॥೩॥ ದಶರಥಬಾಲಾ-ದಶಮುಖಕಾಲ ॥ ದಶಶತಲೋಚನ ಪಾಲಾ-ಭೂಪಾಲಾ_ಸುರಮುನಿಲೋಲ ॥ ೪ ॥ ನಂದಕುಮಾರ-ನವನೀತಚೋರ | ಬೃಂದಾವನವಿಹಾರಾ_ಬಹುದಾರಾ-ಧುರಧೀರ ॥ ೫ ॥ ಅಜನುತಪಾದ-ಅಪಹೃತ ಖೇದ ॥ ಸುಜನಕಲುಷನಿರ್ಭೇದ | ನುತವೇದ | ಸುರಮೋದ ॥ ೬ ॥ ವರವ್ಯಾ ಘ್ರಾಚಲವಿಹರಣಶೀಲ ॥ ವರದವಿಠಲ ಗೋಪಾಲ-ಶ್ರೀಲೋಲ-ಬಹುಲೀಲಾ ॥೭॥

82. ರಾಗಾ-ಜುಂಜೋಟಿ

ಶ್ರೀನಿವಾಸ ನಿನ್ನ ನಂಬಿದ ದಾಸನ | ಶ್ರೀವಾಸುಕಿಶಯ ಕಾಯೋಯನ್ನ ನು ॥ ಪ ॥ ರೂಪರಹಿತ ಬಹು | ರೂಪಧರಿಸಿಹ ಶ್ರೀಪತಿಯನ್ನನು ನೀಪರಿಪಾ ಲಿಸು ॥ ೧ ॥ ಕಾಲರೂಪ ಬಹು-ಲೀಲೆಯತೋರುವ | ಮೂಲಪುರುಷಸುರ ಪಾಲಕ ಶ್ರೀಹರಿ ॥ ೩ ॥ ಶಕ್ತಿಗಳನು ಅವ್ಯಕ್ತದೊಳಿರಿಸಿ ಸ | ಮಸ್ತವಸ್ತುವ ಸುವ್ಯಕ್ತಪಡಿ ಸಿದ ॥ ೩ ॥ ಕಲ್ಪಕೋಟಿ ನಿನಗಲ್ಪಕಾಲಪರಿ ! ಕಲ್ಪಿತಸುರನರ ಕಲ್ಪಭೋಜಹರಿ ॥ ೪ ॥ ಖಂಡಪರಶು ಆಖಂಡಲಾದಿಸುರ | ಮಂಡಲಸೇವಿತ ಪುಂಡರೀಕಪದ ॥೫॥ ಮಂಧರಧರಗೋವಿಂದ ಮುಕುಂದಸ | ನಂದನಾದಿ ಮುನಿಬೃಂದಸುವಂದಿತ॥ ೬॥ ಸಾರಸುಗುಣಪರಿ ವಾರಸಜ್ಜನಾ ಧಾರ ಧೀರವರದ ವಿಠಲಹರಿ ॥ ೭ ॥

83. ರಾಗಾ-ಬೇಹಾಗ್-ಖರಹರಪ್ರಿಯ.

ಬಾರೋಮನೆಗೆ ಭಾಗವತರ ಭಾಗದೇಯನೆ ॥ ಚಾರುವದನ ತಾಮರಸವ ತೋರು ಪ್ರಿಯನೆ ॥ ಪ ॥ ಹಗಲು ಯಿರಳು ನೆನಹು ಬಿಡದು ॥ ಸುಗುಣಸುಂದರ | ಬಗೆಯೊಳೆನ್ನ ಮರೆಯ ಬಹುದೆ | ನಿಗಮಗೋಚರ ॥ ೧ ॥ ಕಣ್ಣಿನಿಂದ ನಿನ್ನ ನೋಡಿ ಧನ್ಯನಾಗುವೆ | ನಿನ್ನ ಚರಣಕೆನ್ನಶಿರದಿ ಮುನ್ನಬಾಗುವೆ ॥ ೨ ॥

ನಿತ್ಯತೃಪ್ತ ನಿನಗೆ ನಾನೇ ಭೃತ್ಯನಾಗುವೆ | ನೃತ್ಯಗೈದು ಪಾಡಿಕೃತಕೃತ್ಯನಾಗುವೆ || ೩ || ಶ್ರೀನಿವಾಸನಿನ್ನದಾಸನಾನೇನಲ್ಲವೆ | ಮಾನಪ್ರಾಣಗಳಿಗೆ ಧೊರೆಯು ನೀನೇಯಲ್ಲವೆ || ೪ || ಶರಣಜನರ ಭರಣಗೈವ ಕರುಣಿಯಾರೆಲಾ | ಹರಿಣಹರ ಧರದೊಳಿರುವವರದವಿಠಲಾ || ೫ ||

84. ರಾಗಾ—ಮೋಹನ.

ಮಾಮವದೇವ-ಮಹಾನುಭಾವ-ಶ್ರೀಮನೋಹರ ನಿರಾಮಯ ಚಿನ್ಮಯ | ರಾಮರಮ್ಯಗುಣಧಾಮ ತಾವಕಂ || ಮಾ || ಪ || ಪಂಕಜನೇತ್ರ-ಪರಮ ಪವಿತ್ರ | ಶಂಖಚಕ್ರಧರ ಕಿಂಕರಾರ್ತಿಹರ | ಪಂಕಜಾಲಯಾಲಂಕೃತಗಾತ್ರ || ಮಾ || ೧ || ನೀಲಾಂಬುದಾಭ | ನೀರಜನಾಭ ಬಾಲಭಕ್ತಪರಿಪಾಲಹೇಮಮಯ | ಚೇಲನವ್ಯವನಮಾಲ ಸುಶೋಭ || ೨ ||ಕರುಣಾಲವಾಲ-ಖಳಕುಲಕಾಲ || ಹರಿಣ ಹರಣಧರವರಶಿಖರಾಲಯ | ವರದವಿಠಲ ಸುಖ ಕರಕಮಲಾಲಯ || ಮಾ || ೩||

85. ರಾಗಾ.

ಭಜನೆಯ ಮಾಡಬಾರದೆ-ಭಕ್ತಿ ಮಿೀರದೆ|| ಭುಜಗಶಯನ ಗೋದ್ವಿಜಕುಲದೇವನ || ಅ || ಅಜಭವಮುಖಸುರ ವ್ರಜವಂದ್ಯನಪದ| ಭಜಕ ಸುಜನರಿಗೆ ನಿಜಸುಖ ದಾತನ || ೧ || ಪಂಕಜನೇತ್ರನ-ವರಮುಪವಿತ್ರನ, ಶಂಕರನುತನಿಷ್ಕಲಂಕನ | ಭಜನೆ || ೨ || ಚರಣವ ನಂಬಿದ ಶರಣರ ಪೊರೆಯುವ| ವರದವಿಠಲ ಧೊರೆ ವರದನ

86. ರಾಗ—ಬೇಹಾಗ್.

ಶ್ರೀನಿವಾಸ ಸಲಹೋ ನಮ್ಮ ಶ್ರೀನಿಧಾನ ಚರಣನೆ | ಧ್ಯಾನ ನಿರತಮೌನಿ ಜನರ ಮಾನಸಾಬ್ಜಹಂಸನೆ || ಅ || ನಕ್ರಮುಖದಿ ಸಿಕ್ಕಿದಿಭನನಕ್ಕರಿಂದ ಪೊರೆದನೆ | ಚಕ್ರಧರ ತ್ರಿವಿಕ್ರಮಾದಿ ಚಕ್ರಭೋಗಿಶಯನನೆ || ೧ || ಬಿಟ್ಟು ನಿನ್ನ ಭ್ರಷ್ಟನಾಗಿ ಕೆಟ್ಟೆ ಜನ್ಮ ಜನ್ಮದೆ || ಹುಟ್ಟಿ ಹುಟ್ಟಿ ಕಷ್ಟಪಟ್ಟೆಕೃಷ್ಣ ನಿನ್ನ ನಂಬಿದೆ || ೨ || ಶರಣ ಜನರ ಪೊರೆವನೆಂಬ ಬಿರುದು ಧರಿಸನಲ್ಲೆಲಾ | ಹರಿಣ ಹರಣಧರದೊಳಿರುವ ಕರುಣಿ ವರದ ವಿಠಲ || ೩ ||

87. ರಾಗಾ.

ಮಂದರಧರಗೋವಿಂದ ಮುಕುಂದ ಸನಂದ ವಂದ್ಯನೆ ಲಾಲಿಸೋ|ಕುಂದರದನ ಶರದಿಂದುವದನ ಮುಚುಕುಂದವರದನೆ ಪಾಲಿಸೋ || ಪ || ಸಾರಸಭವನುತ ಸಾರ ಚರಿತ ಸಂಸಾರಪಯೋನಿಧಿ ಪಾರದನೆ||ವಾರಿಧಿಮದಹರ ವಾರಿಧಿನಿಭಶಾರೀರವಿಹಾರ

ವಿಶಾರದನೆ || ೧ || ಶ್ರೀಶನಿಖಿಲಲೋಕೇಶಜನಕಭವಪಾಶವಿಮೋಚನ ಪಟುಚರಿತ || ಈಶವಿನುತ ಸರ್ವೇಶಪರಾತ್ಪರ | ಕೇಶವಸದ್ಗುಣಗಣಭರಿತ || ೩ || ಧರೆಯೊಳು ಶ್ರೀ ಪುಲಿಗಿರಿಯೊಳು ನೆಲಸಿಹ, ಶರಣರ ಸಲಹುವ ಶ್ರೀಧರನೆ || ವರದ ವಿಠಲ ಸುಖಕರಣ ಕುಶಲ ಕರಿವರದ ಚಕ್ರಧರ ವರನೆ || ೩ ||

88. ರಾಗಾ-ಜುಂಜೋಟಿ.

ಬಾರೋ ಬಾರೋ ಭವನುತ ಚರಣನೆ | ಸಾರಸುಗುಣ ಪರಿಪೂರಿತ ಕರುಣನೆ || ಪ || ಚರಣ ಕಮಲಗಳಿಗೆರಗುವೆ ಭಕ್ತಿಯಲಿ | ಭರದಲಿ ಯನ್ನನು ಪೊರಯಲು ಮುದದಲ್ಲಿ || ೧ || ಅರಿದರ (?) ವರಗಳ-ಕರದಲಿ ಪಿಡಿಯುತ | ಕರಿಯನು ಪೊರೆಯುವ ತ್ವರೆಯಲಿ ಬಹುವೋಲ್ || ೨ || ಪರಮಪುರುಷಫಣಿಗಿರಿಶಿಖರಾಲಯ| ವರದವಿಠಲಸುಖಕರಕಮಲಾಲಯ || ೩ ||

89. ರಾಗ—ಕಾಂಬೋದಿ—ಆದಿತಾಳ.

ಕರುಣದಿಕಾಯೋ – ಕರುಣಾಲವಾಲ || ಪ || ಶಿರಿಯರಸನೆ ನಿನ್ನ | ಚರಣವ ನಂಬಿದೆ | ಸುರಗಣಸೇವಿತ ಸುರರಾಜ ಪಾಲ ||ಅ|| ಇಂದ್ರನ ಕೂಡಿ ಮುನೀಂದ್ರನ ಸತಿಶಾಪ | ದಿಂದರೆಯಾಗಿರಲಂದು ನೀದಯದಿ || ಸುಂದರ ಚರಣಾರವಿಂದಗಳಿತ್ತ ಧೂಳಿಯಿಂದ ಪಾವನಗೈದ ಇಂದಿರೇಶನೆ ನೀ || ಕರು || ನಕ್ರನಮುಖದಲ್ಲಿ ಸಿಕ್ಕಿದ ಕರಿಕುಲ ಚಕ್ರವರ್ತಿಯು ಮರೆಹೊಕ್ಕರೆ ನುತಿಸಿ||ಚಕ್ರದಿ ಮಕರಿಯ ನಿಕ್ಕಿ ಗಜೇಂದ್ರನ | ರಕ್ಷಿಸಿದಾಪರಿಯಕ್ಕರೆ ತೋರಿಸಿ ||೨|| ತರಣಿತನಯಫಣಿ ವರಶರವನು ನರವರ ಶಿರಸರಿಸಕ್ಕೆ ಗುರಿಯಿಡಲು || ಚರಣದುಂಗುಟದಿಂದ ಧರಣಿಯನೂರಿನರನ-ಶಿರವುಳುಹಿದ ಶಿರಿವರದ ವಿಠಲ ಹರಿ ||೩||

90. ರಾಗಾ—ಜಾವಡಿ.

ಶೌರಿನಂದನ ಪರಿವಾರ ಟಂದನ-ಸರಿಯಾರೋ ಹರಿ ನಿನಗೆ || ಪ || ನಿನಗೆ ಸರಿಯಾರೋ | ಶ್ರೀಧರನೆ || ಅ || ನೋಟಮಾತ್ರದಿ ಜಗತ್ ಕೋಟಿ ನಿರ್ಮಿಸಿಪರಿ, ಪಾಟಿಯಿಲ್ಲದ ಸೂತ್ರ ನಾಟಕಧಾರಿ || ಸರಿ || ೧ || ಬಗೆ ಬಗೆ ರತಿಯಲಿ ಜವನು ಮೋಹಿಪ | ನಿಗಮಾಂತ ಗೋಚರ ನಗಧರ ಹರಿ-ಸರಿಯಾರೋ || ೨ || ಸುರವರಪೂಜೆಯು – ನರಕೆ ಮಾಡದೆ ಬಂದ | ಶಿರಿಯ ಮೋಹಿಸುತಿರ್ಪ ವರದವಿಠಲ ||ಸರಿ||೩||

91. ರಾಗಾ—ಆರಭಿ—ಆದಿತಾಳ.

ಸಾರಸದಳನಯನೆ – ಸಲಹೆಮ್ಮನು ತೋರುವ ಜಗದಯನೆ || ಪ || ಕ್ಷೀರಶರಧಿ ಸುಕುಮಾರಿಣಿ ಹರಿಸಹ | ಟಾರಿಣಿ ಭುವನ ವಿದಾರಣಿ ರುಕ್ಮಿಣಿ || ಅ ||

ಮಂದಹಾಸ ವಿಜಿತೇಂದು ಕಿರಣೆ | ಗಜ ಮಂದಗಮನೆ ಸಂಕ್ರಂದನ ವಂದಿತೆ ||೧|| ನೀರಜಸಮಪಾಣಿ | ನೀಲಾಲಿಸು | ಕೀರಮಧುರವಾಣಿ || ತಾರಹಾರಶೃಂಗಾರತ ರಂಗಿಣಿ - ಮಾರಜನನಿಕಂಸಾರಿಯರಾಣಿ || ೨ || ನೀಲಭುಜಗವೇಣಿ - ನೀನೇಗತಿ ಪಾಲಿಸುಕಲ್ಯಾಣಿ || ಲೀಲೆಯಿಂದ ವನ ಮಾಲಿಯುರದಿ ನಿತ್ಯಾಲಯಗೈದಿಹ ಬಾಲೆ ವರದನುತೆ || ೩ ||

92. ರಾಗ—ಭೈರವಿ—ಆದಿ,

ನಂಬಿದೆ ನಿನ್ನ ಪಾದಾಂಬುಜಯುಗಳವ - ಶಂಬರಾರಿಜನನಿ ||ಪ|| ಬೆಂಬಿಡ ದೆನ್ನಹೃದಂಬುಜದೊಳಗವಲಂಬಿಸಿಸಲಹುಮದಂಬೆ ಸನಾತನಿ || ಅ ||ಅಂಬುಜಮುಖಿ ....ಚಿಕುರೆ ಶರ ದಂಬುಜದಳನಯನೆ || ಕಂಬುಕಂಠಿಕನಕಾಂಬರೆ ಮದಕರಿ, ಕುಂಭ ಪಯೋಧರೆ, ಬಿಂಬಫಲಾಧರೆ || ೧ || ಕರ್ಣದೊಳೆಸೆವಸು ವರ್ಣವಿಡಿದ ಪೊಸ - ರನ್ನದೊಡವೆಗಳ || ಮನ್ನಿಸುವಂತಿದೆ ಪೂರ್ಣಕಟಾಕ್ಷವು | ಕನ್ನಡಿಕದಪಿನ ರನ್ನೆ ಗುಣಾರ್ಣವೆ || ೨ || ಮಾಲತಿಮಲ್ಲಿಗೆ ಮಾಲೆಯಿಂದೊಪ್ಪುವ| ನೀಲಭುಜಗವೇಣಿ || ಲೀಲೆಯಿಂದ ಶಾರ್ದೂಲ ಮಹೀಂದ್ರದೊಳಾಲಯ ಗೈದಲನೋಲಮಂಗಾಮಣೆ||೩||

93. ಜಾವಡಿ.

ಪಾಲಿಸೆನ್ನ ಶ್ರೀಲೋಲ ಕೃಪಾಳೋ|| ಬಾಲಕನುಕ್ತಿಯ ಲಾಲಿಸಿಕೇಳೋ||ಪ|| ಕಾರಾಗಾರ ಶರೀರದಯುಗಳ - ದಾರಾಪತ್ಯದ ದಾರಿಯನಿಗಳ || ೧ || ಆರುಮಂದಿ ಒಲು ಶೂರರು ಖಳರು | ಚೋರರು ಚಿತ್ತವಹಾರಿಸುತಿಹರು || ೨ || ತನುಸಂಬಂ ಧದ ಜನರರ್ಥಿಯಲಿ | ಕೊನೆವರು ದುರ್ಮಾರ್ಗವನು ಪೋಲುತಲಿ || ೩ || ತಾಪತ್ರಯ್ಯ ಪರಿ ತಾಪದಬೇಗೆ | ಈಪರಿನೋಜನ ಶ್ರೀಪತಿಹೇಗೆ || ೩ || ಕರುಣಾದಿಶ್ರೀವುಲಿ ಗಿರಿ ಯೊಳಿರುವನೆ | ಶರಣರ ಪೊರೆಯುವ | ವರದವಿಠಲನೆ ||

94. ರಾಗ—ಕೇತಾರಗೌಳ

ತನುವೆನ್ನದು ಚೇತನವೆನ್ನದು - ಎಂದು - ಅನುದಿನ ಪೋಷಣೆಯನುಮಾ ಡಿದೆ ಹರಿ || ಪ || ಚಿನುಮಯ ನಿನ್ನನು - ನೆನೆವೆನೆಂದರೆಮನ - ತನುಮಧ್ಯೆಯರತನು ವಿನೊಳಿರುತಿಹುದು| ಅನಘನಿನ್ನನು ನೋಡುವೆನಾನೆನ್ನಲು ದೃಷ್ಟಿ| ಕನಕಾಂಗಿಯರ ಕುಂಭಸ್ತನದಮೇಲಿಹುದಯ್ಯ || ೧ || ಚರಣದ ಪೂಜೆಯೊಳಿರುವೆನೆಂದರೆಕರ ವೆರಡು ಕೋಮಲೆಯರ ನರಸುವುವು | ಹರಿಕಥಾಶ್ರವಣದೊಳಿರದೆ ಈ ಕಿವಿಗಳು |

ಹರಿಣಾಕ್ಷಿಯರಕಂಠ ಸ್ವರಕೆ ಮೋಹಿಪವಯ್ಯ ॥ ೨ ॥ ದುರಿತದೂರನ ನಾಮ ಸ್ಮರಿಸದು ನಾಲಿಗೆ, ಸರಸಿಜಾಕ್ಷಿಯರೊಳು ಸರಸೋಕ್ತಿಪಡೆದು ॥ ಚರಣಶ್ರೀ ತುಳಸಿಯ ನರಿಯದೆ ನಾಸಿಕ, ತರುಣಿಯು ಮೈಗಂಪನರಸಿ ಹಿಗ್ಗುವದಯ್ಯ ॥ ೩ ॥ ನಿನ್ನಂಘ್ರಿಗೆರಗದೆ ಕುನ್ನಿಶರೀರವಿದುನ್ನತಸ್ತನವುಳ್ಳ ಕನ್ನೆಯರೋಳ್ ॥ ತನ್ನ ಸುರತಸುಖವನ್ನೆ ಚಿಂತಿಸುವದು | ಯನ್ನಾಧೀನದೊಳಿಲ್ಲ ನೀನೇ ಬಲ್ಲಿ ॥ ೪ ॥ ಎರವಿನ ಸಿರಿಯಂತೆ ಕರಣಕಳೇವರ ಬರಿದೆನನ್ನದುಎಂದು ಮೆರೆದೆ ನಾನು ॥ ಹರಿ ನಿನ್ನದೇ ಸರಿ ದುರಿತಸುಕೃತಕೆನ್ನ ಗುರಿಮಾಡದೆಕಾಯೋ ವರದ ವಿಠಲ ಕೃಷ್ಣ ॥೫॥

95. ರಾಗ—ಅಠಾಣ.

ಶ್ರೀವೆಂಕಟೇಶಮಾಂ ಪಾಲಯ, ಸುಗುಣಾಲಯ ॥ ಪ ॥ ದೇವದೇವಶಿಖಾಮಣಿ | ಸೇವಕಸುಚಿಂತಾಮಣಿ ॥ ಅ ॥ ಕಮಲಲೋಚನ ಭಕ್ತ ಶಮಲ (?) ಲೋಚನಶಕ್ತ ॥ ವಿಮಲ ಚರಿತಪೂರ - ಕಮನೀಯಶರೀರ ॥೨॥ ಧೀರ ದಶರಥ ಕುಮಾರಾ ಬುಧಜನವಿಹಾರ | ವೀರಹರಿ ಪರಿವಾರ ಕ್ರೂರಾಸುರವಿದಾರ ॥ ೨ ॥ ಸರಸಿಜಾಸನನುತ ಸುರಮುನಿಸೇವಿತ, | ಹರಿಣಾರಿಧರಾಗಾರ ವರದ ವಿಠಲಾಕಾರ ॥ ೩ ॥

96. ರಾಗ—ಸಾಕೀ.

ಶ್ರೀಕರ ಮಾಗಿಹ ಗೋಕುಲದಲಿಕರು ಣಾಕರ ಕೃಷ್ಣನು ನೆಲಸಿರಲು ॥ ನಾಕದಸಿರಿಯ ನಿರಾಕರಿಸುವ ಸಿರಿತಾಹರ್ಷದೊಳು ॥ ೧ ॥ ರಾವಣನನುಜೆಯು ರಾಘವ ದೇವನ ಲಾವಣ್ಯಕೆ ಮೋಹಿಸಿ ಮನದಿ ॥ ಭಾವಜನಸ್ತ್ರದ ಬಾಧೆಯಿಂದ ಪತಿ ಭಾವದಿ ನೋಡುತ ಭರದಿ ॥೨॥ ಕಾಮಿಸಿಕಾಡಲು ಕಾಕುತ್ಸ್ಥನುಬಲ ರಾಮ ಸಹಜನವತಾರದಲಿ ॥ ಕಾಮಿತವಹುದೆನೆ ಕಾಮಿನಿರಾಧಾ ನಾಮದಿ ಜನಿಸಿರೆ ಗೋಕುಲದಿ ॥ ೩ ॥ ಒಂದಾನೊಂದಿನ ನಂದಾದಿಗಳಾ ನಂದಾನ್ವಿತಮತಿ ವೃತ್ತಿಯಲಿ ॥ ಒಂದಾಗಿ ಧರಾ ವೃಂದಾರಕರನು ವಿಂದಾರಾಧಿಪ ಭಕ್ತಿಯಲಿ ॥ ೪ ॥ ಬಂದರುವರಕಾಳಿಂದಿಯತೀರದಿ ನಂದನದಂತಿಹ ವನದೆಡೆಗೆ ॥ ಬಂಧುಗಳೊಂದಿಗೆ ಭಂಡಿಯನೇರಿ ಮುಕುಂದನ ಧ್ಯಾನಿಸುತಡಿಗಡಿಗೆ ॥ ೫ ॥ ಅಲ್ಲಿಗೆ ಭೂಸುರರೆಲ್ಲ ಬರಲು ಮಿತಿಯಿಲ್ಲದೆ ಗೋಧನ ದಾನದಲಿ ॥ ಬಲ್ಲಿದ ಭೋಜನದಲ್ಲಿ ದಣಿಸಿಸುಖದಲ್ಲಿ ರುತಿರಲಾಸಮಯದಲಿ ॥ ೬ ॥ ಅಸ್ತ್ರಮಹೀಧರ ಮಸ್ತಕವನು ಸುಜನಸ್ತುತದಿನಕರ

ನೈದಿರಲು | ನಿಸ್ತುಲತಮದಿ ಸಮಸ್ತರ ದೃಷ್ಟಿಗಳಸ್ತಗೊಳಿಸೆಜನಭಯಗೊಳಲು ||೭|| ನಂದನು ತನ್ನಯ ನಂದನನಂಬುವನೆಂದು ರಾಧೆಯತಾ ನೋಡಿ || ಕಂದನ ನೀನೇ ಮಂದಿರಕ್ಕೈದಿಸು | ಎಂದರೆ ಬಂದಳು ನಗೆಗೂಡಿ ||೮|| ಕಂದ ಬಾರೋ ಗೋವಿಂದಬಾ ಯದುನಂದನಬಾ ಕಮಲಾಸನನ || ತಂದೆಬಾರೋನಿಜ ಮಂದಿರದೊಳಗಾ ನಂದವತೋರುವೆ ಶಶಿವದನಾ ||೯|| ಆಡಿಸುವೆನುನೀನಾಡು ವಾಟಗಳ ನೋಡಿಸುವೆನು ನೀನೊಲಿದುದನು | ಬೇಡಿದುದೆಲ್ಲವ ನೀಡುವೆಸಂಶಯ ಬೇಡನಿನ್ನನೆ ಕೂಡಿಹೆನು ||೧೦|| ರಾಧೆಯನುಡಿಗಳ ನಾದರಿಸುತ ಮಧುಸೂದನ ತನ್ನಯ ಮನದೊಳಗೆ || ಮೋದಪಡಿಸಲನುವಾದನುಭಕ್ತಾ ವೋದಚರಿತ್ರನು ಕಾಮಿನಿಗೆ ||೧೧|| ಮುತ್ತನಿತ್ತು ಬಲು ಮುದ್ದಿಸಿ ಬಾಲಕ ನೆತ್ತಿಕೊಂಡು ಬಲು ನಡಗರದಿ| ವೃತ್ತಕುಚಗಳಿಂದೊತ್ತಿಮನೋಭವ ನರ್ಥಿಗೆ ಸೊಕ್ಕುವ ಕಾತರದಿ||೧೨|| ವರಪುಲಗಿರಿದೊರೆ ವರದವಿಠಲನು ಕರುಣನಾದೊಡೀಗಲೇ ಬೆರೆದು || ಸ್ಮರಶರದಾರ್ತಿಯ ಪರಿಹರಿಸುವೆನೆಂಧರುಷದಿ ಬರುತಿರ್ದಳು ನಲಿದು ||೧೩||

97. ರಾಗ—ಮಧ್ಯಮಾವತಿ.

ಪೀತಾಂಬರಧರ ನಮೋ ನಮೋ ವನ | ಜಾತಾಂಬಕತೇ ನಮೋ ನಮೋ || ಪ || ಖ್ಯಾತಚರಿತ್ರವಿ ಧಾತೃಜನಕ ಪುರು ಹೂತಸಹೋದರ ನಮೋ ನಮೋ||ಅ|| ಜಾತರಹಿತ ಜಲಜಾತಭವಾರ್ಚಿತ ಪಾಥೋನಿಧಿಶಯ ನಮೋ ನಮೋ || ಪೀತದ ನುಜ (?) ಭವಭೀತಿಧರಾನತ (?) ಶ್ರೀತರುಣೀಪ್ರಿಯ ನಮೋ ನಮೋ ||೧|| ಶಾಮಳ ನೀರದ ಕೋಮಳ ದೇಹನಿ ರಾಮಯ ನಿರ್ಮಲ ನಮೋ ನಮೋ|| ಕಾಮ ಜನಕ ಬಲರಾಮ ಸಹಜ ಸಂಗ್ರಾಮ ಮುಜ್ವಲ ನಮೋ ನಮೋ ||೨|| ನಂದ ಗೋಪ ವರನಂದನ ಲಲನಾನಂದನ ಸುಂದರ ನಮೋ ನಮೋ || ಕುಂದರದನಶರ ದಿಂದುವದನ ಗೋವಿಂದಜನಾರ್ದನ ನಮೋ ನಮೋ ||೩|| ಹಂಸಡಿಂಬಕ ಬಕ ಕಂಸಪ್ರಮುಖನೃ ಶಂಸವಿಹಿಂಸಕ ನಮೋ ನಮೋ || ಸಂಸರದಘವಿಧ್ವಂಸಕ ಪರ ಮಹಂಸೋತ್ತಂಸಕ ನಮೋ ನಮೋ ||೪|| ಶರಣಜನಾವನ ಶಶಿಕುಲಪಾವನ ಗರುಡಗಮನತೇ ನಮೋ ನಮೋ|| ತರುಗಣಸಂಕುಲ ವರವ್ಯಾಘ್ರಾಚಲವರದ ವಿಠಲತೇ ನಮೋ ನಮೋ ||೫||

98. ರಾಗ.

ಹರಿ ನೀಲ ಸದೃಶ ನೀಲಕನಕಚೇಲ ಲೀಲಯಾ | ಪುಲಿಶೈಲರಚಿತಲೀಲರಮಾ ಲೋಲಪಾಲಯಾ || ಪ || ಶರದಿಂದುವದನ - ಕುಂದರದನ ನಂದನಂದನಾ | ಅರ

ಬಿಂದನಯನ, ಸಿಂಧುಶಯನ ವಂದಿ ಚಂದನಾ ||೧|| ಯದುರಾಜಕಲ್ಪಭೋಜದೇವ ರಾಜಪೂಜಿತ | ಕಲಿರಾಜರಾಜರಾಜ ಸನುವಿರಾಜ ರಾಜಿತ || ೨ || ಘನಮುಖಿತ ಪಟುಲಯರಣ ಚಟುಲಚರಣ ಪಾಟಲಾ | ಕಲಿವರದ ವಿಮಲಚರಿತ ವಿಪುಲ ವರದ ವಿಠಲ || ೩ ||

99. ರಾಗಾ.

ಪಾಲಿಸೆನ್ನನು ಬಾಲಸಖೀಲೆ | ಪಾಲಿತ ಸುರ ನರ ಜಾಲಸುಶೀಲೆ || ಕ್ಷೀರಶರಧಿ ಸುಕುಮಾರಿಣಿ ಲಕ್ಷ್ಮೀ | ವಾರಿಜಮುಖಿ ಸಿತ ವಾರಿರುಹಾಕ್ಷಿ || ೧ || ಅಂಬೆ ಭುವನ ಕುಟುಂಬೆ ರಮಾಂಬೆ | ನಂಬಿ ಭಜಿಸುವುದು ಡಾಂಭಿಕನೆಂಬೆ ||೨|| ಯುಕ್ತಿಯು ಶಕ್ತಿ ವಿರಕ್ತಿಗಳಿಲ್ಲ | ಉಕ್ತಿಮಾತ್ರದಿಂದ ಭಕ್ತಿಕೊಡೆಲ್ಲ || ೩ || ಜಯಕರುಣಾಲಯೆ | ಜಯಮುನಿ ವಲಯೆ | ಜಯನಿಸ್ತುಲಯೆ | ಜನನುತಿಗೊಲಿಯೆ | || ೪ || ಧರೆಯೊಳುತ್ತಮಪುಲಿಗಿರಿಯೊಳಿರುವನೆ | ಶರಣರ ಪೊರೆಯುವ ವರದ ವಿಠಲನೆ || ೫ ||

100 ರಾಗಾ.

ಪರಮ ಪುರುಷ ಪರೇಶ ಪಾವನ ಪರಮ ಮುನಿಜನ ಪಾಲನ | ಶರಧಿಶಯನ ವಿಹಂಗವಾಹನ ಶಾರದಾಂಬುಜಲೋಚನಾ || ೧ || ವಾಸುದೇವ ವಿರಿಂಚಿ ವಂದಿತ ವಾಸವಾದಿ ಸುರಾರ್ಚಿತ | ವಾಸುಕಿಪ್ರಿಯ ಭೂಷಭಾವಿತ ವಾಸರೇಶಕುಲೋದಿತ || ೨ || ಶರಣ ಜನರಘುಹರಣ ಸೌಖ್ಯವಿತರಣ ಶುಭಗುಣಸಾಗರ || ವರದ ಪುಲಿಗಿರಿ ವಾಸವೆಂಕಟ ವರದ ವಿಠಲ ದಯಾಕರ || ೩ ||

101 ರಾಗ—(ಏನುಫಲಾ ರಾಮ-ಹಾವಿಗೆಹಾಲೆರ)

ದೀನನ ಸೇರಿದ ರೇನು ಫಲ (ರಾಮ) - ಗುಣಹೀನನ ಸೇರಿದರೇನುಫಲ ||ಪ|| ಅಕ್ಕರೆಯಿಲ್ಲದ ರಕ್ಕಸಿ ಯುದರದಿ, ಮಕ್ಕಳು ಜನಿಸಿದರೇನು ಫಲ | ದುಃಖಿಪಜನರನು ಲೆಕ್ಕಿಸ ದಾತನ ಬಕ್ಕಲು ತನದಿಂದೇನು ಫಲ || ೧ || ಜನಿಸಿದ ಮಕ್ಕಳು ಜೀವಿಸದಿದ್ದರೆ ಜನನೀ ಜನಕರಿಗೇನು ಫಲ || ಕನಸಿಲಿ ಕಾಣುವ ಧನಕಂಗಳ ನಂಬಿದಮನುಜರಿಗೇನು ಫಲ || ೨ || ಕರೆಯದ ಪಶುವನು ನೆರೆಯದ ಸೊಸೆಯನು ಅರಿಯದೆ ಕೊಂಡವಗೇನು ಫಲ| ಹಿರಿಯರ ನಡತೆಯ ನಡೆಯಿಸದಾತನು ಹಿರಿಯವನಾಗಿರ ಲೇನು ಫಲ || ೩ || ಗಂಡನ ದೂರುತ ಮಿಂಡನ ಸೇರುವ ಹೆಂಡತಿಯಿರಲೇ

ನುಫಲ | ಹೆಂಡಿರ ಮಕ್ಕಳ ದಂಡಿಸದಾತನ ಗಂಡಸುತನದಿಂದೇನು ಫಲ || ೪ || ವರಸಿಲ್ಲದವರ ತರುಣಿಯು ನಾನಾ-ತೆರದಲಿ ಸಿಂಗರಿಸಿದರೇನುಫಲ | ವರದ ವಿಠಲ ಪುಲಿಗಿರಿ ಪತಿಗಲ್ಲದ ಮಿಸರು ಪುಣ್ಯದಿಂದೇನು ಫಲ || ೫ ||

102. ರಾಗಾ—

ಕರುಣದಿ ರಕ್ಷಿಸುಯನ್ನನು-ಪುಲಿಗಿರಿ ಲೋಲ ನಂಬಿದೆ ನಿನ್ನನು | ಕರುಣದಿ ರಕ್ಷಿಸು ಚರಣ ಸೇವಕಭಯ ಹರಣ ಸೌಖ್ಯವಿತರಣ ನಿನ್ನಯ ಚರಣ ಯುಗಳದಿ ಶರಣುಹೊಕ್ಕೆನು ||ಪ|| ಯತಿಗಣ ನೇಮವನರಿಯದ-ಸ್ವರ-ಗತಿತಾಳ-ಲಯಬಂಧ ತಿಳಿಯದ|ಶ್ರುತಿನುತನಿಮ್ಮನುಪೊಗಳದ-ನಿಮ್ಮಶ್ರುತಿಗಳಮಹಿಮೆಯಕೇಳದ||ಮತಿಹೀನನಾದೆನ್ನಮತಿಗೆ ಗೋಚರನಾಗಿ ಶ್ರುತಿಗೋಚರ ನಿಮ್ಮ ಸ್ತುತಿಯ ಅನುಭವವಿತ್ತು|| ಪತಿತಪಾವನ ಪುಲಿಗಿರೀಶನೆ ಪತಿತನುದ್ಧರಿಸಂತೆ| ಗತಿವಿಹೀನನಗೆ ಪಥವತೋರಿಸಿ ಸದ್ಗತಿಯಪಾಲಿಸುವಂತೆ|| ಗತಿಮತಿಗಳೇನೇನು ಅರಿಯದ ಪತಿತನೆನ್ನನು ಭವ ಜಲದಿ ಮಧ್ಯದಿ || ೧ || ಕುರುರಾಯ ಕೌರವ ಸಭೆಯಲ್ಲಿ-ಭೀಷ್ಮ-ಗುರು ದ್ರೋಣ ಕೃಪರ ಮುಂದೆಡೆಯಲ್ಲಿ || ಧುರಧೀರ ಪಾಂಡವರಿದಿರಲ್ಲಿ|ಬಲುದುರುಳ ದುಶ್ಯಾಸನನ ಕೈಯಲ್ಲಿ || ತರುಣಿಪಾಂಚಾಲಿಯ ಕರಸಿ ಸೀರೆಯ ಸೆಳೆದು ಕರೆ ಕರೆ ಪಡಿಸಲೆಂದೆನುತಲು ಜಗ್ಗಿಸಲು || ಪರಮಾತ್ಮ ಪರಿಪೂರ್ಣ ಕರುಣಾಳು ನಿನ್ನನೇ | ಮರೆಹೊಕ್ಕೆವೊರೆಯೆಂದು ಮೊರೆಯಿಡ ಲಾಕ್ಷಣ | ತರುಣಿಗಕ್ಷಯವಸನವನಿತ್ತ ಶರಣಜನ ಸಂಸಾರ ಶ್ರೀಹರಿ ||ಕರು || ೨ || ಕರಿರಾಜ ನಕ್ರನಬಾಯೊಳು-ಸಿಲುಕಿ-ನರಳಿ ಸಾವಿರ ವರುಷ ಜಲದೊಳು | ಶರಣರಕಾಣದೆ ಜಗದೊಳು| ನಿನ್ನ ಸ್ಮರಣೆ ಮಾಡುತದೃಢಮನದೊಳು|| ಪರಮಪುರುಷ ಪುರುಷೋತ್ತಮ ನಿರುಪಮ ಪರಮೇಶವಂದ್ಯ ಪರಾತ್ಪರ ಪುಲಿಗಿರಿ || ಧೊರೆಯೆ ಕರುಣಿಸೆನ್ನುತ ಕರಿಮೊರೆಯಿಡಲಾಗಬೇಗ, ಕರುಣದಿಂ ಮೊರೆಕೇಳಿ ಗರುಡನ ಪೆಗಲೇರಿಸಾರಿ | ಕರದ ಚಕ್ರದಿ ಸೀಳಿ ನಕ್ರನ ಕರಿಯ ಪೊರೆದಾ ವರದ ವಿಠಲ || ೩ ||

ಇತಿ ಪೂರ್ವಾರ್ಧ.

|| ಸನ್ಮಾರ್ಗದರ್ಶಿ ||

ಬಾಲ-ಬಾಲೆಯರ ಸೌಶೀಲ್ಯಾಭಿವೃದ್ಧಿಗಾಗಿ ಪ್ರಕಟವಾಗುತ್ತಿರುವ

ತಿಳಿಗನ್ನಡನುಡಿಯ ಮಾಸಪತ್ರಿಕೆ.

ಸರಿಯಾದ ಪಾಯಶುದ್ಧಿ (ಅಸ್ತಿವಾರ) ಯಿಲ್ಲದ ಕಟ್ಟಡದಂತೆ, ಮಾನವನ ಅಭಿವೃದ್ಧಿಗೆ ಆಧಾರವೆನ್ನಿಸುವ ಭದ್ರವಾದ ಮನಶ್ಶುದ್ಧಿಯನ್ನುಂಟುಮಾಡದ ಈಗಿನ ಶಿಕ್ಷಣ, ವ್ಯಾಸಂಗಗಳಲ್ಲಿರತಕ್ಕ ಕೊರತೆಗಳನ್ನೂ ಅದರಿಂದುಂಟಾಗುವ ವೃಥಾ ಶ್ರಮ ನಷ್ಟಗಳನ್ನೂ ನಾಗರಿಕತೆ ನವನಾಗರಿಕತೆ ಯೆಂದು ಭ್ರಮಿಸಿ ವಿವಿಧ ವಿಲಾಸಾದಿಗಳಿಂದ ದುರ್ಗತಿಗಿಳಿಯುತ್ತ ಬರುತ್ತಿರುವ ವಿದ್ಯಾರ್ಥಿಗಳ ಭವಣೆಯನ್ನೂ ಆಮೂಲಕ ಅವರ ತಾಯ್ತಂದೆಯರು ಪಡುವ ಕ್ಲೇಶ ಪರಿತಾಪಗಳನ್ನೂ ಕುರಿತು ಪತ್ರವ್ಯಾಸಂಗ, ಸಂಭಾಷಣ, ಜೀವನಚರಿತೆ, ಆತ್ಮವೃತ್ತ, ಮಹಾಪುರುಷರ ಉದಾಹರಣೆ, ಅನುಭವಿಕರ, ಪಂಡಿತರ ಸದುಕ್ತಿಗಳನ್ನೊಳಕೊಂಡ ಉತ್ತಮತರದ ಭಾಷಾಶೈಲಿಯಿಂದ ಹೃದಯಂಗಮವಾದ ಲೇಖನಗಳನ್ನೂ ಭಕ್ತಿರಸಪರಿಪೂರ್ಣವಾದ ದೇವರ ನಾಮಗಳನ್ನೂ ಸಂದರ್ಭಾನುಸಾರವಾಗಿ ಪುಸ್ತಕವಿಮರ್ಶೆಯನ್ನೂ ಪ್ರಕಟಿಸಿ ಯಥೋಚಿತವಾಗಿ ಬಾಲ-ಬಾಲೆಯರ ಏಳ್ಗೆಗೆ ಸಹಕಾರಿಯಾಗುವ ಉದ್ದೇಶದಿಂದ ಜನ್ಮವೆತ್ತಿರುವ ಮಾಸಪತ್ರಿಕೆ. ದ್ವಿತೀಯ ವರ್ಷದಿಂದ ಅತ್ಯುತ್ತಮಸುಧಾರಣೆಯನ್ನು ಹೊಂದಿರುವುದು. ದ್ವಿತೀಯ ವರ್ಷಾರಂಭ ಕಾರ್ತೀಕದಿಂದ.—

ಬಿಡಿಸಂಚಿಕೆಗೆ 0–3–6. ವಾರ್ಷಿಕಚಂದಾ 2–8–0. ವಿದ್ಯಾರ್ಥಿಗಳಿಗೆ 1–8–0

ಕಾರ್ಯದರ್ಶಿ ಸನ್ಮಾರ್ಗದರ್ಶಿ, ನಂಜನಗೂಡು.

ಕೊಳಲ ಗಾನ.

ಅಚ್ಯುತ ! ಪ್ರಭುವರ್ಯ ! ಏನು ಚಿತ್ರವೋ ! ಆಹ !
ಹುಚ್ಚು ಹಿಡಿಸಿತು ನಿನ್ನ ಕೊಳಲಗಾನ ||
ಕಿಚ್ಚು ಕಲ್ಲುಗಳೆಲ್ಲ ಕರಗಿ ನೀರಾದುವು |
ಅಚ್ಚರಿ ! ಮುನಿಗಳು ಮರುಳಾದರು || ೧ ||

ಜಡವಸ್ತುಗಳಿಗೆಲ್ಲ ಜ್ಞಾನವುಂಟಾಯಿತು |
ಗಿಡಮರವೆಲ್ಲವೂ ಗೋಪರಿಂದ –
ಒಡಗೂಡಿ ಹೂ ತುಂಬಿ ಕಿಲಿಕಿಲಿ ನಗುತಲಿ |
ಕೊಡುತಿದೆ ಮಕರಂದ ಮಾಧುರ್ಯವ || ೨ ||

ಕಾಳಾಹಿ ಕಕ್ಕುವುದು ಕರ್ಕೋಟವಿಷವಲ್ಲ |
ಕಮನೀಯ ವಮೃತವ ಕರೆಯುತಿದೆ ||
ಕ್ರೂರ ವ್ಯಾಘ್ರನು ತಾನು ಜಾತಿವೈರವ ಬಿಟ್ಟು |
ಗೋವಿನ ಸಂಗಡ ನಲಿಯುತಿದೆ || ೩ ||

ಒಂದೊಂದು ಪೊಂದಿಹುದು ಈಪರಿಯ ಹೊಸರೂಪ |
ಚೆಂದದಿಂ ಕಾಂಬುದು ಪುಸಿಯಲ್ಲ ||
ಸುಂದರಾಕಾರನೆ ನೀನಂತೂ ಸರ್ವರೊಳ್ ||
ಒಂದಾಗಿ ಪರಬ್ರಹ್ಮನಾದೆಯಾಹ || ೪ ||

ನಂದನಂದನ ! ಕಂದ ! ಮುದ್ದುಮೋಹನಕಂದ !
ಅರವಿಂದ ನಾಥ ! ಮುಕುಂದ !
ಇಂದೀವರಾಕ್ಷನೆ ಸುಂದರವಿಗ್ರಹ |
ಇಂದ್ರಾದಿ ವಂದಿತ ಗೋವಿಂದ || ೫ ||

ಎಚ್. ಚೆನ್ನಕೇಶವ ಅಯ್ಯಂಗಾರ್.

|| ಶ್ರೀಃ ||



ನವೀನ ನೀರದ ಶ್ಯಾಮಂ ನೀಲೇಂದೀವರಲೋಚನಂ |
ವಲ್ಲವೀ ನಂದನಂ ವಂದೇ ಕೃಷ್ಣಂ ಗೋಪಾಲರೂಪಿಣಂ ||